ಓದು, ಬರಹ ಬಲ್ಲವರ ಮಾಸಪತ್ರಿಕೆ

- ಕನ್ನಡದಲ್ಲಿ ಜೀವನಚರಿತ್ರೆಗಳು : ಕಳೆದ ೨೫ ವರ್ಷಗಳಲ್ಲಿ
- ಮೆ.ಲೆ.ಸು ಮೆಕಾಷಿ ಸಾಹೇಬರವರ ಚರಿತ್ರೆ
- ಶ್ರೀ ಭಾಗೀರತಿಬಾಯಿ ಪುರಾಣಿಕರು
- ಮೈಸೂರು ವಾಸುದೇವಾಚಾರ್ಯ
- ಬೆಂಗಳೂರು ಪುಟ್ಟಯ್ಯ ರಾಧಾಕೃಷ್ಣ
- ಕಥೆಗಾರ ರಾಘವೇಂದ್ರ ಖಾಸನೀಸ
- ಗ್ರಂಥಪಾಲಕ ಖಾಸನೀಸರಿಂದ ಪುಸ್ತಕಮನೆ ಭೇಟಿ
- ಮೂವತ್ತು ವರ್ಷದ ಹಿಂದಿನ ಕೆಲ ಬರಹಗಾರರು

೧೦

ಜೂನ್ ೨೦೦೭

ಸಂಪಾದಕ
ಪುಸ್ತಕಮನೆ ಹರಿಹರಪ್ರಿಯ

ಪುಸ್ತಕಮನೆ

ಸಂಚಿಕೆ : ೧೦ ಓದು, ಬರಹ ಬಲ್ಲವರ ಮಾಸಪತ್ರಿಕೆ ಜೂನ್ ೨೦೦೭

ಒಳಪುಟಗಳಲ್ಲಿ....

ಎರಡನೇ ವರ್ಷದ ಚಂದಾದಾರರ ಗಮನಕ್ಕೆ

(ಸಂಚಿಕೆ 13 ರಿಂದ 24ರ ವರೆಗೆ)

ಹಳಬರಿಗೆ (ಆಗಸ್ಟ್ ಒಳಗೇ ಕಳಿಸಲು ಮನವಿ) ರೂ. 250/–

ಹೊಸಬರಿಗೆ (ಈವರೆಗಿನ 12 ಸಂಚಿಕೆಗಳನ್ನೂ ಸೇರಿಸಿ) ರೂ. 500/–

ಬೆಂಗಳೂರಿನ ಹೊರಗಿನವರು ಹಣವನ್ನು ಎಂ.ಓ./ಡಿ.ಡಿ.ಗಳಲ್ಲಿ ಮಾತ್ರ 'ಪುಸ್ತಕಮನೆ' ಹೆಸರಿಗೆ ಕಳಿಸಿಕೊಡಬೇಕಾಗಿ ವಿನಂತಿ

ಬಿಡಿ ಸಂಚಿಕೆ ಸಿಗುವುದಿಲ್ಲ

ಪ್ರಕಾಶನ

ಪುಸ್ತಕಮನೆ

702, ಬಿ.ಸಿ.ಸಿ.ಹೆಚ್.ಎಸ್. ಲೇಔಟ್, ವಾಜರಹಳ್ಳಿ, ತಲಘಟ್ಟಪುರ, ಬೆಂಗಳೂರು 560062

ಮೊಬೈಲ್ : 9845867184 / 9242221506

e-mail : harihararapriya@gmail.com pustakamane@yahoo.com

ಮುದ್ರಣ

ಇಳಾ ಮುದ್ರಣ, ನಂ. 36, 40 ಅಡಿ ರಸ್ತೆ, ರಾಘವನಗರ, ನ್ಯೂಟಿಂಬರ್‌ಯಾರ್ಡ್ ಲೇಔಟ್ ಬೆಂಗಳೂರು 560 026. ದೂರವಾಣಿ : 32715773 / 26757159

ಕನ್ನಡದಲ್ಲಿ ಜೀವನಚರಿತ್ರೆಗಳು : ಕಳೆದ ೨೫ ವರ್ಷಗಳಲ್ಲಿ

ಎಂ.ಜಿ. ಕೃಷ್ಣಮೂರ್ತಿ

ಕನ್ನಡ ನವ್ಯ ಸಾಹಿತ್ಯವನ್ನು ಒಂದು ಪಂಥ, ಚಳುವಳಿ, ಗುಂಪು - ಎಂದು ಗುರುತಿಸುವುದಾದರೆ, ಅದನ್ನು ಎತ್ತಿಹಿಡಿದ ಪ್ರಮುಖ ವಿಮರ್ಶಕರು ಕೆ. ನರಸಿಂಹಮೂರ್ತಿ, ರಾಜೀವ ತಾರಾನಾಥ, ಬಿ. ದಾಮೋದರರಾವ್, ಜಿ.ಎಚ್. ನಾಯಕ, ಸುರೇಂದ್ರನಾಥ ಮಿಣಜಿಗಿ ಅವರು. ಇವರಲ್ಲಿಯೇ ಮುಖ್ಯರು ದಿವಂಗತ ಎಂ.ಜಿ. ಕೃಷ್ಣಮೂರ್ತಿಯವರು. ತಮ್ಮ ಕನ್ನಡದ ಒಂದೇ ಪುಸ್ತಕ "ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು" (೧೯೭೦) ಮತ್ತೊಮ್ಮೆ ಒಂದೆರಡು ಲೇಖನಗಳನ್ನು ಒಳಗೊಂಡು ಎಂ.ಜಿ.ಕೆ.ಯವರ ಸಮಗ್ರ ಲೇಖನಗಳು "ಕೃತಿ ಸಂಸ್ಕೃತಿ" (೧೯೯೩)ಯಾಗಿ ಮುದ್ರಣಗೊಂಡಿತು. ಆದರೂ ಗೆಳೆಯ ಎಚ್.ಎಸ್. ವೆಂಕಟೇಶಮೂರ್ತಿ ಅನುವಾದಿಸಿ, "ಅಂಕಣ" ಪತ್ರಿಕೆ ೧೯೮೦ ಜನವರಿ, ಸಂಪುಟ ೧, ಸಂಚಿಕೆ ೨ರಲ್ಲಿ ಪ್ರಕಟವಾಗಿರುವ 'ಕನ್ನಡದಲ್ಲಿ ಜೀವನಚರಿತ್ರೆಗಳು : ಕಳೆದ ೨೫ ವರ್ಷಗಳಲ್ಲಿ' ಲೇಖನ ಬಿಟ್ಟು ಹೋದದ್ದು ಹೇಗೆ? ಹೀಗೇ ಇನ್ನೆಷ್ಟು ಲೇಖನಗಳು ಸಮಗ್ರದಿಂದ ಹೊರಗುಳಿದಿವೆಯೋ? ಅಂತೆಯೇ ಈ ಲೇಖನದಲ್ಲಿ ಎಂ.ಜಿ.ಕೆ. ಕಣ್ಮುಂದೆ ಇರಿಸಿಕೊಂಡ ಆ ೪೦ ಕೃತಿಗಳು ಯಾವುವೊ? ೧೯೪೯ರಲ್ಲಿಯೇ ಪ್ರಕಟವಾದ ಬಿ.ಪಿ. ರಾಧಾಕೃಷ್ಣರ 'ನನ್ನ ತಂದೆ'ಯನ್ನು ಎಂ.ಜಿ.ಕೆ. ಗಮನಿಸಿದ್ದರೊ? ಇಷ್ಟಾಗಿ ಎಂ.ಜಿ.ಕೆ. ಲೇಖನದ ನಂತರ, ಅವರು ನಿರೀಕ್ಷಿಸಿದ ಜೀವನಚರಿತ್ರೆ ಕನ್ನಡದಲ್ಲಿ ಬಂದಿತೊ? ಅಥವಾ ಅದಕ್ಕಿರುವ ಅಡ್ಡಿ ಆತಂಕಗಳು ಏನು? ಈ ಬಗ್ಗೆ ನನ್ನ ಸರೀಕರು ಇನ್ನೂ ಗಂಭೀರವಾಗಿ ಚಿಂತಿಸಲಿಕ್ಕಾಗಿ, ಇಲ್ಲಿ ಮತ್ತೆ ಮುದ್ರಿಸಲಾಗುತ್ತಿದೆ. *ಸಂಪಾದಕ*

ಕನ್ನಡದಲ್ಲಿ ಬಂದಿರುವ ಜೀವನಚರಿತ್ರೆಗಳ ಬಗ್ಗೆ ಮಾತನಾಡುವ ಇಂಥ ಸಂದರ್ಭಗಳಲ್ಲಿ ಭಾಷೆ ಮತ್ತು ಸಾಹಿತ್ಯದ ಪ್ರೀತಿಯಿಂದಾಗಿ ಅದೇ ಭಾಷೆಯ ಒಬ್ಬ ವಿಮರ್ಶಕ ತೀರ ದುಬಾರಿ ಮಾತುಗಳನ್ನು ಹೇಳುವಂತಾಗುವುದು ಸಹಜ. ಆದರೆ ನನಗೆ ಅನ್ನಿಸುವುದು- ಒಬ್ಬ ವಿಮರ್ಶಕ ತನ್ನ ಭಾಷೆಯ ಬರವಣಿಗೆಯ ಮಹತ್ವವನ್ನು ಬೆಲೆಕಟ್ಟಬೇಕಾದ, ಅಷ್ಟೇನೂ ಪ್ರಿಯವಲ್ಲದ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುತ್ತದೆ. ಕನ್ನಡದಲ್ಲಿ ಉಳಿದ ಸಾಹಿತ್ಯ ಪ್ರಕಾರಗಳು ಬೆಳೆದಿರುವ ಮಟ್ಟಕ್ಕೆ ಜೀವನಚರಿತ್ರೆಯ ಸಾಹಿತ್ಯಪ್ರಕಾರ ಬೆಳೆದಿಲ್ಲವೆಂಬ ನನ್ನ ಅಭಿಪ್ರಾಯವನ್ನು ಕನ್ನಡದ ಉಳಿದ ವಿಮರ್ಶಕರು ತೆಗೆದುಹಾಕಲಾರರೆಂದು ಭಾವಿಸುತ್ತೇನೆ. ಒಬ್ಬ ವಿಮರ್ಶಕ ಒಂದು ವಸ್ತುಸ್ಥಿತಿಯನ್ನು ಗುರುತಿಸಿದರಷ್ಟೇ ಸಾಲದು, ಅಂಥ ಸ್ಥಿತಿಯ ಕಾರಣಗಳನ್ನೂ ಕಂಡುಕೊಳ್ಳಬೇಕಾಗುತ್ತದೆ ಎಂದು ನಾನು ನಂಬುವವನಾದುದರಿಂದ, ಕನ್ನಡದಲ್ಲಿ ಕಳೆದ ೨೫ ವರ್ಷಗಳಲ್ಲಿ ಪ್ರಕಟವಾಗಿರುವ ಜೀವನಚರಿತ್ರೆಗಳ ಬಗ್ಗೆ ಚರ್ಚಿಸುವ ಮೂಲಕವೇ ಈ ಸಾಹಿತ್ಯ ಪ್ರಕಾರದ ಹಿಂದುಳಿದಿರುವಿಕೆಗೂ ಕಾರಣಗಳನ್ನು ಕಂಡುಕೊಳ್ಳಬೇಕಾಗುತ್ತದೆ.

ನನಗೆ ಗೊತ್ತಿರುವಂತೆ ಈವರೆಗೆ ಸಮಗ್ರವಾದ ಜೀವನಚರಿತ್ರೆಗಳ ಗ್ರಂಥಸೂಚಿಯನ್ನು ಕನ್ನಡದಲ್ಲಿ ಯಾರೂ ಸಿದ್ಧಪಡಿಸಿಲ್ಲ. ಹೀಗಾಗಿ ಕನ್ನಡದಲ್ಲಿ ಕಳೆದ ೨೫ ವರ್ಷಗಳಲ್ಲಿ ಪ್ರಕಟವಾಗಿರುವ ಎಲ್ಲ ಜೀವನಚರಿತ್ರೆಗಳನ್ನೂ ನಾನು ಓದದಿರುವ ಸಾಧ್ಯತೆ ಇದ್ದೇ ಇದೆ. ನಾನು ಓದಿರುವ ಸುಮಾರು ೪೦

ಜೀವನಚರಿತ್ರೆಗಳನ್ನು ನನ್ನ ಈ ಮುಂದಿನ ಅಭಿಪ್ರಾಯಗಳಿಗೆ ಆಧಾರಗಳಾಗಿವೆ. ಆ ಪುಸ್ತಕಗಳನ್ನು ನನಗೆ ದೊರಕಿಸಿದ ನನ್ನ ಉತ್ಸಾಹೀ ಗೆಳೆಯರು ಕೆಲವರ ಸಹಕಾರಕ್ಕೆ ನಾನು ಇಲ್ಲಿ ಕೃತಜ್ಞತೆ ಹೇಳಲೇಬೇಕು. ಬೇರೆ ಭಾಷೆಗಳಿಂದ ಕನ್ನಡಕ್ಕೆ ಬಂದಿರುವ ಜೀವನಚರಿತ್ರೆಗಳ ಅನುವಾದಗಳನ್ನಾಗಲೀ, ಕನ್ನಡದ ಕೆಲವು ಜನಪ್ರಿಯ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಜೀವನಚರಿತ್ರೆಗಳನ್ನಾಗಲೀ, ನಮ್ಮ ರಂಗಕಲಾವಿದರ ಜೀವನವನ್ನು ಚಿತ್ರಿಸುವ ಅಂಥ ಕೆಲವು ಬರೆಹಗಳು ನಿಜಕ್ಕೂ ಕುತೂಹಲಕರವಾಗಿವೆಯಾದರೂ - ನಾನು ಈ ಲೇಖನದ ಸಂದರ್ಭದಲ್ಲಿ ಗಣನೆಗೆ ತೆಗೆದುಕೊಂಡಿಲ್ಲ. ಹಾಗೆಯೇ ನಮ್ಮ ಹಿರಿಯ ಬರೆಹಗಾರರಿಗೆ ಅರ್ಪಿತವಾಗಿರುವ, ಸಾಕಷ್ಟು ಜೀವನಚರಿತ್ರೆಯ ಸಾಮಗ್ರಿಯನ್ನು ಒದಗಿಸುವ, ಅಭಿನಂದನ ಗ್ರಂಥಗಳನ್ನು ನಾನು ಈ ಲೇಖನದ ಅವಲೋಕನಕ್ಕೆ ತೆಗೆದುಕೊಂಡಿಲ್ಲ.

ಇಷ್ಟು ಪೂರ್ವ ಸೂಚನೆಯೊಂದಿಗೆ ನನ್ನ ಮೂರು ನಿರೀಕ್ಷಣೆಗಳನ್ನು ಮಂಡಿಸಲು ಇಚ್ಛಿಸುತ್ತೇನೆ. (೧) ಹೆಚ್ಚು ಕಡಿಮೆ ಕನ್ನಡದ ಎಲ್ಲ ಜೀವನಚರಿತ್ರಕಾರರು ಈಗಾಗಲೇ ರೂಢಿಯಾಗಿರುವ ಪ್ರೌಢವೂ ಗಂಭೀರವೂ ಆದಂತಹ ಚೌಕಟ್ಟಿನಲ್ಲಿಯೇ ಕೆಲಸ ಮಾಡುತ್ತಿದ್ದಾರೆ. (೨) ವ್ಯಕ್ತಿಯ ಸಾರ್ವಜನಿಕ ವ್ಯಕ್ತಿತ್ವವೇ ಜೀವನಚರಿತ್ರೆಗಳಲ್ಲಿ ವಿಶೇಷ ಗಮನ ಪಡೆಯುತ್ತಿದೆ. ಮತ್ತು (೩) ವಸ್ತುಸ್ಥಿತಿಯನ್ನು ಐತಿಹ್ಯಗಳಿಗೆ ತಿರುಗಿಸುವ ಹಳೆಯ ಸಂಪ್ರದಾಯ ಸೂಕ್ಷ್ಮವಾಗಿಯಾದರೂ ಇನ್ನೂ ಪ್ರಭಾವ ಬೀರುತ್ತಲೇ ಇದೆ. ಈ ಮೂರೂ ಅಂಶಗಳೂ ಮತ್ತು ಅಭ್ಯಾಸಪೂರ್ಣ ಸಾಮಗ್ರಿಯ ಅಭಾವ, ಪ್ರಾಯಃ ಆಧುನಿಕ ಅರ್ಥದಲ್ಲಿ ಅತ್ಯುತ್ತಮ ಜೀವನಚರಿತ್ರೆಗಳು ನಮ್ಮಲ್ಲಿ ಬರದಿರಲು ಕಾರಣವಾಗಿವೆ ಎನ್ನಬಹುದು.

ವೈಭವೀಕರಣದ ಧಾಟಿಯ ಬಗ್ಗೆ ಮೊದಲು

ಒಬ್ಬ ವ್ಯಕ್ತಿಯ ಬಗ್ಗೆ ಲಭ್ಯವಿರುವ ಏನೆಲ್ಲ ಸಾಮಗ್ರಿಗಳನ್ನು ಜೀವನಚರಿತ್ರಕಾರ ಆಯ್ದುಕೊಳ್ಳುವ ಔಚಿತ್ಯದ ಬಗ್ಗೆ ಹೇಳದೆ ವೈಭವೀಕರಣದ ಧಾಟಿಯ ಬಗ್ಗೆ ಮಾತನಾಡುವುದು ಸಾಧ್ಯವಿಲ್ಲ. ನಮ್ಮಲ್ಲಿ ಬರುತ್ತಿರುವ ಜೀವನಚರಿತ್ರೆಗಳಲ್ಲಿ ವ್ಯಕ್ತಿಯ ವೈಯಕ್ತಿಕ ಬದುಕಿನ ಅಂಶಗಳು ಪಾಶ್ಚಾತ್ಯ ಜೀವನ ಚರಿತ್ರೆಗಳಲ್ಲಿ ಪಡೆಯುತ್ತಿರುವಷ್ಟು ಗಮನವನ್ನು ಪಡೆಯುತ್ತಿಲ್ಲ. ಜೀವನಚರಿತ್ರಾಕಾರನ ಆಯ್ಕೆಯ ಔಚಿತ್ಯವನ್ನು ನಿರ್ದೇಶಿಸಬೇಕಾದದ್ದು ಸಾಮಗ್ರಿಯ ಸುಸಂಗತಿಯೇ ಹೊರತು ಅದು ವೈಯಕ್ತಿಕವೋ ಸಾರ್ವತ್ರಿಕವೋ ಎಂಬುದಲ್ಲ ಎಂದು ನಾವು ನಂಬುವೆವಾದರೆ, ಒಬ್ಬ ವ್ಯಕ್ತಿಯ ಬದುಕನ್ನು ಚಿತ್ರೀಕರಿಸಲು ಆತನ ಖಾಸಗೀ ಬದುಕಿನ ಅನೇಕ ವಿವರಗಳು ಅತ್ಯಗತ್ಯವಾಗುತ್ತವೆ ಎಂದು ನಾನು ಭಾವಿಸುತ್ತೇನೆ. ಆಧಾರಗಳನ್ನು ನಾನು ಮುಂದೆ ವಿವರಿಸುತ್ತೇನೆ. ಈಗ ನಾನು ಕೆಲವು ತಾತ್ವಿಕ ಸಮಸ್ಯೆಗಳನ್ನು ಕುರಿತು ಯೋಚಿಸುತ್ತಿದ್ದೇನೆ. ರಾಜಗಾಂಭೀರ್ಯದ ಧಾಟಿಯ ಚೌಕಟ್ಟಿನಲ್ಲಿ ಕೆಲಸ ಮಾಡುವ ಎಲ್ಲ ಜೀವನ ಚರಿತ್ರೆಗಳೂ ಸಾಮಾನ್ಯವಾಗಿ ಆ ವ್ಯಕ್ತಿತ್ವದ ವಿಜೃಂಭಣೆಗೆ ಅವಶ್ಯವಾಗುವ ಸಾಮಗ್ರಿಗಳನ್ನೇ ಆಯ್ದುಕೊಳ್ಳ ತೊಡಗುತ್ತವೆ. ಸಾಮಾನ್ಯವಾಗಿ ಹಾಗೆ ಬಿಂಬಿತವಾಗುವ ವ್ಯಕ್ತಿತ್ವವು ಜನತೆಯ ಒಳಿತು, ಸಾಮರ್ಥ್ಯ, ಸರ್ವಾರ್ಪಣೆ ಮತ್ತು ಮಾನವೀಯತೆಯಿಂದಾಗಿ ಒಂದು ಶಕ್ತಿಯ ಕೇಂದ್ರವಾಗುವಂಥದ್ದು. ನಾನು ಈ ಗುಣಗಳನ್ನು ಗೌರವಿಸುವೆನಾದರೂ, ಜೀವನಚರಿತ್ರೆಯ ನಾಯಕನ ವ್ಯಕ್ತಿತ್ವ ಹೆಚ್ಚು ಸಂಭಾವ್ಯವಾಗುವುದು ಜೀವನಚರಿತ್ರಕಾರ ಒದಗಿ ಬಂದ ಗಟ್ಟಿಯಾದ ಎಲ್ಲ ಗುರಿಗೆ ತಕ್ಕಂತೆ ವಿವರಗಳನ್ನು ಆಯ್ದುಕೊಳ್ಳುವುದರ ಮೂಲಕವಲ್ಲ ಎಂದು ಭಾವಿಸುತ್ತೇನೆ.

ವ್ಯಕ್ತಿಯ ಸಾರ್ವಜನಿಕ ವ್ಯಕ್ತಿತ್ವಕ್ಕೇ ಜೀವನಚರಿತ್ರೆಯಲ್ಲಿ ಹೆಚ್ಚು ಗಮನಕೊಡುವುದರಿಂದ ಆತನ ವ್ಯಕ್ತಿತ್ವ ವಾಸ್ತವವಾಗಿ ಇರುವುದಕ್ಕಿಂತ ಹೆಚ್ಚು ಅಗ್ರಾಹ್ಯವಾಗಿಬಿಡುತ್ತದೆ. ವ್ಯಕ್ತಿಯ ಬಾಹ್ಯ ಆಚರಣೆಗಳನ್ನು ಪ್ರಚೋದಿಸುವ, ನಿಯಂತ್ರಿಸುವ ಆತನ ಆಂತರಿಕ ಜಟಿಲತೆ, ಸೂಕ್ಷ್ಮತೆಗಳನ್ನು ಗುರುತಿಸುವ, ವಿಶ್ಲೇಷಿಸುವ ಪ್ರಯತ್ನ ಇಂಥ ಕಡೆ ಆಗುವುದೇ ಇಲ್ಲ. ಜೀವನಚರಿತ್ರೆಯ ನಾಯಕ ಸಾರ್ವಜನಿಕವಾಗಿ ಪ್ರಭಾವೀ ವ್ಯಕ್ತಿಯಾದಾಗ ಅಂತಹ ನಾಯಕನನ್ನು ಉಳಿದವರಿಗೆ ಸ್ಫೂರ್ತಿಯ ಚಿಲುಮೆಯಾಗಿ ಚಿತ್ರಿಸುವ ಧಾಟಿ ನಾಯಕನ ಪೂರ್ಣವ್ಯಕ್ತಿತ್ವವನ್ನು ತೋರಿಸುವ ಕೆಲಸದಲ್ಲಿ ಅಡ್ಡಿಯಾಗುತ್ತದೆ. ವಿವೇಕಾನಂದ, ಅರವಿಂದ,

ಜವಹರಲಾಲ್ ನೆಹರೂ, ಸರ್ದಾರ್ ಪಟೇಲ್, ವಿನೋಬಾ ಭಾವೆ, ರಾಜೇಂದ್ರ ಪ್ರಸಾದ್ ಮುಂತಾದವರ ಜೀವನಚರಿತ್ರೆಗಳು ಜೀವನಚರಿತ್ರಕಾರರ ಈ ಬಗೆಯ ಮಡಿವಂತಿಕೆಗೆ ಧಾರಾಳ ಉದಾಹರಣೆಗಳಾಗಬಲ್ಲವು. ಜೀವನ ಚರಿತ್ರಕಾರನ ಸೀಮಿತ, ನಿರ್ದಿಷ್ಟ ಉದ್ದೇಶದ ಕಾರಣದಿಂದಾಗಿ, ಲೇಖಕನ ಎಚ್ಚರದ ಆಯ್ಕೆಯ ವಿವರಗಳಿಂದಾಗಿ, ಸಾರ್ವಜನಿಕ ಮಹತ್ವದ ಇಂಥ ನಾಯಕ, ನಾಯಕಿಯರು ಪುರಾಣ ಪುರುಷರಾಗಿ ಬಿಡುತ್ತಾರೆ. ಮತ್ತು ಆ ಕಾರಣದಿಂದಾಗಿಯೇ ಜನಸಾಮಾನ್ಯರಿಂದ ದೂರ ನಿಂತು ಕೇವಲ ಆದರ್ಶಮೂರ್ತಿಯಾಗಿಯೇ ಉಳಿದುಬಿಡುತ್ತಾರೆ. ಇಂಥ ಜೀವನಚರಿತ್ರೆಗಳನ್ನು ಪ್ರಾಯಃ ನಮ್ಮ ಪುರಾಣ ಕೃತಿಗಳಿಗೆ ಹೋಲಿಸಬಹುದು. ಅಂಥ ಪುರಾಣಗಳು ಪದ್ಯರೂಪದಲ್ಲಿ ಸಾಹಿತ್ಯದ ಕಲ್ಪಕತೆಯುಳ್ಳ ಜೀವನಚರಿತ್ರೆಗಳಾಗಿವೆ. ಇಲ್ಲಿ ಗಮನಿಸಬೇಕಾದ ಮಾತೆಂದರೆ, ಅಂಥ ಗ್ರಂಥಗಳು ಸಾಹಿತ್ಯಕೃತಿಗಳಾಗಿವೆ ಮತ್ತು ತಮ್ಮ ಘನತೆಯನ್ನು ಅವು ಸಾಹಿತ್ಯಕೃತಿಗಳೆಂದೇ ಪಡೆಯುತ್ತವೆಯೇ ಹೊರತು ಜೀವನಚರಿತ್ರೆಗಳಾಗಿ ಅಲ್ಲ ಎಂಬುದು (ಆಧುನಿಕ ದೃಷ್ಟಿಯಲ್ಲಿ). ಇಂಥ ಜೀವನಚರಿತ್ರೆಗಳ ಧಾಟಿ ಬಹಳಷ್ಟು ಕಡೆ ಸರಳವಾದ ಭಯಭರಿತ ಭಕ್ತಿ ಗೌರವ ಮೊದಲಾದ ಭಾವನೆಗಳನ್ನು ಕೆರಳಿಸುವ ಉದ್ದೇಶವುಳ್ಳದ್ದು. ಆಯಾ ವ್ಯಕ್ತಿಗಳ ಸಂಕೀರ್ಣತೆಯ ದರ್ಶನ ನಮಗೆ ಇಂಥ ಕಡೆ ಆಗುವುದೇ ಇಲ್ಲ. ಇದೇ ಮಾತನ್ನು ಮುಂದುವರಿಸುವುದಾದರೆ, ಜವಾಹರಲಾಲ್ ನೆಹ್ರೂ ಅವರ 'ದಿ ಡಿಸ್‌ಕವರಿ ಆಫ್ ಇಂಡಿಯಾ', ನೆಹರೂ ಅವರ ಸಂಕೀರ್ಣ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿ ಕನ್ನಡದಲ್ಲಿ ಬಂದಿರುವ ಅವರ ಜೀವನಚರಿತ್ರೆಗಳಿಗಿಂತ ನನಗೆ ಹೆಚ್ಚು ಉಪಯುಕ್ತವಾಗಿದೆ.

ಈವರೆಗೂ ಆಕ್ಷೇಪಣೆಗಳ ಪಟ್ಟಿಯನ್ನೇ ಮುಂಗಡ ಪ್ರಸ್ತಾಪಿಸಿದ್ದಾಗಿದೆ. ಮುಂದೆ ಕನ್ನಡದಲ್ಲಿ ರಚಿತವಾಗಿರುವ ಕೆಲವು ಜೀವನಚರಿತ್ರೆಗಳ ಆಧಾರದಿಂದ ನನ್ನ ವಾದವನ್ನು ಪುಷ್ಟೀಕರಿಸುತ್ತಾ ಹೋಗುತ್ತೇನೆ. ಎಂ.ಎಸ್. ಪುಟ್ಟಣ್ಣನವರ 'ಕುಣಿಗಲ್ ರಾಮಶಾಸ್ತ್ರಿಗಳ ಚರಿತ್ರೆ' ಎಂಬ ಪುಸ್ತಕದ ಬಗ್ಗೆ ಈ ಲೇಖನದಲ್ಲಿ ಸುದೀರ್ಘವಾಗಿ ಚರ್ಚಿಸುವುದು ಸಾಧ್ಯವಿಲ್ಲವಾದರೂ ಅದು ಮೊದಲು ಪ್ರಕಟವಾದುದು ೧೯೧೦, ಆ ಕಾರಣದಿಂದ ನಾನು ಅದನ್ನು ಇಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ. ಏಕೆಂದರೆ ಆ ಕೃತಿಯ ನಂತರ ರಚಿತವಾದ ಅದರ ಪ್ರಭಾವದಿಂದ ಅದೇ ಧಾಟಿಯಲ್ಲಿ ರಚಿತವಾದ ಅನೇಕ ಜೀವನಚರಿತ್ರೆಗಳು ವಿಫಲವಾಗಿವೆ. ಎಂ.ಎಸ್. ಪುಟ್ಟಣ್ಣನವರ ಕೃತಿಯ ಯಶಸ್ಸಿಗೆ ಕಾರಣ ಪ್ರಾಯಃ ಅದರ ವಸ್ತುವಿನಲ್ಲೇ ಇದೆ. ರಾಮಶಾಸ್ತ್ರಿ ಆರ್ಷೇಯ ಸಂಪ್ರದಾಯದ ಬ್ರಾಹ್ಮಣ ವಿದ್ವಾಂಸರಾಗಿದ್ದು ತಾವು ಬದುಕಿದ ಪರಿಸರಕ್ಕೆ ಅವರು ತೀರ ಹೊಂದಿಕೊಂಡು ಬದುಕಿದವರು (ಅಂದರೆ ಮುಮ್ಮಡಿ ಕೃಷ್ಣರಾಜರ ಆಳ್ವಿಕೆಯ ಕಾಲದ ಮೈಸೂರಿನ ಸಂಸ್ಥಾನಕ್ಕೆ). ಹಾಗಾಗಿ ಇಲ್ಲಿ ಜೀವನಚರಿತ್ರೆ ಒಬ್ಬ ವ್ಯಕ್ತಿಯ ಜೀವನಚಿತ್ರ ವಾಗಿರುವಂತೆಯೇ ಒಂದು ಪರಿಸರದ ಚಿತ್ರಣವೂ ಆಗಿದೆ. ಆ ಕಾಲಕ್ಕೂ ನಮ್ಮ ಕಾಲಕ್ಕೂ ಔಚಿತ್ಯ ಗ್ರಹಿಕೆಯಲ್ಲಿನ ವ್ಯತ್ಯಾಸ ಯಾರಿಗೂ ತಿಳಿಯುವಂತಿದೆ--ನನಗನಿಸುತ್ತದೆ, ಆ ಕಾಲ ನಮ್ಮ ಕಾಲಕ್ಕಿಂತ ಹೆಚ್ಚು ಮುಕ್ತವಾದದ್ದಿತ್ತು--ಆದುದರಿಂದ ರಾಜಗಂಭೀರ ಧಾಟಿಯ ಚೌಕಟ್ಟಿನ ಒಳಗೇ ಕೆಲಸ ಮಾಡಿಯೂ ಈ ಜೀವನಚರಿತ್ರೆ ನಮಗೆ ಒಂದು ಸಮಗ್ರ ವ್ಯಕ್ತಿಚಿತ್ರವನ್ನು ಹಿಡಿದು ಕೊಡುವಲ್ಲಿ ಯಶಸ್ವಿಯಾಗಿದೆ ಎಂದು. ನಾನು ಹೇಳಲು ಪ್ರಯತ್ನಿಸುತ್ತಿರುವುದು--ಕನ್ನಡದಲ್ಲಿ ಜೀವನಚರಿತ್ರೆ ರಚಿಸಲು ಉದ್ದೇಶಿಸುವ ಲೇಖಕ ಈ ಮಾಧ್ಯಮ ಸಾಹಿತ್ಯದ ಒಂದು ಘನವಾದ ಗೌರವಕ್ಕೆ ಪಾತ್ರನಾಗಬೇಕೆಂದರೆ ಈ ಮಾಧ್ಯಮವು ಬಿಚ್ಚಿಕೊಳ್ಳಬೇಕಾದ ಕಲಾತ್ಮಕ ಸ್ವರೂಪದ ಸವಾಲನ್ನು ಎದುರಿಸಬೇಕಾಗುವುದು. ನಾವೀಗ ಪಡೆದಿರುವ ಆಧುನಿಕ ಸಾಹಿತ್ಯ ಸೂಕ್ಷ್ಮತೆಯ ಕಾರಣದಿಂದಾಗಿ ಆಧಾರಯುತವಾದ ವಿಮರ್ಶಾತ್ಮಕ ಜೀವನಚರಿತ್ರೆಗಳು ಮಾತ್ರ ನಮ್ಮ ಗಂಭೀರವಾದ ಆಸಕ್ತಿಯನ್ನು ಕೆರಳಿಸಬಲ್ಲವು. ಈಗಿನ ಓದುಗವರ್ಗವೇ ಭಿನ್ನವಾಗಿರುವು ದರಿಂದ ಹೇಗೆ ನಮ್ಮ ಕವಿಗಳು ಜನಪದಕಾವ್ಯ ಅಥವಾ ಮಹಾಕಾವ್ಯಗಳ ಧಾಟಿಯಿಂದ ಪರಿಣಾಮಗಳನ್ನು ಇಂದು ಸಾಧಿಸಲಾರರೋ ಹಾಗೇ ನಮ್ಮ ಜೀವನಚರಿತ್ರಕಾರರೂ ನಮ್ಮ ಸಾಂಪ್ರದಾಯಿಕ ಸಾಹಿತ್ಯಿಕ ಜೀವನಚರಿತ್ರೆಯ ಧಾಟಿಯಲ್ಲಿ ಪ್ರಭಾವವನ್ನು ಸಾಧಿಸಲಾರರು. ಅಂದರೆ ಕನ್ನಡದಲ್ಲಿ ಈವರೆಗೆ ಬಂದಿರುವ

ಜೀವನಚರಿತ್ರೆಗಳು ನನಗೆ ಅತೃಪ್ತಿ ಉಂಟುಮಾಡಿರುವುದಕ್ಕೆ ಕಾರಣ- ಒಂದು ಕಲಾಕೃತಿಯಾಗಿ ಬಂಧದ ಕಡೆ ಲೇಖಕರು ಹೆಚ್ಚು ಗಮನಗೊಡದಿರುವುದೇ ಆಗಿದೆ.

ಕಳೆದ ಹತ್ತು ವರ್ಷಗಳಲ್ಲಿ ಪ್ರಕಟವಾದ ಮೂರು ಕನ್ನಡ ಜೀವನಚರಿತ್ರೆಗಳ ಆಧಾರದಿಂದ ಈ ಅಭಿಪ್ರಾಯವನ್ನು ಸಮರ್ಥಿಸಲು ಪ್ರಯತ್ನಿಸುತ್ತೇನೆ. ಈ ಮೂರು ಕಲಾಕೃತಿಗಳನ್ನೇ ಆರಿಸಿಕೊಂಡ ಕಾರಣ--ಅವುಗಳು ಕುತೂಹಲ ಕೆರಳಿಸುವಂತಿವೆ. ಮತ್ತು ಕೆಲವು ಅಂಶಗಳಲ್ಲಿ ತಮ್ಮ ವಿಫಲತೆಯಿಂದ ನನ್ನಲ್ಲಿ ಬೇಸರವನ್ನೂ ಹುಟ್ಟಿಸಿವೆ. ಕಾಲಾನುಕ್ರಮವಾಗಿ ಆ ಮೂರು ಗ್ರಂಥಗಳು (೧) 'ಸರ್ ವಿಶ್ವೇಶ್ವರಯ್ಯ' -- ಮಾಸ್ತಿ ವೆಂಕಟೇಶ ಅಯ್ಯಂಗಾರರು ಸಂಪಾದಿಸಿದ್ದು (೧೯೬೦) (೨) 'ವಾಗ್ಗೇಯಕಾರ ವಾಸುದೇವಾಚಾರ್ಯ'--ಎಸ್. ಕೃಷ್ಣಮೂರ್ತಿ ಸಂಪಾದಿಸಿದ್ದು (೧೯೬೫). (೩) 'ತೀ.ನಂ.ಶ್ರೀ'-- ಡಿ. ಜವರೇಗೌಡರದ್ದು (೧೯೬೭).

'ಸರ್ ವಿಶ್ವೇಶ್ವರಯ್ಯ' ಎಂಬ ಗ್ರಂಥವನ್ನು ಸಾಹಿತ್ಯಿಕ ಗ್ರಹಿಕೆಯಲ್ಲಿ ಜೀವನಚರಿತ್ರೆ ಎನ್ನುವುದಕ್ಕಿಂತ ವಿಶ್ವೇಶ್ವರಯ್ಯನವರ ಅನೇಕ ಮುಖಗಳನ್ನು ಪರಿಚಯ ಮಾಡಿಕೊಡುವ ಪ್ರಬಂಧಗಳ ಸಂಕಲನ ಎನ್ನಬಹುದು. ಜೀವನಚರಿತ್ರೆ ಎಂಬುದು ಹಲವು ಲೇಖಕರ ಒಂದು ಸಮಗ್ರ ಪ್ರಯತ್ನವೂ ಆಗಬಹುದೆಂದು ನಾವು ಒಪ್ಪುವೆವಾದರೆ ಈ ಗ್ರಂಥವನ್ನು ಸರ್ ಎಂ.ವಿ. ಅವರ ಸಾರ್ವಜನಿಕ ವ್ಯಕ್ತಿತ್ವದ ವ್ಯಕ್ತಿ ಚಿತ್ರಣ ಮಾಡಿಕೊಡುವ ಒಳ್ಳೆಯ ಪ್ರಯತ್ನ ಎಂದು ನೋಡಬಹುದು. ಸರ್ ಎಂ.ವಿ. ಅವರ ಸಿದ್ಧಿಗಳು ಎಷ್ಟು ಪ್ರಭಾವಿತ ಮತ್ತು ಅವರ ಧೋರಣೆಗಳು ಅವರ ಸರೀಕರ ಧೋರಣೆಗಳಿಗಿಂತ ಎಷ್ಟು ಹೊಡೆದು ತೋರುವ ಭಿನ್ನತೆ ಉಳ್ಳವು ಎಂದರೆ, ಅವರ ವ್ಯಕ್ತಿತ್ವದ ಬಗ್ಗೆ ಹೆಚ್ಚುಹೆಚ್ಚು ತಿಳಿಯುವ ಮೂಲಕ ಅವರ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳುವ ಬಯಕೆ ಎಂಥವರಿಗೂ ಉಂಟಾಗುತ್ತದೆ. ಆದರೆ ಈ ಗ್ರಂಥ ಸರ್ ಎಂ.ವಿ. ಅವರ ಮಹತ್ವದ ಸಾಧನೆಗಳ ಪರಿಚಯ ಮಾಡಿಕೊಡುವುದೇ ಹೊರತು ಅವರನ್ನು ಒಬ್ಬ ವ್ಯಕ್ತಿಯಾಗಿ ಅರ್ಥ ಮಾಡಿಕೊಳ್ಳುವಲ್ಲಿ ಏನೂ ಸಹಾಯ ಮಾಡುವುದಿಲ್ಲ ಎಂಬುದು ದುರದೃಷ್ಟದ ಸಂಗತಿ.

ಈ ಮೂರು ಗ್ರಂಥಗಳಲ್ಲಿ ಕೃಷ್ಣಮೂರ್ತಿ ಅವರು ತಮ್ಮ ತಾತ ವಾಸುದೇವಾಚಾರ್ಯರ ಬಗ್ಗೆ ಬರೆದಿರುವ ಜೀವನಚರಿತ್ರೆಯೇ ಪ್ರಾಯಃ ಹೆಚ್ಚು ತೃಪ್ತಿಕರ ಕೃತಿಯಾಗಿದೆ. ವಾಸುದೇವಾಚಾರ್ಯರ 'ನಾ ಕಂಡ ಕಲಾವಿದರು' ಮತ್ತು 'ನೆನಪುಗಳು' ಎಂಬ ಎರಡು ಪುಸ್ತಕಗಳನ್ನು ಕೃಷ್ಣಮೂರ್ತಿ ತಮ್ಮ ಗ್ರಂಥಕ್ಕೆ ಬಳಸಿಕೊಂಡಿದ್ದಾರೆ. ಪುಸ್ತಕದಲ್ಲಿ ವಾಸುದೇವಾಚಾರ್ಯರನ್ನು ಬಲ್ಲ ವ್ಯಕ್ತಿಗಳು ಬರೆದಿರುವ ಲೇಖನಗಳು ಇವೆ. ಆ ಲೇಖನಗಳನ್ನು ವಾಸುದೇವಾಚಾರ್ಯರ ವ್ಯಕ್ತಿತ್ವದ ಮತ್ತು ಅವರು ಬಾಳಿ ಬದುಕಿದ ಪರಿಸರವನ್ನು ಚೆನ್ನಾಗಿ ಕಟ್ಟಿಕೊಡುವ ಹಾಗೆ ಜೋಡಿಸಿಕೊಡಲಾಗಿದೆ. ನಮ್ಮ ಸಾಂಪ್ರದಾಯಿಕ ಮೌಲ್ಯಗಳನ್ನು ಅಂತರ್ಗತ ಮಾಡಿಕೊಂಡ ಕಲಾವಿದನೊಬ್ಬನ ವ್ಯಕ್ತಿತ್ವದ ಸಮಗ್ರಚಿತ್ರ ಈ ಪುಸ್ತಕದಿಂದ ಚಿತ್ರಿತವಾಗುವಂತಿದೆ. ಈ ಪುಸ್ತಕ ತೃಪ್ತಿಕೊಡುವುದಕ್ಕೆ ಕಾರಣ ಪ್ರಾಯಃ ಇದು ವ್ಯಕ್ತಿ ಮತ್ತು ಪರಿಸರದ ನಡುವೆ ಸ್ಥಾಪಿಸುವ ಸಂಬಂಧದಿಂದಾಗಿ. ಈ ಸಂಬಂಧ ವ್ಯಕ್ತಿ-ಪರಿಸರ ಎರಡರ ಮೇಲೂ ಬೆಳಕು ಚೆಲ್ಲುವಂತಿದೆ.

ಪ್ರೊ. ಜವರೇಗೌಡರು ರಚಿಸಿರುವ ಕೃತಿ 'ತೀನಂಶ್ರೀ' ನಮ್ಮ ಮಹತ್ವದ ವಿದ್ವಾಂಸರಾದ ದಿವಂಗತ ತೀನಂಶ್ರೀ ಅವರ ಜೀವನ ಚರಿತ್ರೆಯನ್ನು ಕುರಿತಿದೆ. ಈ ಪುಸ್ತಕ ತೀನಂಶ್ರೀ ಅವರ ಬಾಲ್ಯ ಜೀವನದ ಬಗ್ಗೆ ಒಂದು ಸಂಕ್ಷಿಪ್ತ ಅಧ್ಯಾಯವನ್ನು ಒಳಗೊಂಡಿದೆಯಾದರೂ ಇದನ್ನು ಜೀವನಚರಿತ್ರೆ ಎಂದು ಕರೆಯುವುದಕ್ಕಿಂತ ಸ್ಮೃತಿಚಿತ್ರ ಎಂದು ಕರೆಯುವುದೇ ಮೇಲು. ತೀನಂಶ್ರೀ ಅವರ ದಿನಚರಿಯ ಉದ್ಧರಣೆಗಳನ್ನು ಒಳಗೊಂಡಿರುವ ಎರಡನೆಯ ಅಧ್ಯಾಯವೇ ಈ ಗ್ರಂಥದಲ್ಲಿ ನಿಜಕ್ಕೂ ಕುತೂಹಲ ಕುದುರಿಸುವ ಭಾಗ. ಈ ದಿನಚರಿಯ ತುಣುಕುಗಳ ಆಧಾರದ ಮೇಲೆ ತೀನಂಶ್ರೀ ಅವರು ತಮ್ಮ

ಪರಿಸರದೊಂದಿಗೆ ಹೊಂದಿದ್ದ ಸಂದರ್ಭ ವಾಸುದೇವಾಚಾರ್ಯರು ತಮ್ಮ ಪರಿಸರದೊಂದಿಗೆ ಹೊಂದಿರಬಹುದಾದ ಸಂಬಂಧಕ್ಕಿಂತ ಹೆಚ್ಚು ಸಂಕೀರ್ಣ, ಪ್ರಾಯಃ ಹೆಚ್ಚು ಜಟಿಲ ಎನ್ನಬಹುದು. ಇಲ್ಲಿ ವ್ಯಕ್ತವಾಗಿರುವ ಅಸಂಬದ್ಧತೆ (disharmony) ಸೂಕ್ಷ್ಮ ಸೂಚನೆ (ಅದು ಎಷ್ಟೇ ನವಿರಾಗಿರಲಿ) ಲೇಖನದ ಹೆಚ್ಚಿನ ಗಮನವನ್ನು ಸೆಳೆಯಬೇಕಾಗಿತ್ತು ಮತ್ತು ಅಂಥ ಸೂಕ್ಷ್ಮ ನಿರೀಕ್ಷಣೆಗಳು ಗ್ರಂಥದಲ್ಲಿ ಈಗಿರುವುದಕ್ಕಿಂತ ಹೆಚ್ಚು ವಿವರವಾಗಿಯೂ ಇರಬೇಕಾಗಿತ್ತು. ಪುಸ್ತಕದ ಒಟ್ಟು ಧಾಟಿ ತೀನಂಶ್ರೀ ಬಗ್ಗೆ ವಿಶೇಷ ಗೌರವ ಹಾಗೂ ಪೂಜ್ಯಭಾವವೇ ಆಗಿದ್ದರೂ, ಲೇಖಕರಿಗೂ ಮತ್ತು ತೀನಂಶ್ರೀ ಅವರಿಗೂ ಇದ್ದ ಧೋರಣೆಯ, ಭಿನ್ನಾಭಿಪ್ರಾಯಗಳ ಸ್ಪಷ್ಟ ಸೂಚನೆಗಳು ಪುಸ್ತಕದಲ್ಲಿವೆ. ಅಂಥ ಭಿನ್ನಾಭಿಪ್ರಾಯಗಳು ತುಂಬ ಕುತೂಹಲಕಾರಿಯಾದ ಜೀವನಚರಿತ್ರೆಯೊಂದರ ನಿರ್ಮಾಣಕ್ಕೆ ದಾರಿ ಮಾಡಿಕೊಡಬೇಕಾಗಿತ್ತು.

ಈಗಲಾದರೂ ತೀರ ತಡವಾಗುವ ಮೊದಲೇ ನಮ್ಮ ನಾಡಿನ ಮೇಲೆ ತಮ್ಮ ವ್ಯಕ್ತಿತ್ವದ ಅಚ್ಚೊತ್ತಿರುವ ಮಹನೀಯರು ಮಹಿಳೆಯರ ಜೀವನಕ್ಕೆ ಸಂಬಂಧಿಸಿದ ವಿವರಗಳ್ನು ಸಂಗ್ರಹಿಸುವುದು ಅತ್ಯಗತ್ಯವಾಗಿದೆ. ಆಗ ಮಾತ್ರ ನಾವು ವಿವರವಾದ ತೃಪ್ತಿಕರವಾದ ಜೀವನಚರಿತ್ರೆಗಳನ್ನು ನಿರೀಕ್ಷಿಸುವುದು ಸಾಧ್ಯವಾಗುತ್ತದೆ.

ಅನುವಾದ : ಎಚ್. ಎಸ್. ವೆಂಕಟೇಶಮೂರ್ತಿ

೩೦, ಸಂಕಲ್ಪ, ಪುಷ್ಪಗಿರಿನಗರ, ಬನಶಂಕರಿ ೩ನೇ ಹಂತ, ಬೆಂಗಳೂರು ೫೬೦ ೦೮೫

ಹೊಸಪುಸ್ತಕ ಪಟ್ಟಿ, ಪರಿಚಯ, ವಿಮರ್ಶೆ ಮುಂದಿನ ತಿಂಗಳಿಂದ

ಶ್ರೀ ಹರಿಹರಪ್ರಿಯ ಅವರಿಗೆ,

ವಂದನೆಗಳು. ತಾವು ಕಳುಹಿಸಿದ 'ಪ್ರಜಾಸಾಹಿತ್ಯ'ದ ಸಂಚಿಕೆಗಳು ತಲುಪಿದವು. ವಾರ್ಷಿಕ ಚಂದಾಹಣಕ್ಕೆ ಚೆಕ್ ಕಳಿಸುತ್ತಿದ್ದೇನೆ. ಸ್ವೀಕರಿಸಬೇಕು.

ಪತ್ರಿಕೆ ಚೆನ್ನಾಗಿ ಬರುತ್ತಿದೆ. ಆದರೆ ಮುಖ್ಯವಾಗಿ 'ಗ್ರಂಥಲೋಕ'ದಂಥ ಪತ್ರಿಕೆಯ ಅವಶ್ಯಕತೆ ಬಹಳವಿದೆ. ಪ್ರತಿ ತಿಂಗಳೂ ಪ್ರಕಟವಾದ ಪುಸ್ತಕಗಳನ್ನು ಆಯಾ ಪ್ರಕಾರಗಳಲ್ಲಿ ವಿಂಗಡಿಸಿ ಪರಿಚಯಿಸುವ ಕಾರ್ಯ ಮತ್ತು ಸಂಪಾದಕರ ಅಭಿರುಚಿಗೆ ಸೇರಿದ ಉತ್ತಮ ೪-೫ ಪುಸ್ತಕಗಳ ಸಂಕ್ಷಿಪ್ತ ಪರಿಚಯ ಒದಗಿಸಿದರೆ ಕನ್ನಡ ಓದುಗರಿಗೆ ಪ್ರಸಕ್ತ ಪ್ರಕಟನೆಯ ಮಾಹಿತಿ ದೊರೆಯುತ್ತದೆ. ಹಾಗೆಯೇ ಪ್ರತಿ ಸಂಚಿಕೆಯಲ್ಲೂ ಓದಲೇಬೇಕಾದ ಪುಸ್ತಕವೊಂದನ್ನು ದೀರ್ಘವಾಗಿ ವಿಮರ್ಶಿಸಬಹುದು.

ತಮ್ಮ ವಿಶ್ವಾಸಿ,
ರಮಾಕಾಂತ ಜಿ. ಜೋಶಿ

ಮನೋಹರ ಗ್ರಂಥ ಮಾಲಾ,
ಧಾರವಾಡ

ಪ್ರಿಯಮಿತ್ರರಾದ ರಮಾಕಾಂತ ಜೋಶಿ ಅವರಂತೆಯೇ ಅನೇಕ ಹಿರಿಯ, ಕಿರಿಯ ಮಿತ್ರರ ಸಲಹೆ ಸೂಚನೆಗಳನ್ನು ಸ್ವೀಕರಿಸಿ, ಮುಂದಿನ ತಿಂಗಳಿಂದಲೇ (೧) ಹೊಸಪುಸ್ತಕಗಳ ಪಟ್ಟಿ (೨) ಪ್ರಾರಂಭಕ್ಕೆ ಕಿರು ಪರಿಚಯ (೩) ಆನಂತರ ಆಯ್ಕೆ ಮಾಡಿ ವಿಮರ್ಶೆ – ಹೀಗೆ ಪ್ರಕಟಿಸಲಾಗುವುದು. ಲೇಖಕರು/ಪ್ರಕಾಶಕರು 'ಪುಸ್ತಕಮನೆ' ವಿಳಾಸಕ್ಕೆ ಎರಡು ಪ್ರತಿಗಳನ್ನು ಅಂಚೆಯ ಮೂಲಕ ಇಲ್ಲವೆ ದಿ ಪ್ರೊಫೆಷನಲ್ ಕೊರಿಯರ್ಸ್ ಮೂಲಕ ಮಾತ್ರವೇ ಪುಸ್ತಕಗಳನ್ನು ಕಳಿಸಿಕೊಡಬಹುದಾಗಿದೆ.

ಸಂಪಾದಕ

೨

ಮೆ.ಲೆ.ಸು ಮೆಕಾಫಿ ಸಾಹೇಬರವರ ಚರಿತ್ರೆಯು

೧೯೧೬ರಲ್ಲಿ 'ಸ್ತ್ರೀಯರಿಂದ ಸ್ತ್ರೀಯರಿಗಾಗಿ' ಪ್ರಕಟವಾದ ಕನ್ನಡ ಪತ್ರಿಕೆ ನಂಜನಗೂಡು ತಿರುಮಲಾಂಬ ಅವರ 'ಕರ್ನಾಟಕ ನಂದಿನಿ' ಎನ್ನುವುದಾದರೆ; ೧೯೧೫ರಲ್ಲಿಯೆ 'ಮಹಿಳಾ ಜ್ಞಾನೋತ್ಕರ್ಷ ಮಾಲಾ' ಎಂಬ ತ್ರೈಮಾಸಿಕ, ಮಹಿಳೆಯರಿಗಾಗಿಯೇ ಹೊರಟಿದ್ದು, ಆವರೆಗೂ ಕನ್ನಡದಲ್ಲಿ ಮಹಿಳೆಯರಿಗಾಗಿ ಒಂದು ಪತ್ರಿಕೆ ಇರಲಿಲ್ಲ ಎಂದೂ ತಿಳಿದು ಬರುತ್ತದೆ. ಪತ್ರಿಕೆ ಮಾತ್ರವಲ್ಲ, ಮಹಿಳೆಯರ ಸಂಘಟನೆಗಳಲ್ಲಿ ಬಾದಾಮಿ ತಾಲ್ಲೂಕು ಶ್ರೀ ಶಿವಯೋಗ ಮಂದಿರದಲ್ಲಿ ಸೇರಿದ ಸಭೆಯೂ ಮುಖ್ಯವಾದದ್ದಲ್ಲವೆ? ಏನೇ ಇರಲಿ, ಇಂಥ ಒಂದು ಮಹಿಳಾ ಜಾಗೃತಿಗೆ ಕಾರಣರಾದವರು, ಧಾರವಾಡದ ಹೆಣ್ಣುಮಕ್ಕಳ ಟ್ರೈನಿಂಗ್ ಕಾಲೇಜಿನ ಸೂಪರಿಂಟೆಂಡೆಂಟರಾಗಿ ಬಂದ, ವಿದೇಶಿ ಮಹಿಳೆ ಮೆಕಾಫಿ ಅವರು. ಈ ಅಂಶಗಳ ಮೂಲಕ ಕರ್ನಾಟಕದ ನಿಜಚರಿತ್ರೆಗೆ ದಾರಿ ತೋರುವ ಪುಟ್ಟ ಪ್ರಯತ್ನ, ಈ ವ್ಯಕ್ತಿಚಿತ್ರ; ಆ ಪತ್ರಿಕೆಯ ಮೊದಲ ಸಂಚಿಕೆಯಲ್ಲಿಯೇ ಪ್ರಕಟವಾಗಿದೆ.

ಸಂಪಾದಕ

ಭಗಿನಿಯರೇ! ಈ ಭಾವಚಿತ್ರವೂ ಆರದೆಂಬುವದು ನಿಮಗೆ ಗೊತ್ತಾಯಿತೇನು? ಇದು ಧಾರವಾಡದಲ್ಲಿರುವ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜದ ಲೇಡಿ ಸುಪರಿಂಟೆಂಡೆಂಟರಾದ ಮೇಹರ್ಬಾನ ಮೆಕಾಫಿ ಸಾಹೇಬರದು. ಇವರ ಗುರುತನ್ನು ನಿಮಗೆ ಮಾಡಿಕೊಡುವದು ಅವಶ್ಯವಾದದ್ದು.

ಇವರು ತಾರೀಖು ೧-೭-೧೮೮೨ನೇ ಇಸ್ವಿ ದಿವಸ ವಿಲಾಯತಿಯಲ್ಲಿ ಇವರ ಜನನವಾಯಿತು. ಇವರು ವಿಶ್ವವಿದ್ಯಾಲಯದಲ್ಲಿ ವಿದ್ಯವನ್ನು ಸಂಪಾದಿಸಿಕೊಂಡು, ತಾ॥ ೧-೬-೧೯೧೩ನೇ ಇಸ್ವಿಯ ದಿವಸ ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಲೇಡಿ ಸುಪರಿಂಟೆಂಡೆಂಟರಾಗಿ, ಬಂದರು. ಆಗ್ಗೆ ಆ ಕಾಲೇಜದಲ್ಲಿ ವಿದ್ಯಾರ್ಥಿನಿಗಳ ಸಂಖ್ಯೆಯು ಇಪ್ಪತ್ತೈದಕ್ಕೆ ಮೀರಿರಲಿಲ್ಲ.

ಇವರಿಗೆ ಈಗ ಅಜಮಾಸ ೩೪-೩೫ ವರ್ಷಗಳಾಗಿದ್ದರೂ ಇವರಲ್ಲಿರುವ ನೈತಿಕ, ಧಾರ್ಮಿಕ ಸಾಮಾಜಿಕ ವಿಚಾರಗಳೂ, ಕಾರ್ಯಕರ್ತೃತ್ವ ಶಕ್ತಿಯೂ ಕಾರ್ಯ ಕಾರಣಗಳ ವಿಚ್ಯಾರವೂ, ಧೋರಣ ಶಕ್ತಿಯೂ, ಸಮಾಧಾನ ಮುಂತಾದ ಸದ್ಗುಣಗಳು ಅವರ್ಣನೀಯವಾಗಿರುವವು. ಆಸ್ಯದ ಗಾಳಿಯು ಸಹ ಇವರ ಸಮೀಪಕ್ಕೆ ಸುಳಿದಾಡದು. ಕಾಲೇಜದಲ್ಲಿಯ ತಂಮ ಕಾರ್ಯಕ್ರಮವು ಮುಗಿದ ನಂತರ ಉಳಿದ ವೇಳೆಯನ್ನು ವ್ಯರ್ಥವಾಗಿ ಹೋಗಗೊಡರು. ಹೊಲಿಗೆ, ಹೆಣಿಕೆ ಮುಂತಾದ ಒಂದಿಲ್ಲೊಂದು ಕಾರ್ಯದಲ್ಲಿ ಹೊತ್ತುಗಳೆಯುವರು.

ವಿದ್ಯಾರ್ಥಿನಿಯರ ಅಭ್ಯಾಸ, ಆರೋಗ್ಯತೆ, ಊಟ ಉಪಚಾರ ಮುಂತಾದ್ದರ ಕಡೆಗೆ ಇವರು ಎಡಬಿಡದೇ ಲಕ್ಷವನ್ನಿತ್ತು, ಕಾಪಾಡುತ್ತಿರುವುದರಿಂದ, ದೂರದೂರ ಪ್ರಾಂತಗಳಿಂದ ಬಂದ ಚಿಕ್ಕ ದೊಡ್ಡ ವಿದ್ಯಾರ್ಥಿನಿಯರು ತಂಮತಂದೆ-ತಾಯಿಗಳನ್ನು ನೆನಿಸದೆ ಇವರ ಸಂಗಡ ಸಖ್ಯತನದಿಂದಲೂ ಪ್ರೀತಿಯಿಂದಲೂ ನಡಕೊಳ್ಳುತ್ತಿರುವರು.

ಇವರು ಕಾಲೇಜಿನಲ್ಲಿ ಇಟ್ಟಿರುವ ವ್ಯವಸ್ಥೆಯನ್ನು ನೋಡಿದರೆ ಆನಂದಕರವಾಗಿರವದು. ಇವರ ಅಪ್ಪಣೆಯ ಹೊರ್ತು ವಿದ್ಯಾರ್ಥಿನಿಯರ ತಂದೆ-ತಾಯಿಗಳಾದರೂ ಕಾಲೇಜಿನೊಳಗೆ ಪ್ರವೇಶಿಸಲಾರರು. ಮತ್ತು ಅವರ ಅಪ್ಪಣೆ ಇಲ್ಲದೆ ಯಾವ ವಿದ್ಯಾರ್ಥಿನಿಯಾದರೂ ತಂಮ ತಂದೆ ತಾಯಿಗಳ ಸಂಗಡ ಮಾತಾಡಲಾರಳು. ಈ ವ್ಯವಸ್ಥೆಯನ್ನು ನೋಡಿದರೆ ತಂಮ ತಂಮ ಚಿಕ್ಕ ದೊಡ್ಡ ವಯಸ್ಸಿನ ಹೆಣ್ಣುಮಕ್ಕಳನ್ನು

ಈ ಕಾಲೇಜಕ್ಕೆ ವಿದ್ಯಾಭ್ಯಾಸಕ್ಕಾಗಿ ಕಳಿಸಬೇಕೆಂಬ ಬುದ್ಧಿಯೂ ಸ್ತ್ರೀವಿದ್ಯವನ್ನು ನಿಂದಿಸುವ ಎಂಥವನಿಗಾದರೂ ಹುಟ್ಟದೇ ಇರಲಾರದು. ಆದ್ದರಿಂದ ಈ ಕಾಲೇಜಿನ ಸ್ಥಿತಿಯು ದಿನದಿನಕ್ಕೆ ಅಭಿವೃದ್ಧಿಯನ್ನು ಹೊಂದುತ್ತಾ ಈಗ ವಿದ್ಯಾರ್ಥಿನಿಗಳ ಸಂಖ್ಯೆಯು ಎಪ್ಪತ್ತಕ್ಕೆ ಮೀರಿರುವದು ಮತ್ತು ಪ್ರತಿವರ್ಷಕ್ಕೂ ಹೆಚ್ಚುತ್ತಲೇ ಇರುವದು. ಇದರಿಂದ ಈಗೀಗ ಸ್ತ್ರೀಸಮಾಜದಲ್ಲಿ ವಿದ್ಯಾಭಿರುಚಿಯು ಹೆಚ್ಚಿ, ತಂಮ ಕರ್ತವ್ಯಗಳನ್ನರಿತುಕೊಳ್ಳಲು ಅರ್ಹರಾಗುತ್ತಿರುವರು.

ಈ ಕರ್ನಾಟಕದಲ್ಲಿ ವಿದ್ಯಾಹೀನರಾದ ಹೆಣ್ಣುಮಕ್ಕಳ ಹೀನ ಸ್ಥಿತಿಯನ್ನು ನೋಡಿ, ಇವರು ಬಹಳ ಕನಿಕರಪಡುತ್ತಾ ಇವರ ಏಳ್ಗೆಯ ವಿಷಯವಾಗಿ ನಿರ್ವಂಚನೆಯಿಂದ ಅಹೋರಾತ್ರಿ ಶ್ರಮಪಡುತ್ತಿರುವರು.

ಶಕೆ ೧೮೩೭ನೇ ರಾಕ್ಷಸ ಸಂವತ್ಸರದ ಮಾಘಮಾಸದಲ್ಲಿ ಬಾದಾಮಿ ತಾಲೂಕ ಶ್ರೀ ಶಿವಯೋಗಮಂದಿರದಲ್ಲಿ ಶಿವರಾತ್ರಿ ಕಾಲಕ್ಕೆ ನೆರೆದ ಮಹಿಳಾಪರಿಷತ್ತಿಗೆ ತಂಮ ಕಾಲೇಜಿನ ವಿದ್ಯಾರ್ಥಿನಿಯರೂ ಮಿಸ್ತ್ರೆಸ್ಸರೂ ಕೂಡಿ ನೂರಾರು ಜನಸಹಿತ ದಯಮಾಡಿಸಿದ್ದರು. ಮತ್ತು ಆ ಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ, ಕರ್ನಾಟಕದ ಸರ್ವಭಾಗದ ಹೆಣ್ಣುಮಕ್ಕಳ ಆದರಕ್ಕೆ ಪಾತ್ರರಾದರು. ಇವರು ಆ ಪ್ರಚಂಡವಾದ ಸಭೆಯಲ್ಲಿ ನಿಂತು,--ನಾನು ಹೆಣ್ಣುಮಕ್ಕಳ ಏಳ್ಗೆಗಾಗಿ ಮನಮುಟ್ಟಿ ಶ್ರಮಪಡುತ್ತಿರುವೆನೆಂತಲೂ ನೀವೆಲ್ಲರೂ ನಿಂಮ ನಿಂಮ ಮಕ್ಕಳು ವಿದ್ಯಾವಂತರಾಗುವುದಕ್ಕೆ ಪ್ರಯತ್ನಿಸಿ, ಹೆಣ್ಣುಮಕ್ಕಳ ಮೇಲಿರುವ ಜವಾಬ್ದಾರಿಯನ್ನು ತಿಳಿದು ಅವರು ಆಚರಿಸುವಂತೆ ಮಾಡುವದು ನಿಂಮ ಕರ್ತವ್ಯವೆಂತಲೂ ನೀವು ದೃಢನಿಶ್ಚಯದಿಂದ ಈ ಕಾರ್ಯವನ್ನು ಕೈಕೊಂಡದ್ದಾದರೆ, ಸ್ತ್ರೀವಿದ್ಯವನ್ನು ನಿಂದಿಸುವವರ ಬಲವು ಕುಂದಿ ನಿಮಗೆ ದೇವರ ಯಶಃಪ್ರಾಪ್ತಿಯನ್ನು ಮಾಡುವನೆಂತಲೂ ಮುಂತಾದ ಸಾರಾಂಶದ ಭಾಷಣವನ್ನು ಸಭೀಕರ ಮೇಲೆ ಪರಿಣಾಮವಾಗುವಂತೆ ಉತ್ತಮವಾಗಿ ಮಾಡಿದರು.

ಆಗ್ಗೆ ಆ ಪರಿಷತ್ತಿನಲ್ಲಿ ಕರ್ತವ್ಯ ಜಾಗ್ರತೆಗೊಂಡ ದೇಸಾಯಿ ದೇಶಪಾಂಡೆ ಮನೆತನದ ಬಾಯಿಸಾಹೇಬರೂ ಶ್ರೀಮಂತರ ಬಾಯಿಸಾಹೇಬರೂ ಹಾಗು ಸಾಧ್ವೀಮಣಿಗಳೂ ಕೂಡಿ ತಂಮ ಸ್ತ್ರೀ ಸಮಾಜದ ಏಳ್ಗೆಗಾಗಿಯೂ ಈ ಸಾಹೇಬರು ಈ ಸಭೆಗೆ ದಯಮಾಡಿಸಿದ ಸ್ಮರಣಾರ್ಥವಾಗಿಯೂ ಇವರನ್ನು ಪ್ರೆಸಿಡೆಂಟರನ್ನಾಗಿ ನೇಮಿಸಿಕೊಂಡು "ಮಹಿಳಾ ಜ್ಞಾನೋತ್ಕರ್ಷ ಸಂಘವೆಂಬದೊಂದು ಮಂಡಲವನ್ನು ಸ್ಥಾಪಿಸಿಕೊಂಡರು."

(ಈ ಸಂಘದವರ ಉದ್ದೇಶದಂತೆಯೇ ಈ ಪತ್ರಿಕೆಯೂ ಹೊರಡುತ್ತಿರುವದು. ಈ ಸಂಘದವರಿಂದ ನಂಮ ಕರ್ನಾಟಕದ ಭಗಿನಿಯರಿಗಾಗುವ ಅಮೌಲ್ಯವಾದ ಲಾಭವು ಈ ಪತ್ರಿಕೆಯಿಂದಲೇ ಗೊತ್ತಾಗುವದು.)

ಅನೇಕ ಮಕ್ಕಳನ್ನು ಹಡೆದು ಅವರ ಅಹಿಕ ಪಾರಮಾರ್ಥಿಕ ಸುಖದಕಡೆಗೆ ಲಕ್ಷವಂನೀಡದೇ ಯಾವದೋ ಒಂದು ಅಯೋಗ್ಯವಾದ ವಿಚಾರದಿಂದ ಹೆಣ್ಣುಮಕ್ಕಳಿಗೆ ವಿದ್ಯವನ್ನು ಕಲಿಸದೇ ಅವರ ಹಾಗು ತಂಮ ಭಾವೀಸಂತತಿಯ ಉಂನತೆಯನ್ನು ಮಂಣುಪಾಲುಮಾಡುವ ಸಮಾಜ ಸುಧಾರಣಾ ಘಾತಕರಾದ ತಾಯಿತಂದೆಗಳನ್ನು ಸ್ಮರಿಸದೆ ತಾವು ಪರದೇಶದವರಾಗಿದ್ದರೂ ಅಜ್ಞಾನಾವಸ್ಥೆಯಲ್ಲಿರುವ ನಮ್ಮ ಕರ್ನಾಟಕದ ಸರ್ವಭಾಗದ ಹೆಣ್ಣುಮಕ್ಕಳನ್ನು ಸುಧಾರಿಸಿದ ರಾಷ್ಟ್ರದವರಂತೆ ಮುಂದಕ್ಕೆ ತರಬೇಕೆಂಬ ಕನಿಕರದಿಂದ ತಂತಂ ತನು, ಮನ, ಧನವನ್ನರ್ಪಿಸಿ, ಅಹೋರಾತ್ರಿ ಶ್ರಮಪಡುವ ನಮ್ಮ ಈ ಮೆ॥ ಮೆಕಾಫಿ ಸಾಹೇಬರವರಿಗೆ ಪರಮಾತ್ಮನೂ ದೀರ್ಘಾಯುರಾರೋಗ್ಯವನ್ನೂ ಉತ್ತರೋತ್ತರ ದೊಡ್ಡ ಅಧಿಕಾರವನ್ನೂ ಕೊಟ್ಟು ರಕ್ಷಿಸಲಿ. ಮತ್ತು ಸ್ತ್ರೀಸಮಾಜದ ಏಳ್ಗೆಗಾಗಿ ಇವರನ್ನು ನಂಮ ಕರ್ನಾಟಕಕ್ಕೆ ಕಳಿಸಲು ಅಪ್ಪಣೆಯನ್ನಿತ್ತ ಪಂಚಜಾರ್ಜ ಸಾರ್ವಭೌಮರಿಗು ಹಾಗು ಡೆಕ್ಕದ ಮೇರಿ ಮಹಾರಾಜ್ಞಿಯವರಿಗೂ ಈಗ ಒದಗಿರುವ ಯುದ್ಧ ಕಂಟಕವು ನಾಶವಾಗಿ ನಿರಂತರ ಸುಖಸಮೃದ್ಧಿಯನ್ನು ಹೊಂದಲೆಂದು ಶ್ರೀ ಜಗದೀಶನನ್ನು ಅನನ್ಯಭಾವದಿಂದ ಸರ್ವಮಹಿಳೆಯರು ಪ್ರಾರ್ಥಿಸಬೇಕಾಗಿದೆ. ❑

೩

ಶ್ರೀ ಭಾಗೀರತಿಬಾಯಿ ಪುರಾಣಿಕರು

ಆರ್. ಕಲ್ಯಾಣಮ್ಮ

ಶ್ರೀಶಾರದಾ ಸ್ತ್ರೀ ಸಮಾಜ (೧೯೧೩) ಸರಸ್ವತಿ (೧೯೧೭) ಅಖಿಲ ಕರ್ನಾಟಕ ಮಕ್ಕಳ ಕೂಟ (೧೯೩೮) ಹೀಗೆ ಕರ್ನಾಟಕದ ನೆಲದಲ್ಲಿ ಮಹಿಳೆಯರ ಸಂಘಟನೆ, ಪತ್ರಿಕೋದ್ಯಮ, ಮಕ್ಕಳ ಕಲ್ಯಾಣ, ಸಾರ್ವಜನಿಕ ಏಳಿಗೆಗಾಗಿ ಹಗಲೂ ಇರುಳೂ ದುಡಿದ ಲೇಖಕಿ, ಸಮಾಜ ಸೇವಕಿ, ಹೋರಾಟಗಾರ್ತಿ ಆರ್. ಕಲ್ಯಾಣಮ್ಮ ಅವರು. ಎ.ಆರ್. ಕೃಷ್ಣಶಾಸ್ತ್ರಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್ - ಅವರು ಕನ್ನಡಕ್ಕಾಗಿ ದುಡಿಯುವವರನ್ನು ಕಣ್ಣಲ್ಲಿ ಕಣ್ಣಿಟ್ಟು ಹುಡುಕಿ, ಕಾಪಾಡಿದಂತೆಯೇ; ಮಹಿಳೆಯರನ್ನೂ ಮಕ್ಕಳನ್ನೂ ನಾಡಿನಾದ್ಯಂತ ತಾವೇ ಸ್ವತಃ ಹುಡುಕಿ, ಉತ್ತೇಜನ ನೀಡಿದವರು ದಿವಂಗತ ಕಲ್ಯಾಣಮ್ಮ. ಅದಕ್ಕೆ ಸಾಕ್ಷಿ ೧೯೪೦ ಜೂನ್, ಸಂಪುಟ ೧೯, ಸಂಚಿಕೆ ೬ರಲ್ಲಿ ತಾವೇ ಬರೆದ ಈ ವ್ಯಕ್ತಿಚಿತ್ರ. ಅಂದೇ ಅಖಂಡ ಕರ್ನಾಟಕದ ಏಳಿಗೆ ಬಯಸಿದ್ದ ಅವರು, ಮಹಿಳೆಯ ಹೆಸರಿನ ಮುಂದೆ ಶ್ರೀ ಶಬ್ದ ಪ್ರಯೋಗ ಮಾಡಿದ ಧೀಮಂತೆ ಎಂಬುದೂ ಇಲ್ಲಿ ಗಮನಿಸಬೇಕಾದ ಮಹತ್ತ್ವದ ಅಂಶ.

ಸಂಪಾದಕ

ಬಾಲಕಿಯರಿಗೆ ಸ್ವಾವಲಂಬನ ಶಿಕ್ಷಣ ಕೊಡುವ ಸಂಸ್ಥೆಯಾದ ಧಾರವಾಡದ "ವನಿತಾಸೇವಾ ಸಮಾಜ"ದ ವಿಷಯವನ್ನು ನಮ್ಮಲ್ಲಿ ಅನೇಕರು ತಿಳಿದಿರಬಹುದು. ಈ ಸಂಸ್ಥೆಯು ೧೯೨೮ನೇ ಇಸವಿ ಮಾರ್ಚಿ ತಿಂಗಳಲ್ಲಿ ಧಾರವಾಡದ ಕೆಲವು ಹಿತೈಷಿಗಳ ಪ್ರಯತ್ನದಿಂದ ಸ್ಥಾಪಿತವಾಯಿತು. ನಮ್ಮ ಸಮಾಜದ ಪರಿಸ್ಥಿತಿಯು ಬಹಳ ಬಿಕ್ಕಟ್ಟಾಗಿರುವ ಕಾಲದಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಇಂತಹ ಸಂಸ್ಥೆಗಳನ್ನು ತೆರೆಯುವ ಕೆಲಸವೆಂದರೆ ಬಹಳ ಕಷ್ಟದ ಕೆಲಸ. ಸ್ತ್ರೀಯರ ಪ್ರಗತಿಯು ಸರಿಬೀಳದ ಕೆಲವರು ಮಹಾಪ್ರಳಯದ ಚಿನ್ಹೆಗಳೇ ಇಂತಹ ಕಾರ್ಯಗಳನ್ನು ತೊಡಗುವವು ಎಂದು ಭಾವಿಸುವ ಕಾಲ. ಅಂತಹ ವಿಷಮ ಪರಿಸ್ಥಿತಿಯಲ್ಲಿಯೂ ಬಾಲಕಿಯರಿಗೆ, ನಿರಾಶ್ರಿತರಿಗೆ, ಮಾರ್ಗ ತಪ್ಪಿದವರಿಗೆ ಸ್ವಾವಲಂಬನ ಶಿಕ್ಷಣ ಕೊಡುವ ಶಾಲೆಯು ಧಾರವಾಡದಂತಹ ಕಡೆ ಸ್ಥಾಪಿತವಾಯಿತೆಂದರೆ ಅದು ಆಶ್ಚರ್ಯದಾಯಕವಾದುದೇ ಸರಿ. "ವಿದ್ಯೆ ಕಲಿತು ಗಂಡಸರು ಉದ್ಧಾರವಾದರು. ಇನ್ನು ಹೆಂಗಸರು ಕಲಿತು ಭರತಖಂಡವನ್ನು ಹಾಗೇ ಸ್ವರ್ಗಕ್ಕೇರಿಸುತ್ತಾರೆ" ಎಂದು ಹಳಿಯುವರ ಸಂಖ್ಯೆಯೇ ಹೆಚ್ಚಾಗಿತ್ತು. ಎದುರಾಗುವ ಎಡರುಗಳನ್ನು ಎದುರಿಸಿ ವಸಿಷ್ಠರ ಬ್ರಹ್ಮದಂಡದಂತೆ ಅಚಲವಾಗಿ ನಿಂತ ಸಂಸ್ಥೆಯ ಸ್ಥಾಪಕರಾದ ಶ್ರೀ ಭಾಗೀರಥೀಬಾಯಿ ಪುರಾಣಿಕರ ಸತತ ಪ್ರಯತ್ನ ಫಲವಾಗಿ ನಿರ್ಗತಿಕರಾದ ಸಾವಿರಾರು ಮಹಿಳೆಯರಿಗೆ ಜೀವದಾನ ಮಾಡುವ ಸಂಸ್ಥೆಯಾಗಿ ಇಂದು ನಿಂತಿದೆ. ಅಂದು ಹಳಿದವರು ಇಂದು ಸಹಾಯಕರಾಗಿರುವರು. ಅಂದು ದೂರಿದವರು ಇಂದು ಸಹಸ್ರಮುಖದಿಂದ ಹೊಗಳುತ್ತಿರುವರು. ಇದೊಂದು ನಮ್ಮ ಸಮಾಜವನ್ನಾವರಿಸಿರುವ ದುಷ್ಟದುರಾಚಾರ. ಯಾರಾದರೊಬ್ಬರು ಒಳ್ಳೆಯ ಕೆಲಸ ಮಾಡಲು ಮುಂದಾದರೆಂದರೆ ಅವರು ತಗ್ಗಿ, ಬಗ್ಗಿ, ಕುಗ್ಗಿ ನೆಲಕ್ಕೆ ಬೀಳುವವರೆಗೂ ಅಂದು ಆಡಿ ದೂರಿ ನಿಷ್ಠುರಮಾಡುವರೇ ವಿನಹ ಅವರಿಗೆ ಬೆಂಬಲವಾಗಿ ನಿಂತು ಸಂಸ್ಥೆಯ ಉದ್ಧಾರಕ್ಕಾಗಿ ನೆರವಾಗುವವರು ಯಾರು ಇಲ್ಲ. ಅದರಲ್ಲೂ ಕಾರ್ಯರಂಗಕ್ಕಿಳಿಯುವವರು ವಿಧವೆಯರಾದರಂತೂ ಅವರ ಪಾಡು ನಾಯಿ ನರಿಗಳಿಗೂ ಬೇಡ. ಹೀಗಿರುವುದರಿಂದ ನಮ್ಮಲ್ಲಿಯ ಸಂಸ್ಥೆಗಳಲ್ಲಿ ಕೆಲವು ಹುಟ್ಟಿದ ವಾರದೊಳಗಾಗಿ ಸಾಯುವುದು. ಕೆಲವು ಉಳಿದರೂ ಹೇಳುವರು ಕೇಳುವರಿಲ್ಲದೆ ತಾಯಿಲ್ಲದ

ಮಗುವಿನಂತೆ ಸೊರಗುತ್ತಿರುವುದು. ಸಂಸ್ಥೆಗಳಲ್ಲಿ ಸಹಾಯಕ್ಕಾಗಿ ಬಂದವರು ಬೀದಿಬೀದಿ ಅಲೆಯುತ್ತಿರುವುದು. ಇವೆಲ್ಲವೂ ನಮಗೆ ಹೊಸದಾದುದಲ್ಲ. ಪತಿವಿಯೋಗವನ್ನು ಹೊಂದಿದ ದುರ್ದೈವೀ ಸೋದರಿಯರು ತಮ್ಮ ಹಣದಿಂದ ತಮ್ಮ ಶಕ್ತಿಯಿಂದ ತಮ್ಮ ಆತ್ಮಶಕ್ತಿಯಿಂದ ಎಂತೆಂತಹ ಕಾರ್ಯಗಳನ್ನು ಮಾಡಬಲ್ಲರೆಂಬುದಕ್ಕೆ ಅನೇಕ ವಿಧವಾ ಮಹಿಳೆಯರು ನಿದರ್ಶನರಾಗಿದ್ದಾರೆ. ಗಂಡ ಹೋದನೆಂದು ತಲೆಯ ಮೇಲೆ ಕೈಯಿಟ್ಟುಕೊಂಡು ಮೂರುಹೊತ್ತೂ ನೋಡುವವರಿಗೆ ಬೇಸರವಾಗುವಂತೆ ಮುಖ ಗಂಟುಹಾಕಿಕೊಂಡೋ, ಇತರರ ಮೇಲೆ ಕೋಪತಾಪಗಳನ್ನು ಪ್ರದರ್ಶಿಸುತ್ತಲೋ, ತಾನು ಸುಖದಿಂದ ವಂಚಿತಳಾದದ್ದಕ್ಕಾಗಿ ಸುಖಸಂತೋಷದಿಂದ ಇರುವವರನ್ನು ಕಂಡು ಕರುಬುತ್ತಲೋ ನೋಡುವವರಿಗೆ ಒಂದು ದೌರ್ಜನ್ಯದ ಮೂರ್ತಿಯಾಗಿ ಕಾಣುವುದಕ್ಕಿಂತ ಇಂತಹ ಸಂಸ್ಥೆಗಳನ್ನು ಸ್ಥಾಪಿಸಿಯೋ, ಬೇರಾವ ರೀತಿಯಾಗಿಯೋ ಸಮಾಜಸೇವೆ ಮಾಡಿ ಕಾಲವನ್ನು ಒಳ್ಳೆಯ ರೀತಿಯಲ್ಲಿ ಕಳೆಯುವುದರಿಂದ ಅವರ ಜೀವಕ್ಕೂ ಒಂದು ಬಗೆಯ ಆನಂದವುಂಟಾಗುವುದು. ಅಜ್ಞಾನದಿಂದ ತುಂಬಿರುವ ಎಷ್ಟೋ ಮಂದಿ ಅನಾಥರಿಗೆ ಬೆಳಕು ತೋರಿದಂತಾಗುವುದು. ಹಿಂದೂ ದೇಶದಲ್ಲಿ ವಿಧವೆಯರ ಕಷ್ಟವು ಅವರು ದಿನಗಳೆಯುವ ರೀತಿಯು ಹೇಗಿರುವುದೆಂಬುದನ್ನು "ಬಲ್ಲವನೇ ಬಲ್ಲ ಬೆಲ್ಲದ ಸವಿಯ" ಎಂಬಂತೆ ಅನುಭವಿಸುವವರಿಗೇ ಗೊತ್ತಲ್ಲದೆ ಇತರರು ಅರಿಯಲು ಸಾಧ್ಯವಿಲ್ಲ. ಇಂತಹ ಅನುಭವನದಲ್ಲಿ ಸಿಕ್ಕಿದವರೊಲ್ಲಬ್ಬರು ಈ ಸಂಸ್ಥೆಯ ಸಂಚಾಲಕರಾದ "ಶ್ರೀ ಭಾಗೀರಥೀಬಾಯಿ ಪುರಾಣಿಕ್" ಅವರು, ಅವರ ಸಂಕ್ಷಿಪ್ತ ಚರಿತ್ರೆಯಿದು.

ಈಕೆಯ ಜನ್ಮಸ್ಥಳವು ಬೆಳಗಾಂ ಜಿಲ್ಲೆಯಲ್ಲಿರುವ "ಮುರಗೋಡು" ಎಂಬ ಊರು. ಪವಿತ್ರಕ್ಷೇತ್ರವೆಂದು ಹೆಸರು ಪಡೆದ ಈ ಊರು ಈಚಿನ ರಾಷ್ಟ್ರೀಯ ಚಳುವಳಿಯಲ್ಲಿಯೂ ತನ್ನ ವರ್ಚಸ್ಸು ಕರ್ಣಾಟಕದಲ್ಲೆಲ್ಲಾ ಬೆಳಗುವಂತೆ ಮಾಡಿದೆ. ಈ ಕ್ಷೇತ್ರದಲ್ಲಿ ವೈಕುಂಠವಾಸಿ 'ಬಿಂದಾಚಾರ್ಯ ಮಂಗಳವೇಡೆ' ಎಂಬ ಸುಪ್ರಸಿದ್ಧ ಸಾಹುಕಾರರ ಮನೆತನದಲ್ಲಿ ಶ್ರೀ ವಾಮನಾಚಾರ್ಯರು, ಸೌ॥ ಸಾವಿತ್ರಿಬಾಯಿ ಇವರುಗಳಿಗೆ ಈಕೆಯು ಮಗಳಾಗಿ ೧೮೮೯ನೆಯ ಇಸವಿಯಲ್ಲಿ ಜನಿಸಿದಳು. ಈಕೆಯ ಮನೆತನವು ಪುರಾತನ ಪದ್ಧತಿಯನ್ನುನುಸರಿಸುವವರಾದ್ದರಿಂದ ಆರು ವರ್ಷವಾದ ಈಕೆಯನ್ನು ಸಮೀಪದಲ್ಲಿರುವ ಶಾಲೆಗೆ ಕಳುಹಿಸಲೂ ಇವರು ಒಪ್ಪಲಿಲ್ಲ. ಒಂದು ದಿನ ತನ್ನ ಗೆಳತಿಯೊಡನೆ ಶಾಲೆಗೆ ಹೋದುದಕ್ಕಾಗಿ ಏಟು ತಿಂದುದನ್ನು ಇಂದೂ ಅವರು ನೆನಸಿಕೊಳ್ಳುತಿದ್ದಾರೆ. ಮನೆಯಲ್ಲಿ ಸ್ವಲ್ಪಮಟ್ಟಿಗೆ ಸಂಗೀತ ಮತ್ತು ಓದು ಬರೆಯುವುದು ಇಷ್ಟು ಮಾತ್ರ ಕಲಿತುಕೊಂಡರು. ಹತ್ತು ವರ್ಷದವರಾದಾಗ ಈಕೆಯನ್ನು ಮುನವಳ್ಳಿಯ ರಂಗಾಚಾರ್ಯ ಪುರಾಣಿಕ ಎಂಬ ೧೫-೧೬ ವರ್ಷದ ಹುಡುಗನಿಗೆ ಕೊಟ್ಟು ಲಗ್ನ ಮಾಡಿದರು. ಲಗ್ನವಾದ ಒಂದೆರಡು ವರ್ಷಗಳೊಳಗೆ ಪತಿಯು ಪ್ಲೇಗಿನಿಂದ ಸತ್ತನು. ಸ್ವಲ್ಪ ದಿನಗಳಲ್ಲಿಯೇ ತಾಯಿ, ತಂದೆ, ಅಜ್ಜ ಎಲ್ಲರೂ ಒಬ್ಬರ ಹಿಂದೆ ಒಬ್ಬರು ಅದೇ ರೋಗಕ್ಕೆ ತುತ್ತಾದರು. ಅವಿವಾಹಿತೆಯರಾದ ಇಬ್ಬರು ತಂಗಿಯರು ಮಾತ್ರ ಉಳಿದರು. ಇಂದಿನಿಂದ ಪ್ರಾರಂಭವಾಯಿತು. ಶ್ರೀ ಭಾಗೀರಥೀಬಾಯಿಯ ಸತ್ವಪರೀಕ್ಷೆಯ ಕಾಲ. ಸ್ತ್ರೀಯರಿಗೆ ವಿಘಾತವಾದ ವಾರಸಹಕ್ಕಿನ ಕಾಯಿದೆಯನ್ನು ಸರ್ಕಾರದವರು ತಂದಿಟ್ಟರು. ರೂಢಿಯೆಂಬ ರಾಕ್ಷಸನು ಅದಕ್ಕೆ ಸಾಕಾದಷ್ಟು ಬೆಂಬಲಕೊಟ್ಟನು. ಸಮೀಪ ವಾರಸದಾರರು ಯಾರೂ ಇಲ್ಲ. ಕಾಣದ ದೂರದ ಬಂಧುವೊಬ್ಬನು ತನ್ನ ವಾರಸತ್ವದ ಹಕ್ಕಿನ ಅರ್ಜಿಯನ್ನು ಚಾಚಿದನು. ಕೋರ್ಟ್ ಆಫ್ ವಾರ್ಡ್ಸ್ ಅವರ ವಶಕ್ಕೆ ಎಲ್ಲಾ ಸ್ಥಾವರ ಜಂಗಮ ಆಸ್ತಿಯೂ ಹೋಗುವಂತೆ ತೀರ್ಪಾಗಿ ಸರ್ಕಾರದ ಜಪ್ತೀ ಹುಕುಂ ಆಯಿತು. ಜಪ್ತಿ ಮಾಡಲು ಅಧಿಕಾರಿಗಳು ಬಂದರು. ಎಲ್ಲ ಆಸ್ತಿಯೂ ಆ ದಾಯಾದಿಯ ಪಾಲಾಯಿತು. ಉಟ್ಟಬಟ್ಟೆಯಿಂದ ಮನೆ ಬಿಟ್ಟು ಹೊರಡುವ ಪ್ರಸಂಗವೊದಗಿತು.

ಶ್ರೀಮಂತಿಕೆಯಲ್ಲಿ ನಲಿಯುತ್ತಿದ್ದ ಶ್ರೀಮತಿಯವರು ಕಂಡವರ ಮನೆ ಕೂಳು ಬೇಯಿಸಿ ಹೊಟ್ಟೆ ಹೊರಕೊಳ್ಳತೊಡಗಿದರು. ತಾನು ಮಾತ್ರವಲ್ಲದೆ ಜೊತೆಯಲ್ಲಿ ಇಬ್ಬರು ತಂಗಿಯರು. ಒಂದೆರಡು ವರುಷಗಳು ಕಳೆದವು. ಅವರಿವರ ಪ್ರಯತ್ನದಿಂದ ಗಂಡನ ಆಸ್ತಿಯ ಉತ್ಪನ್ನದಿಂದ ವರ್ಷಕ್ಕೆ ಒಂದು ಸಾವಿರ ರೂಪಾಯಿಗಳು ದೊರೆಯುವಂತಾಯಿತು. ಕವಿದಿದ್ದ ಕತ್ತಲೆಯು ದೂರವಾಗಿ ಬೆಳಕುಂಟಾಯಿತು.

ಬಾಯಿಗೆ ಬಂದಂತೆ ಬೈದು ದೂರ ಅಟ್ಟಿದ್ದ ಬಂಧುಗಳು ಹತ್ತಿರ ಬಂದು ಕ್ಷೇಮಲಾಭ ವಿಚಾರಿಸಲಾರಂಭಿಸಿದರು. ಈ ವೇಳೆಗೆ ಶ್ರೀ ಭಾಗೀರಥಿಬಾಯಿ ಪುರಾಣಿಕರಿಗೆ ವಿಧವಾ ಜೀವನದ ಕಷ್ಟವೂ ಜೀವನ ಸಮಸ್ಯೆಯ ಪರಿಚಯವೂ ಬಹಳಮಟ್ಟಿಗಾಗಿದ್ದಿತು. ಪೂನಾ ಮಹಿಳಾ ವಿದ್ಯಾಲಯದ ಸಂಚಾಲಕರಾದ ಪ್ರೊಫೆಸರ್ ಕರ್ವೆಯವರು ಧಾರವಾಡಕ್ಕೆ ಬಂದು ಮರಾಟಿ ಭಾಷೆಯಲ್ಲಿ ಭಾಷಣ ಮಾಡಿದರು. ಅವರ ಭಾಷಣವನ್ನು ಕನ್ನಡಿಸುವ ಜವಾಬ್ದಾರಿಯೂ ಶ್ರೀ॥ ಭಾಗೀರಥೀಬಾಯಿಯವರ ಪಾಲಿಗೆ ಬಂದಿತು. ಭಾಷಣಾನಂತರ ಶ್ರೀ ಕರ್ವೆಯವರು ಶ್ರೀಮತಿಯವರನ್ನು ಸ್ತ್ರೀಜನ ಹಿತಕ್ಕೆ ಸಂಬಂಧವಾದ ಯಾವುದಾದರೊಂದು ಕಾರ್ಯವನ್ನು ಕೈಗೊಳ್ಳುವಂತೆ ತಿಳಿಸಿದಾಗ ತಾನು ಕಲಿತವರಲ್ಲದ್ದರಿಂದಲೂ ಬೆಂಬಲವಿಲ್ಲದ್ದರಿಂದಲೂ ಇಂತಹ ಮಹತ್ವದ ಕೆಲಸ ಮಾಡುವುದು ಸಾಧ್ಯವಿಲ್ಲವೆಂದು ಹೇಳಲು, ಅವರು ಧೈರ್ಯದಿಂದ ಕಾರ್ಯರಂಗಕ್ಕಿಳಿಯುವಂತೆ ಪ್ರೋತ್ಸಾಹಿಸಿದರು. "ಏನು ಮಾಡಬೇಕು, ಹೇಗೆ ಮಾಡಬೇಕು-ಎಂಬ ಮಂತ್ರದಲ್ಲಿ ಕೆಲವು ದಿನಗಳು ಕಳೆದವು. ೧೯೨೦ನೇ ಇಸವಿಯಲ್ಲಿ ನಿಸರ್ಗ ಚಿಕಿತ್ಸಕರಾದ "ಡಾಕ್ಟರ್ ಲಕ್ಷ್ಮೀವೆಂಕಟೇಶ ಮಳೇ ಬೆನ್ನೂರ್" ಅವರು ಕಾಲೇಜು ಶಿಕ್ಷಣವನ್ನು ಪೂರೈಸಿ ಕರ್ನಾಟಕ ಮಹಿಳೆಯರ ಹಿತಸಂಬಂಧವಾದ ಯಾವುದಾದರೊಂದು ಕಾರ್ಯವನ್ನು ಕೈಗೊಳ್ಳಬೇಕೆಂದೆಣಿಸಿ ಧಾರವಾಡದಲ್ಲಿ "ಮಹಿಳಾ ವಿದ್ಯಾಲಯ"ವೆಂಬ ಹೆಸರಿನ ಸಂಸ್ಥೆಯನ್ನು ಮಿತ್ರರ ಸಹಾಯದಿಂದ ಸ್ಥಾಪಿಸಿದರು. ತನ್ನ ಉದ್ದೇಶವು ನೆರವೇರಲು ಅನುಕೂಲ ದೊರೆತದ್ದು ಶ್ರೀಮತಿಯವರಿಗೆ ಬಹಳ ಆನಂದವಾಯಿತು. ಕೆಲವು ದಿನಗಳ ನಂತರ ಕಾರಣಾಂತರದಿಂದ ಮಹಿಳಾ ವಿದ್ಯಾಲಯವು ಮುಚ್ಚಲ್ಪಟ್ಟರೂ ಅದರ ಅವಶೇಷವಾಗಿ ಇಂದು ನಡೆಯುತ್ತಿರುವ "ವನಿತಾ ಸೇವಾ ಸಮಾಜ"ವು ಸ್ಥಾಪಿಸಲ್ಪಟ್ಟಿತು, ಸಮಾಜದ ಸ್ಥಾಪನೆಯು ಧಾರವಾಡದವರ ಕಿವಿಗೆ ಬಿದ್ದೊಡನೆಯೇ ಅದು ಸ್ಥಾಪನೆಯಾಗದಂತೆ ಎಷ್ಟೆಷ್ಟೋ ಪ್ರಚಾರಗಳಾಗತೊಡಗಿದವು. ಪ್ರಾರಂಭ ಸಮಾರಂಭಕ್ಕೆ ಯಾರೂ ಹೋಗಬಾರದೆಂದು ನಿಶ್ಚಯವಾಯಿತು. ಇವೆಲ್ಲ ಕಾರಣದಿಂದ ಸಂಸ್ಥೆಗೆ ಹಣ ಕೂಡಿಸುವುದೂ ವಿದ್ಯಾರ್ಥಿನಿಯರನ್ನು ಸೇರಿಸುವುದೂ ಬಹಳ ಕಷ್ಟವಾಯಿತು. ತನಗೆ ದೊರೆತ ಹಣದಲ್ಲಿ ಕೂಡ ಹಾಕಿದ್ದ ಎರಡು ಸಾವಿರ ರೂಪಾಯಿಯನ್ನು ಶ್ರೀಮತಿ ಪುರಾಣಿಕರು ಕೊಟ್ಟರು. ಆ ಊರಿನ ಅಧಿಕಾರಿಗಳ ಮನೆಯ ಸುಶಿಕ್ಷಿತ ಸ್ತ್ರೀಯರು ಸಂಸ್ಥೆಯಲ್ಲಿ ಸೇರಿ ಕೆಲಸ ಮಾಡಲು ಇಷ್ಟಪಟ್ಟರೂ ಊರಿನವರಿಗೆ ಅಂಜಿ ವೈಯಕ್ತಿಕವಾಗಿ ತಮ್ಮ ಹೆಸರು ಪ್ರಚಾರಕ್ಕೆ ಬರಲು ಹೆದರುತ್ತಿದ್ದರು. ವಿಚಾರ ಕ್ರಾಂತಿಯ ನೂತನ ಯುಗದ ಆರಂಭವು ಹೀಗಾಗುವುದು ಸಹಜವು.

ಪ್ರಕ್ಷುಬ್ಧ ವಾತಾವರಣದ ಸಲುವಾಗಿ ಸುಪ್ರಸಿದ್ಧ ರೀತಿಯಿಂದ ಧನಸಹಾಯ ಮಾಡಿ ಹಿತಚಿಂತಕರೊಳಗೆ ತಮ್ಮ ಹೆಸರನ್ನು ಸೇರಿಸಿ ಸಂಸ್ಥೆಗೆ ನೈತಿಕ ಬೆಂಬಲವನ್ನು ಕೊಡುವಂಥ ಮಾನಸಿಕ ಧೈರ್ಯವು ಅವರಿಗಾಗಲಿಲ್ಲ. ಮನದೊಳಗೆ ಎಷ್ಟೇ ಸಹಾನುಭೂತಿಯಿದ್ದರೂ ಅದನ್ನು ಪ್ರಕಾಶಪಡಿಸುವ ವಿಚಾರ ಸ್ವಾತಂತ್ರ್ಯವೂ ಸ್ವಾವಲಂಬನವೂ ಅವರಲ್ಲಿರಲಿಲ್ಲ. ಕೆಲವರಂತೂ ಪರಾವಲಂಬನೆಯ ಸುಖ ಲೋಲುಪತೆಯಲ್ಲಿಯೇ ಸ್ವರ್ಗಾನುಭವವನ್ನು ಪಡೆವ ತಮ್ಮ ಪರಂಪರಾಗತ ನಡೆಯನ್ನು ಬಿಡಲು ಸಿದ್ಧರಾಗಲಿಲ್ಲ. ಸ್ತ್ರೀ ಸಮಾಜೋದ್ಧಾರದಂತ ಮಹಾ ಕಾರ್ಯವು ಇಂತಹ ಅಳ್ಳೆದೆಯವರಿಂದ ಹೇಗಾದೀತು! ನಿಸ್ವಾರ್ಥತೆಯೂ ನೈತಿಕ ಶಕ್ತಿಯೂ ಇದಕ್ಕೆ ಅತ್ಯಗತ್ಯವಾಗಿರಬೇಕು. ಸಾಮಾನ್ಯ ಜನರಲ್ಲಿ ಮಿಳಿತರಾಗಿ ಕಷ್ಟಗಳನ್ನನುಭವಿಸಿ ಅಜ್ಞ ಜನರ ನಿಂದಾವಾಕ್ಯದ ಸುರಿಮಳೆಯಲ್ಲಿ ನೆನೆದು ತನ್ನ ನೈತಿಕ ಶಕ್ತಿ, ಧೈರ್ಯ ರೂಪ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾದ ವೀರರಮಣಿಯರೇ ಇಂತಹ ಸಾಹ ಕಾರ್ಯಗಳನ್ನು ಮಾಡಬಲ್ಲರೇ ಹೊರ್ತು ಎಲ್ಲಿಂದಲೂ ಸಾಧ್ಯವೇ ಇಲ್ಲ.

ಅಧಿಕಾರದಿಂದಲೂ ಹಣದಿಂದಲೂ ಬಲಿಷ್ಠರಾದ ಹಕ್ಕನ್ನು ಪಡೆದ ಪುರುಷ ವರ್ಗವು ಅಬಲೆಯರ ಮೇಲೆ ತಮ್ಮ ಸರ್ವಾಧಿಕಾರವನ್ನು ನಡೆಸುತ್ತಿರುವಾಗ ಪುರುಷರ ಸಹಾಯವಿಲ್ಲದೆ ಒಂದು ಕಡ್ಡಿಯನ್ನು ಕೂಡ ಎತ್ತಿ ಆಚೆ ಇಡುವ ಸಾಮರ್ಥ್ಯವು ಸ್ತ್ರೀವರ್ಗಕ್ಕೆಲ್ಲಿಂದ ಬರಬೇಕು? ಸ್ವಾಭಿಮಾನ ಶೂನ್ಯತೆಯೇ ಹುಟ್ಟುಗುಣವಾಗಿರುವ ಸುಶಿಕ್ಷಿತರೆನಿಸಿಕೊಳ್ಳುವ ಸ್ತ್ರೀ ಸಮಾಜದ ಗತಿಯೇ ಹೀಗಾದ ಮೇಲೆ ಅಶಿಕ್ಷಿತ

ಅಬಲೆಯರ ಪಾಡೇನು? "ತೊಟ್ಟಿಲನ್ನು ತೂಗುವ ಕೈಯೇ ದೇಶವನ್ನು ತೂಗುವುದು" ಎಂಬ ನಾಣ್ಣುಡಿಯು ದೊಡ್ಡವಾದ ಕೈಗಳಿಂದ ಸುಶೋಭಿತವಾಗಿ ಶಾಲೆಗಳೊಳಗಿನ ಉಳಿದ ನೀತಿ ವಾಕ್ಯಗಳ ಸಾಲಿನಲ್ಲಿ ಪ್ರಕಾಶಿಸುವುದು. ಸ್ತ್ರೀಯರ ವಸ್ತುಸ್ಥಿತಿಯನ್ನು ಅರಿತವರಿಗೆ ಈ ವಾಕ್ಯವು ತನ್ನ ನಿರರ್ಥಕತೆಯ ಪ್ರದರ್ಶನವನ್ನೇ ಮಾಡುತ್ತಿರುವಂತೆ ಭಾಸವಾಗುವುದು.

ಸ್ತ್ರೀ ಸಮಾಜವು ಇನ್ನಾದರೂ ಎಚ್ಚರಗೊಳ್ಳದಿದ್ದರೆ ದೇಶವನ್ನೇಕೆ? ತೊಟ್ಟಿಲನ್ನು.... ಅಡಿಗೆ ಮನೆಯೊಳಗಿನ ನೆಲವನ್ನು ಕೂಡ ಚಲಿಸುವಂತೆ ಮಾಡಲು ಅಸಮರ್ಥರಾಗುವುದೆಂಬುದನ್ನು ನೆನಪಿಗೆ ತಂದುಕೊಂಡು ತಾವು ಪುರುಷರ ಆಟದ ವಸ್ತುಗಳು ತಾವೆಂಬುದನ್ನು ಮರೆತು, ತಮಗೂ ಜೀವವಿದೆ, ಮೆದುಳಿದೆ ಎಂಬುದನ್ನೂ, ತಮ್ಮಲ್ಲಿ ಸ್ವಭಾವ ಸಿದ್ಧವಾಗಿರುವ ಸೌಂದರ್ಯವನ್ನು ಮೃದುತ್ವಾದಿ ಸಾಧನಗಳಿಂದಲೇ ಸ್ಪಷ್ಟಮಾಡಿ ತೋರಲೂ ಅಂಜುವಂತಹ ಪರಿಸ್ಥಿತಿಯಲ್ಲಿ ಇಂದಿನ ಮಹಿಳಾ ವರ್ಗವಿರುವುದೆಂದು ಹೇಳುವುದರಲ್ಲಿ ಆಶ್ಚರ್ಯವೇನು?

ಇಂತಹ ನಿರ್ಜೀವ ಸ್ತ್ರೀ ಸಮೂಹದ ಸಹಾಯದಿಂದ "ವನಿತಾ ಸೇವಾ ಸಮಾಜ"ದಂತಹ ಸಂಸ್ಥೆಗೆ ತ್ರಿಕರಣಪೂರ್ವಕವಾದ ಬೆಂಬಲವನ್ನು ದೊರಕಿಸಿಕೊಳ್ಳುವುದು ಭಾಗೀರಥೀಬಾಯಿಯವರಿಗೆ ಬಹಳ ಕಷ್ಟವಾಯಿತು. ಆದರೂ ಆಕೆಯು ಎದೆಗುಂದದೆ ಉದ್ದಿಷ್ಟವಾದ ಕಾರ್ಯಸಾಧನೆಗಾಗಿ ಎದುರಾದ ಎಡರುಗಳನ್ನೂ ಮಾನಾಪಮಾನಗಳನ್ನೂ ಲಕ್ಷಿಸದೆ ಸದ್ವಿವೇಕದಿಂದಲೂ ಧೀರತ್ವದಿಂದಲೂ ಮುಂದಡಿಯಿಟ್ಟರು. ದೇಹದಲ್ಲಿ ಕರ್ತೃತ್ವ ಶಕ್ತಿಯಿದ್ದರೂ ಪ್ರಾಪಂಚಿಕ ಕಷ್ಟಗಳಿಂದಲೂ ಅಜ್ಞಾನದಿಂದಲೂ ನರಳುತ್ತಿರುವ ಕೇವಲ ಸಮಾಜದ ಅಂಧ ರೂಢಿಗಳ ಮೂಲಕ ಸಮಾಜದಿಂದ ತಿರಸ್ಕೃತರೂ ಪತಿತರೂ ಆದಂಥಾ, ಸಾಕಾದಷ್ಟು ಸಂಪತ್ತಿದ್ದರೂ ದುಷ್ಟರ ದವಡೆಯಲ್ಲಿಯೂ, ದುರ್ದೈವದ ಕಾಲ ಚಕ್ರದಲ್ಲಿಯೂ ಸಿಕ್ಕಿಕೊಂಡು ತೊಳಲುತ್ತಿರುವಂತಹ ಕೆಲವು ಮಂದಿ ಸೋದರಿಯರ ಕೈಹಿಡಿದು ಅವರ ದುಃಖದಲ್ಲಿ ತಾವೂ ಭಾಗಿಗಳಾಗಿ ಅವರಿಗೆ ಕೈಲಾಗುವಷ್ಟು ಸಹಾಯವನ್ನಿತ್ತು ಅವರನ್ನು ತಮ್ಮ ಸಹಾಯಕರನ್ನಾಗಿ ಮಾಡಿಕೊಂಡರು.

ಈ ರೀತಿಯಾಗಿ ಸಮಾಜದಿಂದ ಉದುರಿಬಿದ್ದರೂ ಇವರಿಂದ ಉದ್ಧೃತರಾದ ಕೆಲವು ಮಂದಿ ಸ್ತ್ರೀರತ್ನಗಳ ಬೆಂಬಲವು ಈ ಸಂಸ್ಥೆಗೆ ದೊರೆಯಿತು. ಇಂತಹವರಿಗೆ ಸಹಾಯ ಮಾಡಿದರೆ ಅವರು ತಮ್ಮ ಯೋಗಕ್ಷೇಮವನ್ನು ತಾವೇ ನೋಡಿಕೊಳ್ಳುವುದು ಮಾತ್ರವಲ್ಲದೆ ತಾವನುಭವಿಸಿದ ಕಷ್ಟದ ಅನುಭವದಿಂದ ಸಮಾಜ ಸೇವೆಯನ್ನು ಹೇಗೆ ಮಾಡಬಹುದೆಂಬ ಪಾಠವನ್ನು ಇವರಿಂದ ಸಮಾಜಕ್ಕೆ ಕಲಿಸಿದಂತಾಗುವುದು. ಮೊದಲು ಶ್ರೀಮತಿಯವರ ಸಹಾಯಕ್ಕೆ ಬಂದವರು ಐದು ಮಂದಿ ದುಃಖಿತ ಮಹಿಳೆಯರು. ಅವರ ಸಹಾಯದ ಅಸ್ತಿಭಾರದ ಮೇಲೆಯೇ ಇಂದಿನ "ವನಿತಾ ಸೇವಾ ಸಮಾಜ"ದ ಕಟ್ಟಡವು ಸ್ಥಿರವಾಗಿ ನಿಂತಿದೆಯೆಂದು ಹೇಳಬಹುದು.

ಅಲ್ಲಿ ಶಿಕ್ಷಣ ಪಡೆಯುವವರು ಮನೆಯವರಿಂದ ಒಂದು ಪ್ರೀತಿಯ ಮಾತಿಗಾಗಿ ಹಾತೊರೆಯುವವರಾಗಿ ದುಷ್ಟರ ಬಲೆಗೆ ಬಿದ್ದು ಪತಿತೆಯೆನಿಸಿಕೊಂಡವರೂ, ತಿನ್ನಲು ಗತಿಯಿಲ್ಲದೆ ಕಂಡಕಂಡವರನ್ನು ಬೇಡುವವರೂ, ಸಮಾಜದ ದೌರ್ಜನ್ಯದಿಂದ ದೂಡಲ್ಪಟ್ಟವರೂ ಗಂಡನೊಡನೆ ಜಗಳವಾಡಿಕೊಂಡು ಬಂದವರೂ ಪತಿ ಸುಖದಿಂದ ವಂಚಿತರಾದವರೂ ಇವರುಗಳೇ. ಓದುವುದು, ಬರೆಯುವುದು, ಕಸೂತಿ, ಹೊಲಿಗೆ, ಜಿಗಿನ ಕೆಲಸ, ಕಾಗದದ ಬಟ್ಟೆಯ ಹೂಗಳನ್ನು ಕತ್ತರಿಸುವುದು, ಉಪನ್ಯಾಸ ಕೇಳುವುದು ಇವೇ ಮೊದಲಾದ ಶಿಕ್ಷಣಗಳು ದೊರೆಯುತ್ತಿರುವುದು. ಸಂಸ್ಥೆಯು ದೊಡ್ಡದಾಗಿ ಬೆಳೆದು ಎಲ್ಲರ ಕಣ್ಣಿಗೂ ಕಾಣುವಂತಾಗಲು ನಾನು ತಾನೆಂದು ಅನೇಕರು ಕೆಲಸ ಮಾಡಲು ಬಂದರು. ಮಹಿಳೆಯರನೇಕರು ಶ್ರೀಮತಿಯವರೊಡನೆ ಕೆಲಸಕ್ಕೆ ಸೊಂಟ ಕಟ್ಟಿ ನಿಂತರು. ಸಂಸ್ಥೆಗೆ ಹಿಡಿದಿದ್ದ ಬಾಲಗ್ರಹವು ದೂರವಾಗಿ ಸುಸೂತ್ರವಾಗಿ ನಡೆಯಲಾರಂಭಿಸಿತು. ಸ್ತ್ರೀಯರು ಸ್ವಾವಲಂಬಿಗಳಾಗಲು ಅನುಕೂಲಿಸುವಂತೆ ಹೊಲಿಗೆ, ಚಿತ್ರದ ಕೆಲಸ, ಪುಸ್ತಕಗಳನ್ನು ಬೈಂಡು ಮಾಡುವುದು, ಸಂಗೀತ,

ಆಯುರ್ವೇದ, ಸೂಲಗಿತ್ತಿತನ, ಲಾಟೀ, ಈಜುವುದು, ಮೊದಲಾದವುಗಳ ಶಿಕ್ಷಣ ದೊರೆತು ಅನೇಕ ಮಂದಿ ಮಹಿಳೆಯರು ಹಿಂದೂಸ್ಥಾನದ ಬೇರೆ ಬೇರೆ ಕಡೆಗಳಲ್ಲಿ ಉದ್ಯೋಗದಲ್ಲಿರುವರು. ಇವರ ಸೇವಾಕಾಂಕ್ಷೆಯನ್ನೂ ಕಾರ್ಯತತ್ಪರತೆಯನ್ನೂ ಕಂಡ ಬ್ರಿಟಿಷ್ ಸರ್ಕಾರದವರು ೧೯೩೩ನೇ ಇಸವಿಯಲ್ಲಿ ಶ್ರೀಮತಿಯವರಿಗೆ "ಕೈಸರ್ ಹಿಂದ್" ಪದಕವನ್ನು ಕೊಟ್ಟು ಸನ್ಮಾನಿಸಿದರು. ಸಂಸ್ಥೆಯು ಅನೇಕ ಸಭ್ಯಗೃಹಸ್ಥರ, ಸರ್ಕಾರದವರ ಸಹಾಯ ಸಹಾನುಭೂತಿಗಳನ್ನು ಪಡೆದು ಇಂದು ಕರ್ನಾಟಕದ ಒಂದು ಆದರ್ಶ ಸಂಸ್ಥೆಯೆನಿಸಿದೆ. ಒಂದು ಸಲ ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ವಹಿಸಿದ್ದ ಬೆಳಗಾಂವಿಯ ಸುಪ್ರಸಿದ್ಧ ವಕೀಲರೂ ಎಂ.ಎಲ್.ಎ.ಗಳೂ ಆದ ಶ್ರೀ ದತ್ತೋಪಂತ ಬೆಳವಿಯರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಈ ರೀತಿ ಹೇಳಿರವರು : "ಅನಕ್ಷರಸ್ಥಳಾದ ಅನಾಥಳಾದ ಮಹಿಳೆಯೊಬ್ಬಳು ಯಾವ ದೊಡ್ಡ ಮನುಷ್ಯನ ಆಧಾರವೂ ಇಲ್ಲದೆ ಮನೆಮನೆ ತಿರುಗಿ ಕಾಸುಕಾಸು ಕೂಡಿಸಿ ವರ್ಷ ಒಂದಕ್ಕೆ ಹತ್ತು ಹನ್ನೆರಡು ಸಾವಿರ ರೂಪಾಯಿಗಳು ಕೂಡಿಸಿ ಹತ್ತು ವರ್ಷಗಳಿಂದ ಇಂತಹ ದೊಡ್ಡ ಸ್ತ್ರೀ ಸಂಸ್ಥೆಯೊಂದನ್ನು ಸುವ್ಯವಸ್ಥಿತ ರೀತಿಯಲ್ಲಿಯೂ ಪರಿಣಾಮಕಾರಿಯಾಗಿಯೂ ನಡೆಸಿ ತೋರಿಸುವಂತಹ ದೃಶ್ಯವು ಯಾರನ್ನು ತಾನೇ ಆಶ್ಚರ್ಯಗೊಳಿಸುವುದಿಲ್ಲ. ನನಗಂತೂ ಮಹಾದ್ಭುತವಾಗಿ ತೋರುತ್ತಿದೆ." ಈ ಮಹನೀಯಳ ವಿರುದ್ಧವಾಗಿ ಈ ಸಂಸ್ಥೆಯ ವಿರುದ್ಧವಾಗಿ ತೋರುವ ಶಂಕೆ, ಅಸಮಾಧಾನ ಇವುಗಳಿಗೆ ಇದೊಂದೇ ಮಾತಿನ ನಿದರ್ಶನವು ಸಾಕಾಗಿದೆ.

ಸಂಸ್ಥೆಯು ದಿನೇದಿನೇ ಬೆಳೆಯುತ್ತಿದೆ. ನೂರಾರು ಮಂದಿ ಹೆಣ್ಣುಮಕ್ಕಳಿಗೆ ಆಶ್ರಯವಾಗಿದೆ. ಸಂಸ್ಥೆಯು ದಿನೇದಿನೇ ಬೆಳೆಯಲಿ.

ವಿಧವೆಯರು ಮನಸ್ಸು ಮಾಡಿದರೆ ಎಂತಹ ಶ್ರಮಸಾಧ್ಯವಾದ ಕೆಲಸವನ್ನಾದರೂ ಮಾಡಬಲ್ಲರೆಂಬುದಕ್ಕೆ ನಮ್ಮ ಸೋದರಿಯಾದ ಶ್ರೀಮತಿಯವರೇ ಸಾಕ್ಷಿ. ಸಮಾಜವು ಇಂದು ಅವರನ್ನು ನೋಡುತ್ತಿರುವ ದೃಷ್ಟಿಯನ್ನು ಬೇರೆ ಕಡೆ ಬದಲಾಯಿಸಿದಲ್ಲಿ ದುಃಖಮಯವಾದ ಅವರ ಜೀವನದಲ್ಲಿ ಎಂತಹ ಪರಿವರ್ತನವಾಗುವುದೆಂಬುದನ್ನಿಲ್ಲಿ ವಿವರಿಸಬೇಕಾದುದು ಅನಾವಶ್ಯಕವು. ತಮ್ಮ ಸ್ವಾನುಭವದಿಂದ ವಿಧವೆಯರ ಕಷ್ಟಪರಿಸ್ಥಿತಿಯನ್ನರಿತ ವಿಧವಾ ಸ್ತ್ರೀಯರ ತಮ್ಮ ಅಭಾಗಿನೀ ಸೋದರಿಯರ ಸೇವೆಗೆ ನಿಲ್ಲಲು ಶಕ್ಯ. ವಜ್ರವನ್ನು ಕತ್ತರಿಸಲು ವಜ್ರವನ್ನೇ ಉಪಯೋಗಿಸುವಂತೆ ನಿರ್ಭಾಗ್ಯರ ಸಹಾಯಕ್ಕೆ ನಿರ್ಭಾಗ್ಯರೇ ಮುಂದಾಗಬೇಕು. ಇತರರಿಗೆ ಅವರ ಕಷ್ಟದ ಅರಿವಾಗುವುದಿಲ್ಲ. ಅವರ ಕೆಟ್ಟ ಪರಿಸ್ಥಿತಿಯು ನೆನಪಾಗುವುದಿಲ್ಲ. ಅವರ ಕಷ್ಟ ದೆಸೆಯು ಕಣ್ಣಿಗೆ ಕಾಣುವುದಿಲ್ಲ. ಮೃಗಗಳಲ್ಲಿ ತೋರುವಷ್ಟು ಕರುಣೆಯೂ ಈ ನಿರ್ಭಾರ ವಿಷಯದಲ್ಲಿ ತೋರುವುದಿಲ್ಲ. ಅವರಿಗೂ ಕಷ್ಟಸುಖಗಳ ಅರಿವಿದೆ. ಹಸಿವು ಬಾಯಾರಿಕೆಗಳ ಪರಿವೆ-ಇವೆಯೆನ್ನುವುದು ಅನೇಕರ ಮನಸ್ಸಿಗೆ ಬರುವುದಿಲ್ಲ. ೧೯೨೭ನೆಯ ವರ್ಷದಲ್ಲಿ ಆಳುವ ಮಹಾಸ್ವಾಮಿಯವರ ರಜತ ಮಹೋತ್ಸವಕ್ಕಾಗಿ ಹಣ ಕೂಡಿಸಲು ಸಂಸ್ಥಾನದ ಪ್ರಜೆಗಳ ಮಹಾಸಭೆಯೊಂದು ಸೇರಿತ್ತು. ಆ ಸಭೆಯಲ್ಲಿ ದೇಶದಲ್ಲಿರುವ ಇಂತಹ ನಿರ್ಭಾಗ್ಯರ ಅನುಕೂಲಕ್ಕಾಗಿ ಸಂರಕ್ಷಣ ಗೃಹ (Reserve Home)ವೊಂದನ್ನು ಸ್ಥಾಪಿಸಬೇಕೆಂದೂ, ಅದಕ್ಕಾಗಿ ಐವತ್ತು ಸಾವಿರ ರೂಪಾಯಿಗಳನ್ನು ಸ್ಮಾರಕ ನಿಧಿಯಿಂದ ತೆಗೆದಿಡಬೇಕೆಂದೂ, ಇದಕ್ಕಿಂತ ಮಹಾಸ್ವಾಮಿಯವರಿಗೆ ಅತ್ಯಂತ ಪ್ರಿಯವಾದ ಸ್ಮಾರಕವು ಮತ್ತೊಂದಿಲ್ಲವೆಂದೂ ನಾನು ಹೇಳಿದಾಗ ಸಭ್ಯಗೃಹಸ್ಥರೊಬ್ಬರು, ಮಹಾಸ್ವಾಮಿಯವರಿಗೆ ಮಂಗಳವಾಗಿ ಶುಭವಾದ ಸ್ಮಾರಕವನ್ನೇರ್ಪಡಿಸಲು ಎಲ್ಲರೂ ಪ್ರಯತ್ನಪಡುತ್ತಿದ್ದರೆ ಅಮಂಗಳ ವಿಗ್ರಹಗಳಿಗೆ ಸ್ಮಾರಕವನ್ನು ಮಾಡಬೇಕೆಂದು ಇವರು ಕೇಳುತ್ತಾರೆ ಎಂದು ಹೇಳಿದ್ದು ವರ್ಷಗಳು ಹನ್ನೆರಡು ಸಂದರೂ ನನ್ನ ಮನಸ್ಸಿನಲ್ಲಿ ಆ ಮಾತುಗಳು ಬಲವಾಗಿ ನೆಟ್ಟುಹೋಗಿವೆ. ಈ ಮಾತುಗಳಿಂದಲೇ ಈ ನಿರ್ಭಾಗ್ಯರ ವಿಷಯದಲ್ಲಿ ಇತರರ ಮನೋದೃಷ್ಟಿಯು ಹೇಗಿದೆಯೆನ್ನುವುದು ವ್ಯಕ್ತವಾಗುವುದು. ಇವರು ಇತರರಿಂದ ಬಯಸುವುದು ಒಳ್ಳೆಯ ಮಾತು. ಪ್ರೀತಿಯಿಂದ ನಡೆಸಿಕೊಳ್ಳುವುದು. ಆದರಿಂದ ಅನ್ನವಿಡುವುದು. ಕಾರ್ಯೋತ್ಸಾಹಿಗಳಾಗಿದ್ದಲ್ಲಿ ಅವರ ಕಾರ್ಯದಲ್ಲಿ ಸಹಾಯ ಸಹಾನುಭೂತಿಯನ್ನು ತೋರುವುದು. ಅವರ ವಿಷಯದಲ್ಲಿ

ಹೀಗೆ ಸಹಾನುಭೂತಿಯನ್ನು ತೋರಿದರೆ ಅವರು ತಮ್ಮನ್ನು ನೊಂದುಕೊಳ್ಳದೆ ಪ್ರತಿನಿತ್ಯವೂ ಮೃತ್ಯುದೇವತೆಗೆ ಆಮಂತ್ರಣಕೊಡದೆ ತಮ್ಮ ಜನ್ಮಸಾರ್ಥಕತೆಯನ್ನು ಮಾಡಿಕೊಳ್ಳುವರು. ಅವರ ಜೀವನವು ಆನಂದಮಯವಾಗುವುದು. ಅವರಿಂದ ಸಮಾಜಕ್ಕೆ ಬೇಕಾದಷ್ಟು ಸೇವೆಯಾಗುವುದು. ನಮ್ಮ ದೇಶದಲ್ಲಿ ಸಮಾಜಕ್ಕೆ ಇಂತಹ ಪವಿತ್ರಸೇವೆ ಸಲ್ಲಿಸಲು ಮುಂದಾಳಾಗಿ ನಿಂತಿರುವವರಲ್ಲಿ ಬಹುಮಂದಿ ನಮ್ಮ ಸೋದರಿ ಭಾಗೀರಥಿಬಾಯಿಯಂತಹವರೇ. ಮಹಾತ್ಮಾಗಾಂಧಿಯವರು ಒಂದು ಕಡೆ ಭಾಷಣ ಮಾಡುವಾಗ "ಭರತಖಂಡದ ವಿಧವೆಯರು ಸಾಮಾನ್ಯರಲ್ಲ. ಅವರಲ್ಲಿ ಆತ್ಮವಿಶ್ವಾಸವಿದೆ; ನೈತಿಕ ಬಲವಿದೆ, ಧೀರತ್ವವಿದೆ. ಸರಿಯಾದ ಅವಕಾಶಕೊಟ್ಟಲ್ಲಿ ವೀರಯೋಧರಂತೆ ಶತ್ರುಗಳನ್ನೆದುರಿಸಲು ಕೂಡ ಹಿಂದೆಗೆಯಲಾರರು. ಅವರದೇ ಒಂದು ಸೇವಾದಳವನ್ನೇರ್ಪಡಿಸಿದರೆ ದೇಶಕ್ಕೆಷ್ಟೋ ಸಹಾಯವಾದೀತು" ಎಂದಿರುವರು. ಮಹಾತ್ಮರಂದಂತೆ ಅವರಲ್ಲಿ ಸಮಸ್ತ ಗುಣಗಳೂ ತುಂಬಿವೆ. ಅವಕಾಶ, ಸಹಾಯ, ಸಹಾನುಭೂತಿಯಿಲ್ಲದೆ ಅವರ ಜೀವನವು ಕಣ್ಣೀರಿನ ಕಾಲುವೆಯಲ್ಲಿ ಮುಳುಗಿ ಮಣ್ಣುಗೂಡುತ್ತಿದೆ. ಅಂತಹವರು ಸಮಾಜದ ಇಕ್ಕಟ್ಟಿಗೆ ಸಿಕ್ಕಿ ತೊಳಲಿ ಪರಮತಾವಲಂಬಿಗಳಾಗದೆ ನಮ್ಮವರು ನಮ್ಮಲ್ಲೇ ಉಳಿದು ನಮ್ಮ ಸಮಾಜಕ್ಕೆ ತಮ್ಮ ಸೇವೆಯನ್ನು ಸಲ್ಲಿಸಿ ಕೃತಾರ್ಥರಾಗಿ ಜನ್ಮಸಾರ್ಥಕ ಮಾಡಿಕೊಳ್ಳುವಂತೆ ಸಹಕಾರವನ್ನು ನೀಡಬೇಕಾದುದು ಸಮಾಜದ ಮುಖ್ಯ ಕರ್ತವ್ಯ.

(ಸೋದರೀ ಭಾಗೀರಥೀಬಾಯಿಯವರ ಜೀವನಚರಿತ್ರೆಯ ವಿಷಯದ ಮಾಹಿತಿಯನ್ನು ಕೊಟ್ಟದ್ದಕ್ಕಾಗಿಯೂ ಅವರ ಪಡಿಯಚ್ಚನ್ನು ಕೊಟ್ಟದ್ದಾಗಿಯೂ ಧಾರವಾಡದ 'ವನಿತಾ ಸೇವಾ ಸದನ' ವ್ಯವಸ್ಥಾಪಕ ಮಂಡಲಿಯವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳು. *–ಸಂ.ಸ.*)

'ಪ್ರಜಾಸಾಹಿತ್ಯ' ಸಂಪಾದಕರಿಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯತ್ವ

ಕಳೆದ ೪೦ ವರ್ಷಗಳಿಂದ ಈ ನಾಡಿನ ಏಕೈಕ ಅವಾಂತರಕಾರಿ ಎನ್ನುವಂತೆ ಪಟ್ಟಭದ್ರ ಸಾಹಿತಿಗಳು, ಅವರ ಶಿಷ್ಯರಿಂದಲೇ ತುಂಬಿರುವ ಸಮೂಹ ಮಾಧ್ಯಮಗಳು, ಅವರನ್ನೇ ನಂಬಿದ ಕನ್ನಡ ಓದುಗರು – ಏನೇ, ಎಷ್ಟೇ ಅವಮಾನ, ಅವಹೇಳನ, ಅವಜ್ಞೆ ತೋರುತ್ತ ಬಂದಿದ್ದರೂ; ಶಿಲಾತಪಸ್ವಿನ ಶಾಪ ವಿಮೋಚನೆಯೋ ಎನ್ನುವಂತೆ, ಇದೀಗ ಪತ್ರಕರ್ತರ ಸಂಘವೇ ಕರೆದು ಇವ ನಮ್ಮವ, ಇವ ನಮ್ಮವ ಎಂದು ಸದಸ್ಯತ್ವಕ್ಕೆ ಆಯ್ಕೆ ಮಾಡಿರುವುದು ಹೆಮ್ಮೆಯ, ಸಂತೋಷದ, ಬೆಂಬಲದ ಶಕ್ತಿಸಂಕೇತವಾಗಿದೆ. ಇದಕ್ಕೆ ಕಾರಣರಾದ ಚೈತನ್ಯಶೀಲರೂ ಕ್ರಿಯಾಶೀಲರೂ ಆದ ಅಧ್ಯಕ್ಷ ವಿ. ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಮುಂಜಾನೆ ಸತ್ಯ, ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು, ಕೆ. ಶಾಂತಕುಮಾರಿ ಹಾಗೂ ಎಸ್. ಶ್ರೀಧರರಾವ್ ಅವರಿಗೆ ಧನ್ಯವಾದಗಳು.

ಸಂಪಾದಕ

೪

ಮೈಸೂರು ವಾಸುದೇವಾಚಾರ್ಯ

ಎಚ್. ಯೋಗನರಸಿಂಹಂ

ಸರಳತೆ, ಸಜ್ಜನಿಕೆ ಹಾಗೂ ಘನತೆಯ ತ್ರಿವೇಣಿ ಸಂಗಮಕ್ಕೆ ಮಾದರಿಯಾಗಿದ್ದವರು ಎಚ್. ಯೋಗನರಸಿಂಹಂ. ಅದಕ್ಕೆ ಅವರು ಪಡೆದ ಶಿಕ್ಷಣ, ಕುಟುಂಬದ ವಾತಾವರಣ, ಒಡನಾಡಿಗಳ ಪರಿಸರ ನೆರವಾಯಿತು, ನೇರ್ಪುಗೊಂಡಿತು. ಸಂಸ್ಕೃತ, ಇಂಗ್ಲಿಷ್ ಭಾಷೆ, ಸಾಹಿತ್ಯದಲ್ಲಿ ಆಳ ಅಧ್ಯಯನ. ಅದರಿಂದ ಕನ್ನಡಕ್ಕೆ ಲಾಭ. ಜೊತೆಗೆ ಸಂಗೀತವನ್ನೂ ಗುರುಕುಲ ಪದ್ಧತಿಯಲ್ಲಿ ಕಲಿತವರು. ಹೀಗಾಗಿ ಗಾಯಕ, ವಾಗ್ಗೇಯಕಾರ, ವಿಮರ್ಶಕ, ಅನುವಾದಕ, ನಾಟಕಕಾರ, ನಟ ಎಲ್ಲಕ್ಕೂ ಮಿಗಿಲಾಗಿ ಶಿಕ್ಷಕರಾಗಿ ಕೀರ್ತಿಗಳಿಸಿದರು. ಭಾವುಕತೆ ವೈಚಾರಿಕತೆ ಬೆರೆತ ವ್ಯಕ್ತಿತ್ವದ ಯೋಗನರಸಿಂಹಂ; ಮಡದಿ, ಮಕ್ಕಳು ಸುಸಂಸ್ಕೃತರೂ, ಧೀಮಂತರು ಆಗಿ ಬಾಳುವುದನ್ನು ತೋರಿಸಿಕೊಟ್ಟರು. ಆ ಮನಸ್ಸಿನ ಒಂದು ಪಾಕ, ತಮ್ಮ ಗುರುಗಳನ್ನು ಕಂಡ ಈ ಚಿತ್ರಣದಲ್ಲಿದೆ. ವಾಸುದೇವಾಚಾರ್ಯರ ನೇರ ಶಿಷ್ಯರಾಗಿಯೂ 'ವಾಗ್ಗೇಯಕಾರ ವಾಸುದೇವಾಚಾರ್ಯ' ಕೃತಿಯಲ್ಲಿ ದಿವಂಗತ ಯೋಗನರಸಿಂಹಂ ಲೇಖನ ಇಲ್ಲದ್ದು ಕೂಡ ಗಮನಿಸಿ, ಇಲ್ಲಿ ಕೊಡಲಾಗಿದೆ. ಈವರೆಗೆ ಎಲ್ಲೂ ಪ್ರಕಟವಾಗದ ಎಷ್ಟೋ ಅಂಶಗಳೂ ಈ ಲೇಖನದಲ್ಲಿವೆ. ವಿ.ಸೀ. ಸಂಪದವರು ಪ್ರಕಟಿಸಿದ ಎಚ್.ವೈ. ಶಾರದಾಪ್ರಸಾದ್ ಸಂಪಾದಿಸಿದ, 'ಸಂಗೀತದ ಸಿರಿ ಎಚ್. ಯೋಗನರಸಿಂಹಂ' ಕೃತಿಯ, ಮದರಾಸಿನ ದಿ ಹಿಂದೂ ಪತ್ರಿಕೆಯಲ್ಲಿ ಮೊದಲು ಬೆಳಕು ಕಂಡ ಆ ಇಂಗ್ಲಿಷ್ ಲೇಖನವನ್ನು ಇಲ್ಲಿ ಅನುವಾದಿಸಿಕೊಡಲಾಗಿದೆ.

ಸಂಪಾದಕ

೧೮೬೫ರ ಮೇ ೨೮ರ ಬೆಳಗಿನ ಶುಭ ಮುಂಜಾನೆಯಂದು, ಒಬ್ಬ ದೈವಭಕ್ತ ಪಂಡಿತರು 'ಪರವಾಸುದೇವ'ನ ನಾಮವನ್ನು ಜಪಿಸುತ್ತಾ ಮೈಸೂರಿನ ಕೋಟೆಯ ಒಳಗಿರುವ ಶ್ರೀವರಾಹಸ್ವಾಮಿ ದೇವಸ್ಥಾನದ ಗರ್ಭಗುಡಿಯನ್ನು ಪ್ರದಕ್ಷಿಣೆ ಹಾಕುತ್ತಿದ್ದರು. ಆಗ ಒಬ್ಬ ವ್ಯಕ್ತಿಯು ಅಲ್ಲಿ ಬಂದು ಪಂಡಿತರಿಗೆ ಮೊಮ್ಮಗನು ಜನಿಸಿದ ವಿಚಾರವನ್ನು ತಿಳಿಸಿದನು. ಪಂಡಿತರು ದೇವರಿಗೆ ಬಾಗಿ ವಂದಿಸಿ, "ವಾಸುದೇವನ ನಾಮವನ್ನು ನಾನು ಜಪಿಸುತ್ತಿರುವುದರಿಂದ, ಈ ಮಗುವಿಗೂ ಅದೇ ಹೆಸರು ಇಡುತ್ತೇನೆ" ಎಂದರು. ಈ ಮಗುವೇ ಮುಂದೆ ಒಂದು ಶತಮಾನದ ಕಾಲ ಬಾಳಿ ಕರ್ನಾಟಕ ಸಂಗೀತಕ್ಕೆ ಇನ್ನೂರರಷ್ಟು ಕೃತಿಗಳನ್ನು ನೀಡಿದ ಶ್ರೇಷ್ಠ ವಾಗ್ಗೇಯಕಾರ ವಾಸುದೇವಾಚಾರ್ಯರು.

ವಾಸು. ಮೈಸೂರು ಅರಮನೆಯಲ್ಲಿ ಪುರಾಣಿಕರಾಗಿದ್ದ ಪಂಡಿತ ಸುಬ್ರಹ್ಮಣ್ಯಾಚಾರರ ಪುತ್ರರು. ವಾಸುವಿನ ದೌರ್ಭಾಗ್ಯಕ್ಕೆ. ಅವರ ಮೂರನೆಯ ವಯಸ್ಸಿಗೇ ತಂದೆ ತೀರಿಕೊಂಡರು. ನಂತರ ಇವರು ತಮ್ಮ ಮಾತಾಮಹರ ಪಾಲನೆಯಲ್ಲಿ ಬೆಳೆದರು. ಗೋಪಾಲಾಚಾರಿಯವರು ಬಹಳ ಕಟ್ಟುನಿಟ್ಟಾದ ಶಿಷ್ಟಾಚಾರಿಗಳಾಗಿದ್ದು, ವಾಸುವನ್ನು ಆತನ ತಂದೆಗಿಂತಲೂ ಉತ್ತಮನಾದ ಸಂಸ್ಕೃತ ಪಂಡಿತನನ್ನಾಗಿ ಮಾಡಲು ನಿರ್ಧರಿಸಿದ್ದರು. ವಾಸುವಿನ ಪ್ರಾರಂಭಿಕ ಸಂಸ್ಕೃತಪಾಠವು ಪಂಡಿತ ಪೆರಿಸ್ವಾಮಿ ತಿರುಮಲಾಚಾರ್ ಅವರಲ್ಲಿ ಆರಂಭವಾಯಿತು. ಆದರೆ ಹುಟ್ಟಿನಿಂದಲೇ ಬಂದಿದ್ದ ಸಂಗೀತದ ಮೇಲಿನ ಆಸಕ್ತಿಯಿಂದ ಅವರ ಅಜ್ಜನಿಗೆ ಇಷ್ಟವಿಲ್ಲದಿದ್ದರೂ ಸುಬ್ಬರಾಯ ಎಂಬುವರ ಹತ್ತಿರ ಸಂಗೀತ ಪಾಠಾಭ್ಯಾಸ ಪ್ರಾರಂಭವಾಯಿತು.

ವಾಸುವಿನ ಕ್ರಮಬದ್ಧವಾದ ಶಿಕ್ಷಣವು ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಅವರ ಹದಿಮೂರನೆಯ

ವಯಸ್ಸಿನಲ್ಲಿ ಪ್ರಾರಂಭವಾದಂತೆ ತೋರುತ್ತದೆ. ಇವರು ಅಧ್ಯಯನ ಮಾಡಬೇಕಾಗಿದ್ದ ಎರಡು ವಿಷಯಗಳು - ಸಂಸ್ಕೃತ ಸಾಹಿತ್ಯ ಮತ್ತು ಇವರಿಗೆ ಪ್ರಿಯವಾದ ಸಂಗೀತ. ಆಗ ಸಂಗೀತ ಪಾಠವನ್ನು ಹೇಳುತ್ತಿದ್ದವರು ವೀಣೆ ಪದ್ಮನಾಭಯ್ಯನವರು.

ವಾಸು ಹದಿನಾರನೆಯ ವಯಸ್ಸಿನಲ್ಲಿ ವಿವಾಹಗೊಂಡರೂ ಸಹ ಶಿಕ್ಷಣವನ್ನು ಮುಂದುವರೆಸಿದರು. ಹತ್ತೊಂಬತ್ತನೆಯ ವಯಸ್ಸಿನಲ್ಲಿ ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರ ಕಛೇರಿಯನ್ನು ಕೇಳಿದ್ದು ಅವರ ಜೀವನವಲ್ಲಿ ಮಹತ್ತರ ತಿರುವು ನೀಡಿತು. ಸಂಗೀತದ ಮೇಲಿನ ಆಸಕ್ತಿಯು ತೀವ್ರಗೊಂಡು ಅವರ ಶಿಷ್ಯನಾಗಲು ಬಹಳ ಕಷ್ಟಪಟ್ಟರು. ಅರಮನೆಯ ಶಿಫಾರಸ್ಸು ಮತ್ತು ಶಿಷ್ಯವೇತನವನ್ನು ಪಡೆಯಲು ಯಶಸ್ವಿಯಾದದ್ದು ತಿರುವಯ್ಯಾರಿಗೆ ಹೋಗಿ ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರಲ್ಲಿ ಗುರುಕುಲವಾಸ ಮಾಡಲು ಅನುವು ಮಾಡಿಕೊಟ್ಟಿತು.

ಪಟ್ಣಂ ಅವರ ಬಳಿ ವಾಸುವಿನ ಶಿಷ್ಯವೃತ್ತಿಯು ಒಂದು ಹೇಳಿಕೆಯ ಪ್ರಕಾರ ಆರು ವರ್ಷವೆಂದೂ ಮತ್ತೊಂದು ಹೇಳಿಕೆಯ ಪ್ರಕಾರ ಎರಡು ವರ್ಷವೆಂದೂ ತಿಳಿದುಬರುತ್ತದೆ. ತಮ್ಮ ಗುರುಗಳ ಶೈಲಿ ಮತ್ತು ತಂತ್ರವನ್ನು ಸಂಪೂರ್ಣವಾಗಿ ಗ್ರಹಿಸಿ, ಅಂತರ್ಗತ ಮಾಡಿಕೊಂಡರು.

ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರು ಬೇಗಡೆ ವರ್ಣ "ಮರಚಿ"ಯಿಂದ ಪಾಠ ಪ್ರಾರಂಭಿಸಿದರು. ಬೇಗಡೆ, ಪಟ್ಣಂ ಅವರಿಗೆ ಪ್ರಿಯವಾದ ರಾಗ. ಈ ಒಂದು ವರ್ಣದ ಪಾಠವೇ ಮೂರು ತಿಂಗಳ ಕಾಲ ತೆಗೆದುಕೊಂಡಿತು. ಪ್ರತಿಯೊಂದು ಆವರ್ತನವನ್ನು ತ್ರಿಕಾಲ ಮಾಡಿ, ಆವರ್ತನದ ಪ್ರಕಾರವೇ ರಾಗಾಲಾಪನೆಯನ್ನೂ ಮಾಡಿ ಒಪ್ಪಿಸಬೇಕಾಗಿತ್ತು. ಈ ಪ್ರಕಾರವಾಗಿ ರಾಗಾಲಾಪನೆ ಮತ್ತು ನೆರವಲಿನ ಕಠಿಣ ಅಭ್ಯಾಸ ನಡೆಯಿತು. ಹಾಗೆಯೇ ಅವರ ಗುರುಗಳು ಮಧ್ಯಾಹ್ನದ ಹೊತ್ತಿನಲ್ಲಿ ವರ್ಣ ಮತ್ತು ಕೃತಿಗಳನ್ನು ರಚಿಸುವುದನ್ನೂ ವಾಸು ಗಮನಿಸುತ್ತಿದ್ದರು.

ಗಾಯಕರಾಗಿ ವಾಸುದೇವಾಚಾರ್ಯರು ಸ್ವತಃ ರಸಿಕರು ಮತ್ತು ರಸಿಕರ ನಿರ್ಮಾತೃ. ಅವರು ಒಬ್ಬ "ರಂಜಕ" ಹಾಗೂ ವಿದ್ವಾಂಸರಿಗೂ "ಶಿಕ್ಷಕ". ಜಟಿಲವಾದ ರಾಗಾಲಾಪನೆ, ತಾನ ನೆರವಲ್ ಮತ್ತು ಪಲ್ಲವಿಯ ಮೇಲಿನ ಪ್ರಭುತ್ವ ಆಚಾರ್ಯರ ಶ್ರೇಷ್ಠತೆ. ರಾಗಮಾಲಿಕೆಯಲ್ಲಿ ಸಂಸ್ಕೃತ ಶ್ಲೋಕಗಳ ಗಾಯನ, ಸೂಕ್ತವಾದ ರಾಗಭಾವದ ಮೂಲಕ ಅರ್ಥ ಮತ್ತು ಮನೋಧರ್ಮವನ್ನು ನಿರೂಪಿಸುವುದು ಅವರು ಒಲಿಸಿಕೊಂಡಂತಹ ವೈಶಿಷ್ಟ್ಯ. ಹಾಗೆಯೇ ಹಿಂದೂಸ್ತಾನಿ ರಾಗಗಳನ್ನು ಹಾಡುವುದರಲ್ಲಿಯೂ ಅವರು ಅಷ್ಟೇ ಪರಿಣತಿಹೊಂದಿದ್ದರು.

ಆಚಾರ್ಯರ ಶಾರೀರವು 'ಘನ' ಮತ್ತು 'ಪ್ರಚುರ'. ಅವರ ಶಾರೀರ ಉತ್ಪತ್ತಿಯು ವೈವಿಧ್ಯಮಯವಾಗಿದ್ದು, 'ವಾದ್ಯಕಕು'ವನ್ನು ಒಳಗೊಂಡಿತ್ತು. ಉದಾಹರಣೆಗೆ, ಶಂಖದ ಶಬ್ದದ ಹಾಗೂ ವೀಣೆ ಶಬ್ದದ ಅನುಕರಣೆ. ಶ್ವಾಸ ನಿಯಂತ್ರಣದಲ್ಲಿ ಇವರು ನಿಸ್ಸೀಮರಾಗಿದ್ದ, ಸಾಹಿತ್ಯವನ್ನು ಉಸಿರಾಡುವ ಸಲುವಾಗಿ ಅನಾವಶ್ಯಕವಾಗಿ ಎಲ್ಲಿಯೂ ಮುರಿಯುತ್ತಿರಲಿಲ್ಲ. ಶ್ರುತಿಯ ಮೇಲಿನ ಅವರ ಹಿಡಿತ ಅಖಂಡವಾಗಿದ್ದು ತಂಬೂರಿಯನ್ನು ಶ್ರುತಿ ಮಾಡಲು ತಾಳ್ಮೆಯಿಂದ ಬಹಳ ಹೊತ್ತು ಕಳೆಯುತ್ತಿದ್ದರು.

ಆಚಾರ್ಯರ ಶಾರೀರವು ಅನುಮಂದ್ರ ಪಂಚಮದಿಂದ ತಾರಷಡ್ಜದವರೆಗೆ ಸುಲಭವಾಗಿ ಏರಿಳಿಯುತ್ತಿತ್ತು. ಇದು ಘನರಾಗ ಹಾಗೂ ತಾನದ ಹಾಡುಗಾರಿಕೆಗೆ ಸಹಕಾರಿಯಾಗಿತ್ತು. ಆದರೂ ತಾರಸ್ಥಾಯಿಯಲ್ಲಿ ಹಾಡಲು ಇವರಿಗೆ ಕೊಂಚ ಕಷ್ಟವಾಗುತ್ತಿತ್ತು. ಇವರ ಅಭಿಪ್ರಾಯದಲ್ಲಿ ರಬ್ಬರ್ ಚೆಂಡು ನೆಲಕ್ಕೆ ಜೋರಾಗಿ ಬಿಸುಡಿದಷ್ಟೂ ಎತ್ತರಕ್ಕೆ ಪುಟಿಯುವಂತೆ, ಶಾರೀರವು ಮಂದ್ರಕ್ಕೆ ಇಳಿದಷ್ಟೇ ಪ್ರಮಾಣದಲ್ಲಿ ತಾರಕಕ್ಕೂ ಏರುತ್ತದೆ. ಆದ್ದರಿಂದ ಇವರು 'ಮಂದ್ರ-ಸಾಧನೆ'ಗೆ ಹೆಚ್ಚು ಒತ್ತು ನೀಡುತ್ತಿದ್ದರು. ಉತ್ತರದ ಹಿರಿಯ ವಿದ್ವಾಂಸರೂ, ಸಾಧಕರೂ ಆದ ಪಂಡಿತ ವಿಷ್ಣು ದಿಗಂಬರ್ ಹಾಗೂ ಪಂಡಿತ ಓಂಕಾರನಾಥ ಠಾಕೂರ್ ಕೂಡ 'ಮಂದ್ರ-ಸಾಧನೆ'ಯ ಬಲವಾದ ಸಮರ್ಥಕರಾಗಿದ್ದು, ಇದರಿಂದ ತಾರಸ್ಥಾಯಿಯಲ್ಲಿ ಹಾಡುವುದಕ್ಕೆ ಸಹಕಾರಿಯಾಗುತ್ತದೆ ಎಂದು ಪ್ರತಿಪಾದಿಸುತ್ತಿದ್ದರು ಎಂಬುದು ಇವರ ಪ್ರತಿಪಾದನೆಯಾಗಿತ್ತು.

ಕೆಲವು ಸಮಯದ ಕಾಲ ಪ್ರತಿ ಶುಕ್ರವಾರ ಸಂಜೆ ಅವರು ಭಜನೆಯನ್ನು ನಡೆಸುತ್ತಿದ್ದರು. ಇದು ಸಂಗೀತದ ಸವಿಯೂಟದಂತಿರುತ್ತಿತ್ತು. ೧೯೩೨ರ ಸುಮಾರಿಗೆ ಇಂಥ ಒಂದು ಭಜನಕೂಟದಲ್ಲಿ ಅವರು ಒಂದೂವರೆ ಗಂಟೆಗಳ ಕಾಲ ಸಹಾನರಾಗವನ್ನು ಹಾಡಿದರು. ಇದು ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸಿತು. ಶ್ರೀ ಎನ್. ಚೆನ್ನಕೇಶವಯ್ಯನವರು ಗದ್ಗದಿತರಾಗಿ ಅವರ ಕಾಲಿಗೆ ವಂದಿಸುತ್ತಾ 'ಯಾವ ಸ್ವರ್ಗದಿಂದ ಇಂದು ಸಹಾನವನ್ನು ಭೂಮಿಗೆ ತಂದಿರಿ' ಎಂದಿದ್ದು ನನಗೆ ನೆನಪಿದೆ.

ಆಚಾರ್ಯರಿಗೆ ನಲವತ್ತನೆಯ ವಯಸ್ಸಿನಲ್ಲಿ ಪತ್ನಿ ವಿಯೋಗವಾಯಿತು. ಇವರ ಒಬ್ಬಳೇ ಪುತ್ರಿಯೂ ಸಹ ಕಾಲು ಜಾರಿ ಭಾವಿಯಲ್ಲಿ ಬಿದ್ದು ತೀರಿಕೊಂಡರು. ಇದ್ದೊಬ್ಬ ಮಗನೂ ಜೀವನದಲ್ಲಿ ಮುಂದೆ ಬರಲಿಲ್ಲ. ಮನೆಯಲ್ಲಿ ನಡೆದ ಈ ಎಲ್ಲ ಘಟನೆಗಳಿಂದ ಉಂಟಾದ ಅಹಿತಕರ ವಾತಾವರಣದಿಂದ ಅವರು ಭಜನಕೂಟವನ್ನು ಮುಂದುವರೆಸಲಿಲ್ಲ. ಆದರೆ ತಮ್ಮ ಶಿಷ್ಯರಿಗೆ ಅವರ ಮನೆಗಳಲ್ಲಿ ಇದನ್ನು ಮುಂದುವರೆಸುವಂತೆ ಸೂಚಿಸಿದರು. ಅದರಂತೆ ಶ್ರೀ ಬಿ.ಕೆ. ಪದ್ಮನಾಭರಾವ್ ಅವರು ಗುರುವಾರದಂದೂ, ನಾನು ಶನಿವಾರದಂದೂ ಹಾಗೂ ಶ್ರೀ ಎನ್. ಚೆನ್ನಕೇಶವಯ್ಯನವರು ಭಾನುವಾರದಂದೂ ಭಜನೆಯನ್ನು ಮುಂದುವರೆಸಿದೆವು. ಆಚಾರ್ಯರು ಒಬ್ಬ ಉತ್ತಮ ಕೇಳುಗರಾಗಿದ್ದು ತಪ್ಪದೇ ಈ ಕೂಟಗಳಿಗೆ ಬರುತ್ತಿದ್ದರು.

ಒಬ್ಬ ಗುರುವಾಗಿ ಆಚಾರ್ಯರು ಗಾಂಭೀರ್ಯದ ಮೂರ್ತಿವೆತಂತ್ತಿದ್ದರು. ಶಿಷ್ಯರು ಗುರುಗಳ ಹತ್ತಿರ ಹೋಗುವ ಬದಲು ಗುರುಗಳೇ ಶಿಷ್ಯಂದಿರ ಮನೆಗೆ ಬರುತ್ತಿದ್ದರು. ಬರೀ ಬೋಧನೆಗಿಂತ ಹೆಚ್ಚಾಗಿ ಸ್ವತಃ ತಾವೇ ಹಾಡಿ, ಪ್ರದರ್ಶಿಸಿ ತಾಳ್ಮೆಯಿಂದ ಹೇಳಿಕೊಡುತ್ತಿದ್ದರು. ೧೯೨೮ರಿಂದ ೧೯೩೫ರವರೆಗೆ ಅವರಲ್ಲಿ ಶಿಷ್ಯವೃತ್ತಿ ಮಾಡಿದ್ದು ನನ್ನ ಸೌಭಾಗ್ಯ. ಆಚಾರ್ಯರು ತಮ್ಮ ಶಿಷ್ಯರನ್ನು ಸ್ನೇಹಿತರಂತೆ ಕಾಣುತ್ತಿದ್ದರು!

ಹಲವಾರು ಬಿರುದು ಹಾಗೂ ಗೌರವಗಳು ಆಚಾರ್ಯರನ್ನು ಅರಸಿ ಬಂದವು. ರವೀಂದ್ರನಾಥ ಠಾಗೂರರು ಇವರನ್ನು 'ಸಂಗೀತ ಭಾವಜ್ಞ ಶಿಖಾಮಣಿ' ಎಂದು ಕರೆದರು. 'ಸಂಗೀತ ಕಲಾ ಕೋವಿದ', 'ಸಂಗೀತ ಗಾನ ಶಿರೋಮಣಿ', 'ಸಂಗೀತ ಸಾಹಿತ್ಯ ವಿದ್ವನ್ಮಣಿ' ಇವರಿಗೆ ಕೆಲವು ಮಠಗಳಿಂದ ಸಂದ ಬಿರುದುಗಳು. ಮದರಾಸು ಮ್ಯೂಸಿಕ್ ಅಕಾಡೆಮಿಯು ೧೯೩೫ರಲ್ಲಿ ಇವರಿಗೆ 'ಸಂಗೀತ ಕಲಾನಿಧಿ' ನೀಡಿ ಗೌರವಿಸಿತು. ಮೈಸೂರು ಅರಮನೆಯಿಂದ 'ಸಂಗೀತ ಶಾಸ್ತ್ರರತ್ನ' ಹಾಗು 'ಸಂಗೀತ ಶಾಸ್ತ್ರ ವಿಶಾರದ' ಗೌರವಕ್ಕೆ ಪಾತ್ರರಾದರು.

ಗಾಯಕರಾಗಿ ಇವರಿಗಿರುವ ಗೌರವ ಕೀರ್ತಿ ಜೊತೆಗೆ ವಾಗ್ಗೇಯಕಾರರಾಗಿ ಇವರ ಹೆಸರು ಬಹುಕಾಲ ಸಂಗೀತ ಕ್ಷೇತ್ರದಲ್ಲಿ ಉಳಿಯುತ್ತದೆ. ಇವರು ಸುಮಾರು ಇನ್ನೂರು ರಚನೆಗಳನ್ನು ಮಾಡಿದ್ದಾರೆ. ಸ್ವತಃ ತಾವೇ ತಮ್ಮ ರಚನೆಗಳನ್ನು ಪ್ರಕಟಿಸಿರುವುದು ಬೇರೆ ಯಾವುದೇ ವಾಗ್ಗೇಯಕಾರರಿಗೆ ಸಿಗದ ಭಾಗ್ಯ. ಮೈಸೂರಿನ ಇಬ್ಬರು ಮಹಾರಾಜರ ಸೌಂದರ್ಯೋಪಾಸನೆ ಹಾಗು ವಿವೇಚನಾಯುಕ್ತ ಆಶ್ರಯವೇ ಈ ಪುಸ್ತಕಗಳು ಹೊರಬರಲು ಕಾರಣ. 'ವಾಸುದೇವ ಕೀರ್ತನ ಮಂಜರಿ' - ಎರಡು ಭಾಗಗಳಲ್ಲಿ ಹಾಗು 'ನವರತ್ನ ರಾಗ ಮಾಲಿಕೆ' ಎಂಬ ಕೃತಿಯು ಹೊರಬಂದಿದೆ. ಇನ್ನು ಸುಮಾರು ೫೦ ರಚನೆಗಳು ಪ್ರಕಟಣೆಗೆ ಸಿದ್ಧವಾಗಿದೆ ಎಂದು ತಿಳಿದುಬಂದಿದ್ದು, ಇದು ಸ್ವರಜತಿ, ವರ್ಣ, ತಿಲ್ಲಾನ ಹಾಗು ೩೫ ಸೂಳಾದಿ ತಾಳಗಳನ್ನೊಳಗೊಂಡ ರಾಗಮಾಲಿಕೆಯನ್ನು ಹೊಂದಿದೆ.

ಇವರ ರಚನೆಗಳಲ್ಲಿ ಉಲ್ಲೇಖನಾರ್ಹವಾದವು :

೧. ೨೪ ಸಂಸ್ಕೃತ ಕೃತಿಗಳು - ಕೇಶವ, ನಾರಾಯಣ ಮುಂತಾದ ೨೪ ನಾಮಗಳ ಕುರಿತು

೨. ಸಂಗೀತ ತ್ರಿಮೂರ್ತಿಗಳ ಮೇಲಿನ ರಾಗ ಮಾಲಿಕೆ

೩. ಅಡ್ಯಾರ್ ಕಲಾಕ್ಷೇತ್ರದಲ್ಲಿ ನಡೆಯುವ ರಾಮಾಯಣದ ಬ್ಯಾಲೆಗೆ ನೀಡಿದ ಸಂಗೀತ

ಇದುವರೆಗೂ ಪ್ರಕಟವಾಗಿರುವ ಇವರ ರಚನೆಗಳಲ್ಲಿ, ಸುಮಾರು ನೂರು ರಾಗಗಳನ್ನು ಬಳಸಿರುವುದು ಕಂಡುಬರುತ್ತದೆ. ಮೇಘರಂಜನಿ ರಾಗದಲ್ಲಿ ರಚಿತವಾಗಿರುವ ಒಂದು ಕೃತಿಯನ್ನು ಬಿಟ್ಟು ಮಿಕ್ಕೆಲ್ಲವೂ ಬಳಕೆಯಲ್ಲಿರುವ ಜನಪ್ರಿಯ ರಾಗಗಳೇ. ಭೈರವಿ, ಶಂಕರಾಭರಣ, ತೋಡಿ ಮುಂತಾದ ಪರಿಚಿತ

ಸಂಪ್ರದಾಯಬದ್ಧ ರಾಗಗಳಲ್ಲಿ ಶಾಸ್ತ್ರೀಯವೂ, ಲಕ್ಷಣಯುತವೂ ಆದ ಕೃತಿಗಳನ್ನು ರಚಿಸಿರುವುದು ಅವರ ವಿದ್ವತ್ತಿಗೆ ಹಿಡಿದ ಕನ್ನಡಿಯಾಗಿದೆ.

ಅವರ ಕೆಲವು ಪ್ರಸಿದ್ಧ ಕೃತಿಗಳು : 'ಪಲುಕವದೇಮಿರ' ದೇವಮನೋಹರಿ - ಶ್ರೀ ಎಂ.ಎಸ್. ರಾಮಸ್ವಾಮಿ ಅಯ್ಯರ್ ('ತ್ಯಾಗರಾಜ'ರ ಕರ್ತೃ)ಯವರು ಈ ಒಂದು ಕೃತಿಯೇ ಇವರ ಹೆಸರನ್ನು ಚಿರಾಯುವಾಗಲು ಸಾಕು ಎಂದಿದ್ದರು. ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿಯವರು ಜನಪ್ರಿಯಗೊಳಿಸಿದ 'ಜ್ರೋಚೆವಾರೆವರುರಾ', ಕಮಾಜ್ ರಾಗವನ್ನು ಕರ್ನಾಟಕ ಶಾಸ್ತ್ರೀಯ ಸಂಗೀತದ ಭಾಷಾಂಗರಾಗವೆಂದು ಊರ್ಜಿತಗೊಳಿಸಿತು. 'ಪ್ರಣತಾರ್ಥಿಹರಾಮ್ಯಹಂ', ಜಂಜೂಟಿ ಇವರ ಮತ್ತೊಂದು ಪ್ರಸಿದ್ಧ ಕೃತಿ. ಕಛೇರಿಯನ್ನು ಯಶಸ್ವಿಗೊಳಿಸಲು ಗಾಂಭೀರ್ಯದಿಂದ ಕೂಡಿದ ಕಾಂಭೋಜಿ ರಾಗದ 'ಲಂಬೋಧರಮಾವ ಲಂಬೆ'ಯೊಂದೇ ಸಾಕು. ಮಧ್ಯಮಾವತಿಯ 'ರಾಮಾಭಿರಾಮ'ದ ಸೊಗಸು ಮನುಷ್ಯನ ಭಾವನಾಶಕ್ತಿಯನ್ನೂ ಮೀರಿದ್ದು.

ಜೇನಿನಂತೆ ಇಂಪಾಗಿರುವ ಕೃತಿರಚನೆ ಆಚಾರ್ಯರ ವೈಶಿಷ್ಟ್ಯ. ಈ ಕಾರಣದಿಂದಲೇ ಅವರನ್ನು 'ಅಭಿನವ ತ್ಯಾಗರಾಜ' ಎಂದು ಕರೆಯುವುದು. ಕ್ಲಿಷ್ಟವಾದ ಕೃತಿಯನ್ನು ರಚಿಸುವುದು ಎಷ್ಟು ಸುಲಭವೆಂದೂ, ಸುಲಭವಾದ ಕೃತಿಯನ್ನು ರಚಿಸುವುದು ಎಷ್ಟು ಕಷ್ಟವೆಂದೂ ಕೃತಿ ರಚನೆಗೆ ಪ್ರಯತ್ನಪಟ್ಟವರಿಗೆ ವೇದ್ಯವಾಗುವ ಸಂಗತಿ.

ಅವರ ರಚನೆಗಳ ಕಾಲಪ್ರಮಾಣ ವೈವಿಧ್ಯಮಯವಾಗಿದ್ದು, ಕೆಲವು ಮಧ್ಯಮಕಾಲದಲ್ಲಿಯೂ, ಇನ್ನು ಕೆಲವು ಧೃತಕಾಲದಲ್ಲಿಯೂ ಇವೆ. ೧೯೪೦ರಲ್ಲಿ ಒಮ್ಮೆ ಅವರು ನನ್ನ ಅತಿಥಿಗಳಾಗಿದ್ದರು. ಮನೆಯನ್ನು ನೋಡಿದ ಮೇಲೆ ತೋಟದ ಹತ್ತಿರ ಬಂದು, ಹೂಗಿಡಗಳನ್ನೂ, ಹಣ್ಣಿನ ಮರಗಳನ್ನೂ ಬೆಳೆಯಲು ಸೂಚಿಸಿದರು. ಅವೆಲ್ಲವೂ ಅಲ್ಲಿರುವುದನ್ನು ತಿಳಿಸಿದಾಗ ಅವರು, 'ತೋಟವನ್ನು ಸರಿಯಾಗಿ ನೋಡುವ ಮೊದಲೇ ಇಂತಹ ಸೂಚನೆ ನೀಡಿದೆನಲ್ಲ, ನಾನೆಂತಹ ಮಂದಮತಿ!" ಎಂದು ಉದ್ಗರಿಸಿದರು. ಆ ಸಮಯದಲ್ಲಿ ಅವರ ಮನಸ್ಸಿನಲ್ಲಿ 'ಶಿವೇ ಪಾಹಿ ಶ್ರೀಚಾಮುಂಡೇಶ್ವರಿ' ಎಂಬ ಸುರುಟಿ ರಾಗದ ಕೃತಿಯು ರೂಪಗೊಳ್ಳುತ್ತಿದ್ದು ಪಲ್ಲವಿಯನ್ನು ಮಾತ್ರ ರಚಿಸಿದ್ದರು. ಮಾರನೆಯ ದಿನವೇ ಈ ಕೃತಿಯನ್ನು ಪೂರ್ಣಗೊಳಿಸಿ ನನ್ನ ಮಗಳಿಗೆ ಹೇಳಿಕೊಟ್ಟರು. (ಅಂದಹಾಗೆ, ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಅರ್ಪಿತವಾಗಿದ್ದ ಈ ಕೃತಿಯು ಪ್ರಕಟಿತ ಪುಸ್ತಕದಲ್ಲಿ ಅವರ ಉತ್ತರಾಧಿಕಾರಿಯ ಹೆಸರಿಗೆ ಬದಲಾಯಿಸಲಾಗಿದೆ)

ಒಮ್ಮೆ ಆಚಾರ್ಯರು ತುಮಕೂರಿಗೆ ಭೇಟಿ ನೀಡಿದರು. ಅವರ ಹಳೆಯ ಮಿತ್ರರಾದ ಶ್ರೀಯುತ ಡಿ. ನಾರಾಯಣಮೂರ್ತಿಯವರು ಅವರನ್ನು ಟೆನ್ನಿಸ್ ಕೋರ್ಟಿಗೆ ಕರೆದೊಯ್ದರು. ಆಚಾರ್ಯರಿಗೆ ಒಂದು ಪೆನ್ನು ಹಾಗೂ ತುಂಡು ಕಾಗದವನ್ನು ನೀಡಿ ಆಟ ಮುಗಿಯುವ ಹೊತ್ತಿಗೆ ಖರಹರಪ್ರಿಯರಾಗದಲ್ಲಿ ಕೃತಿ ರಚಿಸಲು ಕೇಳಿಕೊಂಡರು. 'ಗಾನಸುಧಾರಸ' ಸಿದ್ಧವಾಯಿತು.

ಶಂಕರಾಭರಣದ 'ನನ್ನು ಜ್ರೋಚುಟಕು' ಕೃತಿಯ ಕೊನೆಯಲ್ಲಿ ಪಾಶ್ಚಾತ್ಯಶೈಲಿಯ ಚಿಟ್ಟೆಸ್ವರ "ss ri nrnp dd...." ಅಳವಡಿಸಿದ್ದರು. ಇದನ್ನು ಮಹಾರಾಜರು ಅರಮನೆಯ ವೃಂದವಾದ್ಯದಿಂದ ಕೇಳಿ ಚಕಿತರಾದರು. ನಮ್ಮ ಕರ್ನಾಟಕ ಶಾಸ್ತ್ರೀಯ ಶೈಲಿಯಲ್ಲಿ ಈ ಚಿಟ್ಟೆಸ್ವರವನ್ನು ರಚಿಸಲು ಹೇಳಿಕಳಿಸಿದರು. "s p dnsrs n srg srgm pgrs rgmp g"ಹೀಗೆ ಪ್ರಾರಂಭವಾಗುವ ಹೊಸ ಚಿಟ್ಟೆಸ್ವರ ಸಿದ್ಧವಾಯಿತು. ಮಾರನೆಯ ದಿನವೇ ಮಹಾರಾಜರು ಇದನ್ನು ಕೇಳಿ ಪ್ರಸನ್ನರಾಗಿ ಆಚಾರ್ಯರಿಗೆ ಕಾಣಿಕೆಯನ್ನು ಕಳಿಸಿಕೊಟ್ಟರು.

ವಿದ್ವಾನ್ ಬೆಳಕವಾಡಿ ಶ್ರೀನಿವಾಸ ಅಯ್ಯರ್ ಅವರು ವಿದ್ವಾಂಸರಿಗೆ. ವಿದ್ವಾನ್ ಎಲ್. ಮುತ್ತಯ್ಯ ಭಾಗವತರ್ ಅವರ ಶಂಕರಾಭರಣದ 'ಸಹಜಗುಣರಾಮ' ಎಂಬ ಕೃತಿಗೆ ಸರಿಸಾಟಿಯಾಗುವಂತಹ ಒಂದು ಕೃತಿಯನ್ನು ಆಚಾರ್ಯರಿಂದ ರಚಿಸಲು ಸವಾಲು ಹಾಕಿದರು. ಆಗ ಆಚಾರ್ಯರು ಶಂಕರಾಭರಣದಲ್ಲಿ ರಚಿಸಿದ 'ಹರಿಣೆ ಭಜಿಂಚೆ ಭಾಗ್ಯಮು' ಕೃತಿಯು ಸಮಾನ ಗೌರವ ಹಾಗು ಶ್ಲಾಘನೆಗಳಿಸಿತು.

ಆದರೆ ಕೆಲವೊಮ್ಮೆ ಕೃತಿ ರಚನೆಯು ಹಲವಾರು ದಿನಗಳನ್ನು ತೆಗೆದುಕೊಂಡುಬಿಡುತ್ತಿತ್ತು. ಇವರ 'ಅನಿರುದ್ಧಮಾತ್ರಯೇ', ಆರಭಿ ಹೀಗೆ ಅರ್ಧದಲ್ಲಿ ನಿಂತುಬಿಟ್ಟಿತ್ತು. ಇವರ ಸ್ನೇಹಿತರೊಬ್ಬರು ತಮಾಷೆಯಾಗಿ, 'ನಿಮ್ಮ ಅನಿರುದ್ಧ ನಿರುದ್ಧನಾಗಿ ಬಿಟ್ಟಿದ್ದಾನೆ' ಎಂದು ಛೇಡಿಸುತ್ತಿದ್ದರು. ಆದರೆ ಪ್ರಕಟಿತ ಪುಸ್ತಕದಲ್ಲಿ ರಾಗವನ್ನು ಸಾರಂಗಕ್ಕೆ ಬದಲಾಯಿಸಿರುವುದು ನನ್ನಲ್ಲಿ ಆಶ್ಚರ್ಯವನ್ನುಂಟು ಮಾಡಿದೆ. ಜುಲೈ ೧೬, ೧೯೨೨ರಂದು ಬರೆದುಕೊಂಡಿರುವ ಆರಭಿರಾಗದಲ್ಲಿರುವ ಮೂಲ ಆವೃತ್ತಿ ಮತ್ತು ಅದರ ಜೊತೆಗೆ ಚೂರ್ಣಿಕಾ ಶೈಲಿಯಲ್ಲಿರುವ 'ಪಾಲಾಕ್ಷ ಪಾಹಿ' ಎಂಬ ಆಚಾರ್ಯರ ಸಂಸ್ಕೃತ ಕೃತಿಯೂ ಕೂಡ ನನ್ನ ಬಳಿ ಇದೆ.

ಸಂಸ್ಕೃತ ಇವರಿಗೆ ಪ್ರಿಯವಾದ ಮಾಧ್ಯಮ. ಇದುವರೆವಿಗೂ ಪ್ರಕಟವಾದ ೧೫೦ ಕೃತಿಗಳಲ್ಲಿ ೯೪ ಸಂಸ್ಕೃತದಲ್ಲಿವೆ. ಉಳಿದವು ತೆಲುಗಿನಲ್ಲಿವೆ. ಇವರು ಬಳಸಿರುವ ಸಂಸ್ಕೃತ ಸಾಹಿತ್ಯ ಉತ್ಕೃಷ್ಟ ಮಟ್ಟದ್ದಲ್ಲವೆಂಬ ಟೀಕೆ ಇದೆ. ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ, ಕೃತಿರಚನೆಯಲ್ಲಿ ಆಚಾರ್ಯರ ಸೌಂದರ್ಯಪ್ರಜ್ಞೆ ಮಾತ್ರ ಕೆಲಸ ಮಾಡಿದೆ. ಒಂದು ರಚನೆಯಲ್ಲಿನ ಸಂಗೀತ ಮತ್ತು ಮಾಧುರ್ಯವನ್ನು ಮರೆಮಾಚುವಂತಹ ಕ್ಲಿಷ್ಟವಾದ ಪದಪ್ರಯೋಗವಿರುವುದು ಅವರಿಗೆ ಇಷ್ಟವಿರಲಿಲ್ಲ. ಆದರೆ ಕೆಲವು ಸಂಸ್ಕೃತ ಶ್ಲೋಕ ರಚನೆಗಳಲ್ಲಿ ಇವರು ತಮ್ಮ ಪಾಂಡಿತ್ಯವನ್ನು ನಿರೂಪಿಸಿದ್ದಾರೆ. ಇವರ ಸಂಸ್ಕೃತ ಪದಪ್ರಯೋಗವೂ ಸರಿಯಾಗಿದ್ದು ಸಂಪ್ರದಾಯಬದ್ಧವಾಗಿದೆ.

ಇವರ ಮೇಲಿರುವ ಮತ್ತೊಂದು ಆಪಾದನೆಯೆಂದರೆ, ಕನ್ನಡಿಗರಾಗಿಯೂ ಸಹ ಕನ್ನಡದಲ್ಲಿ ಕೃತಿ ರಚಿಸಲು ಒಲವು ತೋರದಿರುವುದು. ಸರಸ್ವತಿ ಮನೋಹರಿಯ 'ಕರುಣಿಸೌ' ಎಂಬ ಕನ್ನಡದ ಒಂದು ಕೃತಿ ಮಾತ್ರ ಇವರ ಲಾಂಛನವನ್ನು ಹೊಂದಿದೆ. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ರಾಜಮನೆತನದ ದೇವತೆಯಾದ ಚಾಮುಂಡೇಶ್ವರಿಯ ಮೇಲೆ ಕನ್ನಡದಲ್ಲಿ ೧೦೮ ಕೃತಿಗಳನ್ನು ಆಚಾರ್ಯರು ರಚಿಸಬೇಕೆಂದು ಬಯಸಿದ್ದರು. ಮಹಾರಾಜರ ಕೆಂಗಣ್ಣಿಗೆ ಗುರಿಯಾಗುವ ಸಂಭವವಿದ್ದರೂ ಆಚಾರ್ಯರು ಇದಕ್ಕೆ ಸಮ್ಮತಿಸಲಿಲ್ಲ. ಇವರ ಜೀವಿತ ಕಾಲದಲ್ಲೇ ಇವರು ರಚಿಸಿದ ಕೃತಿಗಳು ವಿದ್ವಾಂಸರ ಭಂಡಾರವನ್ನು ಸೇರಿದ್ದು ಆಚಾರ್ಯರ ಕೃತಿರಚನಾಕೌಶಲ್ಯಕ್ಕೆ ಸಂದ ದೊಡ್ಡ ಗೌರವ.

ತಮ್ಮ ಜೀವಿತಾವಧಿಯ ಕೊನೆಯ ಎಂಟು ವರ್ಷಗಳನ್ನು ಅಡ್ಯಾರ್ ಕಲಾಕ್ಷೇತ್ರದಲ್ಲಿ ವೈಸ್ ಪ್ರೆಸಿಡೆಂಟ್ ಹಾಗೂ ಸಂಗೀತ ವಿಭಾಗದ ಮುಖ್ಯಸ್ಥರಾಗಿ ಕಳೆದರು. ಇವರಿಗೆ ಸಂದ ಗೌರವಗಳಿಗೆ ಮುಕುಟಪ್ರಾಯದಂತೆ ೧೯೫೯ರಲ್ಲಿ ರಾಷ್ಟ್ರಪತಿಗಳಿಂದ ಪದ್ಮಭೂಷಣ ಪ್ರಶಸ್ತಿ ಪಡೆದರು.

ಆಚಾರ್ಯರು ತುಂಬು ಜೀವನ ನಡೆಸಿ ಮೇ ೧೭, ೧೯೬೧ರಲ್ಲಿ ತೀರಿಕೊಂಡರು.

ಸಂಗೀತದಷ್ಟೇ ಇವರೂ ಅತೀತರಾಗಿದ್ದರು. ಆನಂದವೇ ದೈವತ್ವವೆಂದು ನಂಬಿದ್ದ ಇವರಿಗೆ ಸಂಗೀತವೇ ಆತ್ಮವಾಗಿತ್ತು. ಸೊಗಸಾದ ಕೃತಿಗಳ ಮೂಲಕ ತಮ್ಮ ಆನಂದವನ್ನು ನಮ್ಮೆಲ್ಲರೊಂದಿಗೆ ಹಂಚಿಕೊಂಡರು. ಇವರ ಧಾರ್ಮಿಕ ನಂಬಿಕೆ ಎಂದೂ ಹರಿ-ಹರರಲ್ಲಿ ಭೇದವನ್ನು ಕಾಣುತ್ತಿರಲಿಲ್ಲ ಹಾಗೂ ಮಠಾಧಿಪತಿಗಳ ನಡುವಿನ ಭೇದವನ್ನು ಇವರು ಎಂದೂ ಒಪ್ಪಿದವರಲ್ಲ. ಇವರು ಸರಳ ಹಾಗು ನಿಷ್ಕಲ್ಮಷ ಭಕ್ತಿಯಲಿ ನಂಬಿಕೆಯುಳ್ಳವರಾಗಿದ್ದರು. ಇವರ ಜೀವನದಲ್ಲಿ ನಡೆದ ದುರ್ಘಟನೆಗಳನ್ನು ಎಂದೂ ಯಾರೆದುರೂ ನೆನೆದವರಲ್ಲ. ಇವರೊಂದಿಗಿನ ಮೂವತ್ತು ವರ್ಷಗಳ ಒಡನಾಟದಲ್ಲಿ ಸಂಗೀತಗಾರರನ್ನು ಒಳಗೊಂಡಂತೆ ಒಮ್ಮೆಯೂ ಬೇರೊಬ್ಬರ ವಿರುದ್ಧ ಮಾತನಾಡಿದ್ದನ್ನು ನಾನು ಕೇಳಿಲ್ಲ. ಪ್ರಸನ್ನಶೀಲರೂ, ಸೌಜನ್ಯವಂತರೂ, ಹಾಸ್ಯಪ್ರವೃತ್ತಿಯುಳ್ಳವರೂ ಹಾಗೂ ಸಂಗೀತಭಾವವೇ ಮೂರ್ತಿವೆತ್ತಂತಿದ್ದ ಇವರು ಬಹಳ ಜನಪ್ರಿಯರಾಗಿದ್ದರು. ಮೈಸೂರಿನ ಜನತೆ ಇವರ ಮೇಲಿಟ್ಟಿದ್ದ ಅಭಿಮಾನದಿಂದ ಒಂದು ಮನೆಯನ್ನು ಕಟ್ಟಿಕೊಟ್ಟಿದ್ದು ಒಬ್ಬ ಸಂಗೀತಗಾರನಿಗೆ ಸಂದ ವಿಶಿಷ್ಟವಾದ ಗೌರವ. ಇವರ ಹೆಸರಿನ ಉತ್ಪತ್ತಿಗೆ (ವಸತಿ ಇತಿ ವಾಸುಃ) ಅನ್ವರ್ಥವೆಂಬಂತೆ ಆಚಾರ್ಯರು ನಮ್ಮ ಹೃದಯದಲ್ಲಿ ಶಾಶ್ವತವಾಗಿ ನೆಲೆಗೊಂಡಿದ್ದು ತಮ್ಮ ರಚನೆಗಳ ಮೂಲಕ ನಮ್ಮೊಂದಿಗೆ ಸದಾಕಾಲ ಇರುತ್ತಾರೆ.

ಅನುವಾದ : ಸಾತವಳ್ಳಿ ವಗತಿಪ್ರಿಯ

ಬೆಂಗಳೂರು ಪುಟ್ಟಯ್ಯ ರಾಧಾಕೃಷ್ಣ

ಕೆ.ವಿ. ಸುಬ್ಬಾರಾವ್

ಕನ್ನಡ ಸಾಹಿತ್ಯ ಪರಿಷತ್ತಿನ ಪಕ್ಕದ ರಸ್ತೆಯಲ್ಲಿಯೇ ಇದ್ದಾರೆ. ಹೆಜ್ಜೆ ಹಾಕಿದರೆ ಕರ್ನಾಟಕ ಸಾಹಿತ್ಯ ಅಕಾಡೆಮಿಯೂ ಸಿಕ್ಕುತ್ತದೆ. ಮುಂದುವರಿದರೆ ನಮ್ಮನ್ನು ಆಳುವವರ ವಿಧಾನಸೌಧವಿದೆ. ದೂರದಲ್ಲಿ, ಸುತ್ತಮುತ್ತ ಎಷ್ಟು ವಿಶ್ವವಿದ್ಯಾನಿಲಯಗಳು ಇವೆಯೋ. ಆದರೆ ಕನ್ನಡಿಗರ ಕಣ್ಣಿಗೆ ಕಾಣದ ಚೈತನ್ಯ ಪುರುಷ ಜಿ.ಪಿ. ರಾಧಾಕೃಷ್ಣ ಅವರು, ಇದೀಗ ೯೦ಕ್ಕೆ ಕಾಲಿಟ್ಟಿದ್ದಾರೆ. ದೇಶವಿದೇಶದಲೆಲ್ಲ ಗೌರವಕ್ಕೆ ಪಾತ್ರರಾದ ಭೂವಿಜ್ಞಾನಿ. ನ್ಯಾಷನಲ್ ಜಿಯಾಗ್ರಫಿಯ ಸುದೀರ್ಘ ಕಾಲದ ಸಂಪಾದಕರು. ಕನ್ನಡದಲ್ಲಿ ೧೯೪೪ರಿಂದಲೇ ಅನೇಕ ಕೃತಿಗಳನ್ನು ಹೊರತಂದವರು. ರಾಧಾಕೃಷ್ಣರ ತಂದೆ ಬಿ. ಪುಟ್ಟಯ್ಯನವರು ಸರ್ಕಾರಿ ಮುದ್ರಣಾಲಯ, ಮೈಸೂರು ವಿಶ್ವವಿದ್ಯಾಲಯ, ಕನ್ನಡ ಸಾಹಿತ್ಯ ಪರಿಷತ್ತು, ಒಕ್ಕಲಿಗರ ಸಂಘ - ಹೀಗೆ ಹತ್ತಾರು ಸಂಘ ಸಂಸ್ಥೆಗಳನ್ನು ಕಟ್ಟಿದವರಲ್ಲಿ ಒಬ್ಬರಾಗಿ, ಕರ್ನಾಟಕದ ಏಳಿಗೆಗಾಗಿಯೇ ಅಕ್ಷರಶಃ ಪ್ರಾಣಬಿಟ್ಟವರು. ಅಷ್ಟೇ ಅಲ್ಲದೆ ರಾಧಾಕೃಷ್ಣರ ಕುಟುಂಬವೇ ನಾಡಿನ ನಾನಾ ಕ್ಷೇತ್ರದಲ್ಲಿ ದುಡಿದು, ಚಿರಸ್ಮರಣೀಯರೆನಿಸಿದವರು. ಅಂಥವರು ನಮ್ಮ ನಡುವೆ ಇದ್ದಾರೆ. ಅವರ ಬದುಕು ಎಷ್ಟು ದೊಡ್ಡದೋ, ಬದುಕಿಗೂ ಇದರಿಂದ ದೊಡ್ಡಸ್ತಿಕೆ ಎಂಬುದೇ ನಮ್ಮ ಪಾಲಿನ ಸತ್ಯ. ರಾಧಾಕೃಷ್ಣರು 'ಪ್ರಜಾಸಾಹಿತ್ಯ' ಪತ್ರಿಕೆಯ ಸದಸ್ಯರು. ಲೇಖಕ ಬಳಗದಲ್ಲಿರುವವರು ಎಂಬುದೂ ಹೆಮ್ಮೆ.

ಬಿ.ಪಿ. ರಾಧಾಕೃಷ್ಣ ಅವರಿಗೆ ೭೫ ಆದಾಗ ಕೆ.ವಿ. ಸುಬ್ಬಾರಾವ್ ಅವರು ಸಂಪಾದಿಸಿದ, Wiley Eastern Limited ಸಂಸ್ಥೆಯವರು "Volcanism" ಎಂಬ, ದೇಶವಿದೇಶದ ಪ್ರಜ್ಞಾವಂತರು ವಿಜ್ಞಾನಿಗಳು ಅರ್ಪಿಸಿದ ಗೌರವಗ್ರಂಥದಲ್ಲಿನ ಲೇಖನವನ್ನು ಸಾತವಲ್ಲಿ ಜಗತಿಪ್ರಿಯ ಇಲ್ಲಿ ಅನುವಾದಿಸಿದ್ದಾರೆ. ರಾಧಾಕೃಷ್ಣ ಅವರು ಇರುವಷ್ಟು ಕಾಲವೂ ಆರೋಗ್ಯವಾಗಿ, ನೆಮ್ಮದಿಯಿಂದ ಇರಲಿ ಎಂಬುದೇ ನಮ್ಮ ಆಶಯ, ಶುಭಾಶಯ.

ಸಂಪಾದಕ

"The truly great are not the men of wealth, of possessions, not men who gain name and fame, but these who testify to the truth in them and refuse to compromise whatever be the cost. They are determined to do what they consider to be right. We may punish their bodies, refuse them comforts, but we cannot buy their souls, we cannot break their spirits. Whoever possesses this invulnerability of spirits even to a little extent deservers our admiration."

- ಸರ್ವೇಪಲ್ಲಿ ರಾಧಾಕೃಷ್ಣನ್

ಬೆಂಗಳೂರು ಪುಟ್ಟಯ್ಯ ರಾಧಾಕೃಷ್ಣ (ಜಿಪಿಆರ್ ಎಂದು ಪ್ರಸಿದ್ಧರಾಗಿರುವ) ಖಂಡಿತವಾಗಿಯೂ ಅಂಥ ಸಾಲಿಗೆ ಸೇರುವ ತೇಜೋವಂತರು. ಇವರ ೭೫ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಗೌರವ ಅರ್ಪಿಸಲು ನಾವು ಸಂತೋಷ ಮತ್ತು ಹೆಮ್ಮೆ ಪಡುತ್ತೇನೆ.

ಪ್ರಾರಂಭದ ವರ್ಷಗಳು

ಬಿಪಿಆರ್ ೩೦ನೇ ಏಪ್ರಿಲ್ ೧೯೧೮ರಲ್ಲಿ ಬೆಂಗಳೂರಿನಲ್ಲಿ ಶ್ರೀ ಬೆಂಗಳೂರು ಪುಟ್ಟಯ್ಯನವರ ಮೂರನೇ ಪುತ್ರರಾಗಿ ಜನಿಸಿದರು. ಶ್ರೀ ಬೆಂಗಳೂರು ಪುಟ್ಟಯ್ಯನವರು ಮೈಸೂರು ರಾಜ್ಯದ ಜನಪ್ರಿಯ ವ್ಯಕ್ತಿಗಳಲ್ಲೊಬ್ಬರು. ಬಿಪಿಆರ್ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ, ೧೯೩೭ರಲ್ಲಿ ಪದವಿ ಗಳಿಸಿ ಭೂ ವಿಜ್ಞಾನದಲ್ಲಿ ಬಿಎಸ್ಸಿ (ಆನರ್ಸ್) ಡಿಗ್ರಿಯನ್ನು ಮೊದಲ ದರ್ಜೆಯಲ್ಲಿ ಚಿನ್ನದ ಪದಕದೊಂದಿಗೆ ಪಡೆದರು.

ಪದವಿ ಶಿಕ್ಷಣದ ತರುವಾಯ ಇವರು ಮೈಸೂರು ಭೂವಿಜ್ಞಾನ ಇಲಾಖೆ (MGD)ಯಲ್ಲಿ Field Assistant ಆಗಿ ೧೯ರ ಹರೆಯದಲ್ಲಿ ಸೇರಿಕೊಂಡರು.

ಮೈಸೂರು ಭೂವಿಜ್ಞಾನ ಇಲಾಖೆಯಲ್ಲಿ ಸೇವೆ

ಮೈಸೂರು ಭೂವಿಜ್ಞಾನ ಇಲಾಖೆಯನ್ನು ರಾಜ್ಯದ ಮೊದಲ ಭೂವಿಜ್ಞಾನಿಯಾದ ಶ್ರೀ ರಾಬರ್ಟ್ ಬ್ರೂಸ್ ಫೂಟ್ ಅವರು ೧೮೯೪ರಲ್ಲಿ ಪ್ರಾರಂಭಿಸಿದರು. ನಂತರ ಮೈಸೂರು ಭೂವಿಜ್ಞಾನದ ಕಟ್ಟಾಳುಗಳಾದ ಶ್ರೀ ಡಬ್ಲೂ.ಎಫ್.ಸ್ಮಿತ್, ಶ್ರೀ ಪಿ. ಸಂಪತ್ ಅಯ್ಯಂಗಾರ್ ಮತ್ತು ಶ್ರೀ ಬಿ. ರಾಮರಾವ್ ಮುಂದುವರೆಸಿದರು. ಇವರುಗಳ ಮಾರ್ಗದರ್ಶನದಲ್ಲಿ ದಕ್ಷಿಣ ಭಾರತದ Precambrianನ ಸುಸಂಗತವಾದ ಭೂವೈಜ್ಞಾನಿಕ ಇತಿಹಾಸ ಮತ್ತು ರಾಜ್ಯದ ಅತ್ಯುತ್ತಮ ಹಾಗೂ ನಿಷ್ಕೃಷ್ಟವಾದ ಭೂವೈಜ್ಞಾನಿಕ ನಕ್ಷೆಯು ರಚಿತವಾಯಿತು.

ಬಿಪಿಆರ್ ಈ ಇಲಾಖೆಯಲ್ಲಿ ೩೭ ವರ್ಷಗಳ ಕಾಲ ಸೇವೆ ಸಲ್ಲಿಸಿ ೧೯೭೪ರಲ್ಲಿ ನಿವೃತ್ತರಾದರು. ಇವರು ನಿರ್ದೇಶಕರಾಗಿದ್ದ ಸೇವಾ ಅವಧಿಯಲ್ಲಿ ಇಲಾಖೆಯು ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿತು. ವಿಶೇಷವಾಗಿ ರಾಜ್ಯದ ಖನಿಜ ಸಂಪತ್ತು ಅಭಿವೃದ್ಧಿ ಮತ್ತು ಅಂತರ್ಜಲ ಸದ್ಬಳಕೆಗೆ ಒತ್ತು ನೀಡಲಾಯಿತು.

ಜಿಯೊಲೋಜಿಕಾಲ್ ಸೊಸೈಟಿ ಆಫ್ ಇಂಡಿಯಾ

ಬಿಪಿಆರ್ ಅವರು ಭಾರತೀಯ ಭೂವಿಜ್ಞಾನದ ಅಭಿವೃದ್ಧಿಗೆ ಮಾಡಿದ ಸೇವೆಯಿಂದ ಸದಾ ಚಿರಸ್ಮರಣೀಯರಾಗಿರುತ್ತಾರೆ. ೧೯೫೮ರಲ್ಲಿ "ಭೂವಿಜ್ಞಾನದ ಸಂಶೋಧನೆಯ ಗುಣಮಟ್ಟದ ಅಭಿವೃದ್ಧಿಗೋಸ್ಕರ ಮುಕ್ತ ಚಿಂತನೆ ಹಾಗೂ ಅಭಿಪ್ರಾಯ ವಿನಿಮಯಕ್ಕೆ ಮತ್ತು ಫಲಿತಾಂಶಗಳ ತ್ವರಿತ ಪ್ರಕಟಣೆ ಹಾಗೂ ಜ್ಞಾನದ ಪ್ರಸಾರಕ್ಕಾಗಿ ವೇದಿಕೆ ಒದಗಿಸುವ" ಸಲುವಾಗಿ ಒಂದು ಸಮಾಜವನ್ನು ಸಂಘಟಿಸುವ ಗುಂಪಿನ ಪ್ರಮುಖ ಸದಸ್ಯರಾಗಿದ್ದು ಜೊತೆಗೆ ಈ ಸಮಾಜದ ಮೊದಲ ಕಾರ್ಯದರ್ಶಿಯಾಗಿ ಹದಿನೈದು ವರ್ಷಗಳ ಕಾಲ ಸೇವೆ ಸಲ್ಲಿಸಿ ನಂತರ ೧೯೭೪-೧೯೯೨ರ ವರೆಗೆ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು.

ಈ ಸಮಾಜವು ಇವರ ಪ್ರೀತಿಯ ಪೋಷಣೆಯಲ್ಲಿ ಅಭಿವೃದ್ಧಿ ಹೊಂದಿ ಈಗಲೂ ಸಹ ಏಳಿಗೆ ಹೊಂದುತ್ತಿದೆ. ವರ್ಷಕ್ಕೊಮ್ಮೆ ಹೊರಬರುತ್ತಿದ್ದ ವೃತ್ತಪತ್ರಿಕೆಯು ಈಗ ತಿಂಗಳಿಗೊಮ್ಮೆ ಪ್ರಕಟವಾಗುತ್ತಿದೆ. ವೃತ್ತಪತ್ರಿಕೆಯು ಉತ್ಕೃಷ್ಟ ಗುಣಮಟ್ಟವನ್ನು ಕಾಪಾಡುವ ಜೊತೆಗೆ, ಹಲವಾರು ಪ್ರಕಾಶನ ಮಾಲಿಕೆಗಳೂ, ಪ್ರೌಢಪ್ರಬಂಧಗಳೂ, ಉಪನ್ಯಾಸ ಲೇಖನಗಳೂ, ಫೀಲ್ಡ್‌ಗೈಡ್ ಪುಸ್ತಕಗಳೂ, ಖನಿಜ ಸಂಪತ್ತು ಮಾಲಿಕೆಗಳೂ, ಭೂವಿಜ್ಞಾನದ ಪಠ್ಯಪುಸ್ತಕಗಳೂ ಹಾಗೂ ರಾಜ್ಯಗಳ ಖನಿಜ ಸಂಪತ್ತುಗಳ ವಿವರವನ್ನೂ ಹೊರತರಲಾಗಿದೆ.

ಬಿಪಿಆರ್ ತಮ್ಮ ಯಾವತ್ತೂ ಗಮನವನ್ನು ಚರ್ಚಾಗೋಷ್ಠಿ, ವಿಚಾರ-ವಿನಿಮಯ ಮತ್ತು ಕಾರ್ಯಾಗಾರಗಳಿಗೆ ನೀಡುತ್ತಿದ್ದರು. ಸೊಸೈಟಿಯನ್ನು ರಾಷ್ಟ್ರೀಯ ಮಟ್ಟಕ್ಕೇರಿಸುವ ಹಾಗೂ ಯುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಮುಖ್ಯ ಉದ್ದೇಶದಿಂದ ಜಿಯೊಲೋಜಿಕಲ್ ಸೊಸೈಟಿಯ ವಾರ್ಷಿಕ ಸಭೆಗಳನ್ನು ಕೆಲವು ವರ್ಷಗಳಿಂದ ದೇಶದ ವಿವಿಧ ಕೇಂದ್ರಗಳಲ್ಲಿ ನಡೆಸಲಾಗುತ್ತಿದೆ.

ಜಿಯೊಲೋಜಿಕಲ್ ಸೊಸೈಟಿಯಲ್ಲಿ ಪ್ರಕಟಣೆಗಳು ಭಾರತದಲ್ಲಿ ಭೂವಿಜ್ಞಾನದ ಅಧ್ಯಯನದ ಮೇಲೆ ಉಪಯುಕ್ತ ಪರಿಣಾಮವನ್ನು ಬೀರುವಲ್ಲಿ ಯಶಸ್ವಿಯಾಗಿವೆ. ಸೊಸೈಟಿಯು ಗುಣಮಟ್ಟದಲ್ಲಿ

ಎತ್ತರಕ್ಕೆ ಬೆಳೆದಿದ್ದು ಸುಮಾರು ೨೦೦೦ ಸದಸ್ಯರನ್ನು ಹೊಂದಿದೆ. ಜಿಪಿಆರ್ ಅವರ ನಿಸ್ವಾರ್ಥಸೇವೆಯು ಸೊಸೈಟಿಯ ಬೆಳವಣಿಗೆಗೆ ಮುಖ್ಯ ಕಾರಣ. ಇವರನ್ನು ನಮ್ಮ ಸ್ನೇಹಿತ, ಸಹೋದ್ಯೋಗಿ ಮತ್ತು ಮಾರ್ಗದರ್ಶಿ ಎನ್ನಲು ನಮಗೆ ಬಹಳ ಗೌರವ ಎನಿಸುತ್ತದೆ.

ಇವರ ಕಾರ್ಯಸಾಧನೆಯ ವಿಶಿಷ್ಟ ಗುಣಲಕ್ಷಣವೆಂದರೆ ಸೊಸೈಟಿಯ ಕಾರ್ಯಕ್ರಮಗಳನ್ನು ಸರ್ಕಾರದ ಸಹಾಯ ಕೇಳದೆ ಸ್ವತಂತ್ರ್ಯವಾಗಿ ನಿಭಾಯಿಸುತ್ತಿದ್ದರು. ಇವರು ಸೊಸೈಟಿಯ ಸದಸ್ಯರ ಬೌದ್ಧಿಕ ಕಾರ್ಯಕ್ಷಮತೆಯನ್ನು ಹಾಗೂ ವೈಯಕ್ತಿಕ ಅರ್ಪಣಾಮನೋಭಾವವನ್ನು ಹಣಕಾಸಿನ ಕೊಡುಗೆಗಿಂತ ಹೆಚ್ಚು ಎಂದು ನಂಬಿದವರು. ಜಿಪಿಆರ್ ಅವರ ವೈವಿಧ್ಯಪೂರ್ಣ ಆಸಕ್ತಿಗಳನ್ನೂ, ಮತ್ತು ಭಾರತದ ಭೂವಿಜ್ಞಾನಕ್ಕೆ ಅವರು ನೀಡಿದ ಕೊಡುಗೆಯನ್ನೂ ಕ್ಲುಪ್ತವಾಗಿ ಇಲ್ಲಿ ವಿವರಿಸಲಾಗಿದೆ :

ಪಶ್ಚಿಮ ಘಟ್ಟಗಳು

ಜಿಪಿಆರ್ ಅವರು ಭಾರತದ ಪಶ್ಚಿಮತೀರಕ್ಕೆ ಪರ್ಯಾಯವಾಗಿರುವ ಮೂರನೆಯ ಭೂಯುಗದ (Late tertiary age) ಅಂತ್ಯಕಾಲದ ಅದ್ಭುತಗಳಲ್ಲೊಂದಾದ ನೈಸರ್ಗಿಕ ಇಳಿಜಾರನ್ನು (Escarpment) ಪ್ರತಿನಿಧಿಸುವ ಪಶ್ಚಿಮ ಘಟ್ಟಕ್ಕೆ ಆಕರ್ಷಿತರಾಗಿದ್ದರು. ಈ ಪರ್ಯಾಯ ದ್ವೀಪವು ಇತ್ತೀಚಿನ techtonic ಚಲನೆಯಿಂದ ಭಾದಿತವಾಗಿರುವ ಸ್ಥಾಯಿರಾಶಿ (Static Mass) ಎಂದು ೧೯೫೨ರಲ್ಲೇ ಜಿಪಿಆರ್ ಅವರು ತೋರ್ಪಡಿಸಿದವರು. ಪ್ರಕೃತಿ ಭೂಗೋಳದ (physiographic) ವೈಚಿತ್ರ್ಯಗಳಾದ - ಭೂದೃಶ್ಯದ (landscapes) ಗಮನಾರ್ಹವಾದ ಬದಲಾವಣೆಗಳು, ನದಿಗಳ ಯೌವ್ವನದ ಲಕ್ಷಣಗಳು, ಪ್ರಪಾತದಂತಹ ನೈಸರ್ಗಿಕ ಇಳಿಜಾರು (precipitous escarpment), Narrow gorges ಮತ್ತು ಸಮತಲದ ಭೂಮಿಗೆ ಹೋಲಿಸಿದರೆ ಪ್ರಸ್ಥಭೂಮಿಯ ಹೆಚ್ಚಿನ ಎತ್ತರ - ಇವುಗಳು domal uplift ಮತ್ತು riftingಗೆ ಕಾರಣವೆಂದು ಅವರು ತಾರ್ಕಿಕವಾಗಿ ನಿರೂಪಿಸಿದರು. ಇವರು ಭಾರತೀಯ ದ್ವೀಪಕಲ್ಪಗಳ ಪೂರ್ವದ ನೀರ್ಗಾಲುವೆಗಳ ಮಹತ್ತ್ವವನ್ನು ಗುರುತಿಸಿದ್ದಲ್ಲದೆ intermittent upliftನ ಪರಿಣಾಮವಾಗಿ cyclic erosion surfacesನ ಮೇಲ್ಮೆ ವೃದ್ಧಿಯಾಗುತ್ತದೆ ಎಂದು ನಿರೂಪಿಸಿದರು.

"The Mysore Plateau" (೧೯೫೨) ಮತ್ತು "The Western Ghats of the Indian Peninsula" (೧೯೬೫) - ಎಂಬ ಎರಡು ಕೃತಿಗಳಲ್ಲಿ ಭಾರತದ ಪರ್ಯಾಯ ದ್ವೀಪಗಳ (Peninsula) ಉಗಮದ ಬಗೆಗಿನ ಇವರ ಅಭಿಪ್ರಾಯವನ್ನು ಮಂಡಿಸಿದ್ದಾರೆ.

Closepet Granite

Younger porphyritic potassic ಗ್ರಾನೈಟ್ ಪರಿವಾರಕ್ಕೆ ಸೇರಿದ, ಉದ್ದನೆಯ ರೇಖಾತ್ಮಕ ಪಟ್ಟಿಯಂತೆ ಗೋಚರಿಸುವ, ೫೦೦ ಕಿಲೋಮೀಟರ್ ಉದ್ದಕ್ಕೂ ಗುರುತಿಸಲ್ಪಡಬಹುದಾದ Drawar Gaton ನಲ್ಲಿನ Greenstone ಪಟ್ಟಿಗಳ ಪ್ರಕೃತಿ ಭೂಗೋಳಿಕ ಪ್ರವೃತ್ತಿಯನ್ನೇ ಹೋಲುವ Closepet Graniteಗಳ ಮೇಲೆ ಐವತ್ತರ ದಶಕದ ಪ್ರಾರಂಭದಲ್ಲಿಯೇ ಜಿಪಿಆರ್ ವಿಶೇಷ ಅಧ್ಯಯನ ನಡೆಸಿದ್ದರು. Pink porphyritic ಗ್ರಾನೈಟ್‌ನ ಉಗಮಕ್ಕೆ anatexis ಮತ್ತು Peninsular gneissನ ಆಂಶಿಕ ಕರಗುವಿಕೆಯ ಪಾತ್ರವನ್ನು ಸೂಚಿಸಿದವರಲ್ಲಿ ಜಿಪಿಆರ್ ಮೊದಲಿಗರು.

ಭಾರತೀಯ ಪರ್ಯಾಯ ದ್ವೀಪದ granite-greenstoneನ ಭೂಪ್ರದೇಶದ ವಿವಿಧ ಸಾಂದ್ರತೆಯುಳ್ಳ ಎರಡು ತುಂಡಾದ ಹರಳುಗಳನ್ನು ಒಂದುಗೂಡಿಸುವ ಭೂಹೊಲಿಗೆಯು (geo-suture) ಬಹುಭಾಗವನ್ನು Clospet Granite ಆಕ್ರಮಿಸಿಕೊಂಡಿರುವುದರಿಂದ ಅದರ ರೇಖಾತ್ಮಕ ರಚನಾಕ್ರಮವು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಜಿಪಿಆರ್ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ Closepet Graphiteನ ಮೇಲಿನ ಸಂಶೋಧನೆಗೆ ಪಿಹೆಚ್.ಡಿ. ಪದವಿ ದೊರೆಯಿತು.

ದಕ್ಷಿಣ ಭಾರತದ ಪ್ರೀಕ್ಯಾಂಬ್ರೀನ್ (Precambrain)

೧೯೮೨ರಲ್ಲಿ ಇಂಡೋ-ಅಮೆರಿಕನ್ ಕಾರ್ಯಾಗಾರದಲ್ಲಿ "Archean Granite-Greenstone Terrain of the South Indian Shield" ಎಂಬ ವಿಷಯದ ಮೇಲೆ ಇವರು ಪ್ರಬಂಧ

ಮಂಡಿಸಿದರು. ಅಲ್ಲಿ ಇವರು ಈ ದಕ್ಷಿಣ ಭಾರತದ Precambrian ಬಗ್ಗೆ ಪ್ರಸ್ತುತ ತಿಳಿದಿರತಕ್ಕಂತಹ ವಿಷಯಗಳು ಮತ್ತು ಅದರ metallogeny ಬಗ್ಗೆ ವಿಮರ್ಶಿಸಿದರು. ದಕ್ಷಿಣ ಭಾರತದ Archeanಅನ್ನು ವರ್ಣಿಸುವ ಮೂರು ಪ್ರಮುಖ ಶಿಲಾ ಸಂಘಟನೆಗಳನ್ನು ಇವರು ವಿವರಿಸಿದರು :

1) The high grade granulite association.

2) The granite-greenstone association (Ancient Supracrustals).

3) The craton-basin association (Dharwars).

ಇವರ ಮಾತುಗಳಲ್ಲೇ ಹೇಳುವುದಾದರೆ "ದಕ್ಷಿಣ ಭಾರತದಲ್ಲಿರುವಂತೆ ಜಗತ್ತಿನ ಇನ್ಯಾವುದೇ ಭಾಗದಲ್ಲಿ ಮೂರು ಸಂಘಟನೆಗಳು ಒಟ್ಟಾಗಿ ಸೇರಿ ಭೂಖಂಡದ ಪ್ರಾರಂಭಿಕ ಪದರಗಳ (early continental crust) ಉಗಮದ ವಿವಿಧ ಹಂತಗಳ ಅಧ್ಯಯನಕ್ಕೆ ಅತ್ಯುತ್ತಮ ವೇದಿಕೆಯನ್ನು ಒದಗಿಸಿಕೊಟ್ಟಿಲ್ಲ."

ಪ್ರೊ. ಆರ್.ಸಿ. ನ್ಯೂಟನ್ ಅವರ ಕೋರಿಕೆಯ ಮೇರೆಗೆ ಬಿಪಿಆರ್ ಅವರು ಶ್ರೀ ಎಸ್.ಎಂ. ನಕ್ವಿ ಅವರ ಜೊತೆಗೂಡಿ Precambrain crust ಮತ್ತು ಅದರ ಉಗಮದ ಬಗ್ಗೆ ಸ್ಪಷ್ಟವಾದ ವಿವರಣೆ ನೀಡಿದ್ದು, ಅದನ್ನು Journal of Geology (೧೯೮೬)ರಲ್ಲಿ ಪ್ರಕಟಿಸಲಾಗಿದೆ.

Suspect Terrane Elements in the Indian Subcontinent

ಬಿಪಿಆರ್ ಭಾರತ ಉಪಖಂಡದ ಭೌಗೋಳಿಕ ಮತ್ತು ಪ್ರಕೃತಿಗೋಚರ ವಿಷಯಗಳಿಂದ ಆಕರ್ಷಿತರಾಗಿದ್ದರು. ಇವರು "ವಿಜ್ಞಾನದಲ್ಲಿನ ಅದ್ಭುತ ಬೆಳವಣಿಗೆಗಳು ನಿರ್ಭೀತ ಕಲ್ಪನೆಗಳಿಂದ ಮತ್ತು ಕ್ಲಿಷ್ಟತೆಯ ಹಿಂದೆ ಹುದುಗಿರುವ ಸರಳ ವಿನ್ಯಾಸದ ಅನ್ವೇಷಣೆಯಿಂದ ಸಾಧ್ಯ" ಎಂದು ನಂಬಿದ್ದರು. ಇವರು ಭಾರತ ಉಪಖಂಡದ ವಿವಿಧ ಭಾಗಗಳ ಚದುರಿಹೋಗುವಿಕೆ ಮತ್ತು ಮರುಜೋಡಣೆಯ ಮೇಲಿನ ತಮ್ಮ ಸ್ವತಂತ್ರ ಪ್ರಸ್ತುತಿಯನ್ನು ಜಿಯೊಲೋಜಿಕಲ್ ಸೊಸೈಟಿ ಆಫ್ ಇಂಡಿಯಾದ ವಾರ್ಷಿಕ ಸಾರ್ವತ್ರಿಕ ಸಭೆಯಲ್ಲಿ ೧೯೮೭ರಲ್ಲಿ ಮಂಡಿಸಿದರು. ಭೌಗೋಳಿಕ ಸಾಹಿತ್ಯದ ಕುರಿತಾದ ವಿಸ್ತೃತ ಅಧ್ಯಯನ, ದತ್ತಾಂಶದ ವಿಮರ್ಶಾತ್ಮಕ ಮೌಲ್ಯಮಾಪನ ಮತ್ತು ಇವರ ಅಂತರ್ದೃಷ್ಟಿ ಈ ಪ್ರಬಂಧ ಮಂಡನೆಗೆ ಆಧಾರ. ಭಾರತ ಉಪಖಂಡವು ಭೌಗೋಳಿಕವಾಗಿ ಒಂದಕ್ಕೊಂದು ಸಂಬಂಧವಿಲ್ಲದ ವಿವಿಧ Custal blockಗಳಿಂದ ಕೂಡಿದ್ದು, ಅವುಗಳನ್ನು ಒಂದರ ಪಕ್ಕಕ್ಕೊಂದನ್ನು ಜೋಡಿಸಿ, (juxtaposition) ಹೊಲಿದು ಸೇರಿಸಿರುವಂತೆ (suture) ಭೂ ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ಒಗ್ಗೂಡಿಸಲಾಗಿದೆ ಎಂದು ಇವರು ಊಹಿಸಿದರು. ಇವರ ಅಭಿಪ್ರಾಯದಂತೆ ನರ್ಮದಾ ತೀರದ ದಕ್ಷಿಣಕ್ಕಿರುವ Peninsular Blockನ ಭಾಗವಾಗಿರುವ ಭೂಪ್ರದೇಶ ಮತ್ತು ಉತ್ತರಕ್ಕಿರುವ Bundelkhand Blockನ ಭೂಪ್ರದೇಶವು ಎರಡು ಬೇರೆಯದೇ ಆದ ಭೂಪ್ರದೇಶವನ್ನು ಪ್ರತಿನಿಧಿಸುತ್ತಿದ್ದು ಪ್ರಾಚೀನ Proterozoic ಕಾಲದಲ್ಲಿ ಒಟ್ಟಾಗಿವೆ.

ಮೂರು ಬಿಲಿಯನ್ ವರ್ಷಗಳಷ್ಟು ಹಳೆಯದಾದ ಬರೈಟ್ (Barite)

ಮೂರು ಬಿಲಿಯನ್ ವರ್ಷಗಳಷ್ಟು ಹಳೆಯದಾದ ಧಾರವಾಡ ಬೇಸಿನ್‌ನಲ್ಲಿ Barite ಮೊದಲು ವರದಿಯಾದದ್ದು ಕರ್ನಾಟಕದ ಗಟ್ಟಿಹೊಸಳ್ಳಿಯಲ್ಲಿ ೧೯೭೪ರಲ್ಲಿ. ಈ ಬರೈಟ್ ಮಾದರಿಗಳಲ್ಲಿನ Unioform Sulphur isotopic ಸಂಯೋಜನೆಯು ಶ್ರೀರಾಧಾಕೃಷ್ಣ ಮತ್ತು ಶ್ರೀ ಶ್ರೀನಿವಾಸಯ್ಯನವರ ಈ ಕಾರ್ಯವು ಮಹತ್ತ್ವ ಪಡೆಯಲು ಕಾರಣ. ವಾಷಿಂಗ್‌ಟನ್ ಡಿಸಿಯಲ್ಲಿನ ಜಿಯೋಫಿಸಿಕಲ್ ಲ್ಯಾಬೊರೇಟರಿಯ ಶ್ರೀಥಾಮಸ್ ಹೊಯ್‌ರಿಂಗ್ ದಾಖಲಿಸಿರುವಂತೆ ಈ ಮಾದರಿಗಳಲ್ಲಿನ Sedimentನ ಪ್ರಾಚೀನ ಲಕ್ಷಣಗಳು-ಆಸ್ಟ್ರೇಲಿಯಾ, ಆಫ್ರಿಕಾ ಮತ್ತು ಸೈಬೀರಿಯನ್ Shieldsಗಳನ್ನು ಹೋಲುತ್ತವೆ.

Crust Evolution and Metallogeny

ಜಿಪಿಆರ್ ಲೋಹ ನಿಕ್ಷೇಪದ ಮೇಲೆ Crustal ಉಗಮದ ಪ್ರಭಾವದ ಬಗ್ಗೆ ಉತ್ಕೃಷ್ಟವಾದ ವಿಮರ್ಶೆ ಹಾಗೂ ಸಂಶ್ಲೇಷಣೆಯನ್ನು ನೀಡಿದ್ದಾರೆ. ಭಾರತದ ಪ್ರಮುಖ Metalliferrous ನಿಕ್ಷೇಪಗಳ ಸಂಪೂರ್ಣವಾದ ಸಮೀಕ್ಷೆಯ ಆಧಾರದ ಮೇಲೆ ಈ ಪ್ರಬಂಧವನ್ನು ರಚಿಸಿದ್ದಾರೆ. (ಜಿಯೋಲೋಜಿಕಲ್ ಸೊಸೈಟಿ ಆಫ್ ಇಂಡಿಯಾದ ವಾರ್ಷಿಕ ಸಭೆಯಲ್ಲಿ ಮಾಡಿದ ಭಾಷಣ, Jour. Geol. Soc. India, V. 25, pp. 617-640)

ಖನಿಜ ಅಭಿವೃದ್ಧಿ

ಜಿಪಿಆರ್ ಸದಾಕಾಲ ಖನಿಜ ನಿಧಿಗಳ ವಿವೇಚನಾಯುಕ್ತ ಉಪಯೋಗ ಮತ್ತು ಸ್ವಾವಲಂಬನೆ ಗೋಸ್ಕರ ಹೋರಾಡುವವರು. ಇವರು ಖನಿಜ ನಿಧಿಗಳಿಲ್ಲದ ರಾಜ್ಯಗಳಿಗೆ ಖನಿಜಗಳ ರಫ್ತನ್ನು ವಿರೋಧಿಸುವವರು. ಮೈಸೂರು ಮಿನಿರಲ್ಸ್ ಲಿಮಿಟೆಡ್‌ನ ಚೇರ್‌ಮನ್ ಮತ್ತು ಮೇನೇಜಿಂಗ್ ಡೈರೆಕ್ಟರ್ ಆಗಿ ಲೋಹ ಮೇಂಗನೀಸ್, ಕ್ರೊಮೈಟ್. ಕೋಲಿನ್, ಜೋಕ್ಸ್ ೖಟ್ ಮತ್ತು ಸೋಪ್‌ಸ್ಟೋನ್‌ನ ಗಣಿಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ತೆರೆದ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ.

ಚಿನ್ನ-ಭಾರತದ ಪರಿಸ್ಥಿತಿ

ಜಿಪಿಆರ್ ಅವರು ತಮ್ಮ ಮಾಜಿ ಸಹೋದ್ಯೋಗಿಗಳಾದ ಶ್ರೀ ಎಸ್.ಸಿ. ಕರ್ಟಿಸ್ ಮತ್ತು ಹಟ್ಟಿ ಚಿನ್ನದ ಗಣಿಯ ಶ್ರೀ ಜಿ.ಕೆ. ನಾಯ್ಡು ಅವರ ಜೊತೆಗೂಡಿ ಚಿನ್ನದ ಬಗ್ಗೆ ಉಪಯುಕ್ತ ಮಾಹಿತಿಗಳನ್ನು ಪ್ರಕಟಿಸಿದ್ದರು. ಇದರಲ್ಲಿ ಚಿನ್ನದ ಗಣಿಗಳನ್ನು ಸದುಪಯೋಗಪಡಿಸಿಕೊಳ್ಳುವ ತ್ವರಿತ ಅವಶ್ಯಕತೆಯನ್ನು ಒತ್ತಿಹೇಳಲಾಗಿದೆ. ಚಿನ್ನದ ಗಣಿಯ ಉದ್ಯಮದ ಬೆಳವಣಿಗೆಗೆ ಇರುವ ಸಂಪದ್ಭರಿತ ಸಾಮರ್ಥ್ಯದ ಬಗ್ಗೆ ಸ್ಪಷ್ಟ ಒಳನೋಟವನ್ನು ಇವರು ತಮ್ಮ ಇತ್ತೀಚಿನ ಹಲವಾರು ಪ್ರಕಟಣೆಗಳಲ್ಲಿ ನೀಡಿದ್ದಾರೆ. ಈ ಪುಸ್ತಕಗಳು ಮೇಲಿನ ವಿಷಯದ ಕುರಿತಾದ ಅಧಿಕೃತ ಪರಾಮರ್ಶನ ಗ್ರಂಥಗಳಾಗಿವೆ.

Field work and Geological Mapping

ಜಿಪಿಆರ್Field worksನ ಪ್ರಾಮುಖ್ಯತೆಯನ್ನು ಶೈಕ್ಷಣಿಕ ಕಾರ್ಯಕ್ರಮಗಳಿಂದ ಹಿಡಿದು ವೃತ್ತಿಪರ ಭೂ-ವೈಜ್ಞಾನಿಕ ಕಾರ್ಯಗಳವರೆಗೆ ಒತ್ತಿಹೇಳುತ್ತಿದ್ದರು. ಶ್ರೀ ಆರ್.ಪಿ. ಶಾರ್ಪ್ ಅವರು ಹೇಳುವಂತೆ "Field works ಭೂವಿಜ್ಞಾನ ಸಂಶೋಧನೆಗೆ ವಸ್ತುಸ್ಥಿತಿಯನ್ನು ಪರಿಚಯಿಸುತ್ತದೆ. ಪ್ರಕೃತಿಯು ಒಬ್ಬ ಕಠೋರ ವಿಮರ್ಶಕನಾಗಿ ಲಾಲಿತ್ಯದಿಂದ ಕೂಡಿದ ತತ್ತ್ವದ ಮಾದರಿಗಳನ್ನು ಕೆಲವು ಕಠಿಣ ಹಾಗೂ ತಣ್ಣನೆಯ ವಾಸ್ತವಾಂಶಗಳಿಂದ ಹಾಳುಗೆಡುವುತ್ತದೆ." ವಿಶ್ವವಿದ್ಯಾನಿಲಯಗಳ ಪ್ರಯೋಗಾಲಯಾಭಿಮುಖಿಯಾದ ಪ್ರಾಮುಖ್ಯದ ಹೊರತಾಗಿಯೂ, ಆಧುನಿಕ ಪ್ರಯೋಗಾಧಾರ ಶಿಲಾಶಾಸ್ತ್ರಜ್ಞ ಜನಕರಾದ ಡಾ॥ ಎನ್.ಎಲ್. ಬೋವೆನ್ ಅವರ ಮೂಲತತ್ತ್ವವನ್ನು ಆಧಾರವಾಗಿರಿಸಿಕೊಂಡು ಮತ್ತೊಬ್ಬ ಪ್ರಯೋಗಾಧಾರ ಶಿಲಾಶಸ್ತ್ರಜ್ಞರಾದ ಡಾ॥ ಹೆಚ್.ಎಸ್. ಯೋಡರ್ ಜೂ. ಅವರು ಆಡಿರುವ ಮಾತುಗಳು ಬಹುಮುಖ್ಯ ಎನಿಸುತ್ತದೆ: "...ಕಾರ್ಯಕ್ಷೇತ್ರದಲ್ಲಿ ಕಾಣುವ ಸಂಬಂಧಗಳ ಮರುಪರೀಕ್ಷೆ ಮತ್ತು ಪ್ರಯೋಗಾಧಾರದ ಮೇಲೆ ನಿರ್ಮಿಸಿದ ತತ್ತ್ವಗಳನ್ನು ಕಾರ್ಯಕ್ಷೇತ್ರದಲ್ಲಿ ಪರೀಕ್ಷೆ-ಈ ಪ್ರಕ್ರಿಯೆಯು ಕಾರ್ಯಕ್ಷೇತ್ರದ ಸಮೀಕ್ಷೆಯನ್ನು ಹೋಲುವ ಸಮಾಧಾನಕರ ಅಭಿಪ್ರಾಯ ಮೂಡುವವರೆಗೆ ಮರುಕಳಿಸುತ್ತಿರುತ್ತದೆ."

ಜಿಪಿಆರ್ ದೇಶದ ಪ್ರಮುಖ ಭೂಪ್ರದೇಶವನ್ನು ಒಳಗೊಂಡಿರುವ ಕಾರ್ಯಕ್ಷೇತ್ರ ಮಾರ್ಗದರ್ಶಿ ಪುಸ್ತಕಗಳನ್ನು (Field Guide Books) ಪ್ರಕಟಿಸಿದ್ದಲ್ಲದೆ, ತಾವೇ ಸ್ವತಃ ಇಂಥ ಹಲವಾರು ಕಾರ್ಯಕ್ಷೇತ್ರ ಪ್ರವಾಸಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಇತ್ತೀಚೆಗೆ ಇವರು ಐಐಟಿ ಬಾಂಬೆಯ ವಿದ್ಯಾರ್ಥಿಗಳು ಭಾಗವಹಿಸಿದ್ದ ಚಿತ್ರದುರ್ಗ ಕಾರ್ಯಕ್ಷೇತ್ರ ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. (ಡಿಸೆಂಬರ್ ೧೯೯೩). ಅರವತ್ತು ವರ್ಷಗಳಿಗೂ ಹಿಂದೆ ತಮ್ಮ ವೃತ್ತಿಜೀವನ ಆರಂಭಿಸಿದ Dharwar Cratonನಲ್ಲಿ ಸ್ವರೂಪವರ್ಣಾ

೬

ಕಥೆಗಾರ ರಾಘವೇಂದ್ರ ಖಾಸನೀಸ

ಬಿ. ಶ್ರೀನಿವಾಸರಾಜು

ಆತ್ಮೀಯ ಮಿತ್ರರಾದ ರಾಘವೇಂದ್ರ ಖಾಸನೀಸರು ತಮ್ಮ ಬರವಣಿಗೆಗೆ ತಾವೇ ಹೆದರಿದ್ದರೊ? ಪುಸ್ತಕ ಬರುವ ಮುನ್ನವೆ ಗಳಿಸಿದ ಒಂದೇ ಕಥೆಯ ಪ್ರಖ್ಯಾತಿಯಿಂದ ತತ್ತರಿಸಿದ್ದರೊ? ಯಾವ ಚಳುವಳಿ, ಗುಂಪು, ಪ್ರಶಸ್ತಿಯಿಂದಲೂ ಕಾಣಿಸಿಕೊಳ್ಳಲಾಗದೆ ವಿಲಿವಿಲಿ ಒದ್ದಾಡಿದರೊ? ಅಂತೂ ಕನ್ನಡ ಸಾಂಸ್ಕೃತಿಕ ಲೋಕ ಕಂಡ ಮೂವರು ವಿಚಿತ್ರ ಪ್ರತಿಭಾವಂತರಲ್ಲಿ ಒಬ್ಬರಾಗಿ ಹೋದರು. ಇನ್ನಿಬ್ಬರು : ಸಂಸ ಮತ್ತು ಲಂಕೇಶ್. ೧೯೭೮ರಿಂದಲೇ ನಿಕಟವರ್ತಿಗಳಾಗಿ, ನನ್ನನ್ನು ಬೆಳೆಸಿದ ಖಾಸನೀಸರು, 'ಪುಸ್ತಕಮನೆ' ಪ್ರಾರಂಭಿಸಿದಾಗ ಮೊಟ್ಟಮೊದಲು ಬಂದು ಹರಸಿದರು. 'ಮನ್ವಂತರ' ೭ನೇ ಸಂಚಿಕೆಯನ್ನು ನೆನಪಿಗೆ ಕೊಡುಗೆಯಾಗಿ ನೀಡಿದ್ದರು. ಮಕ್ಕಳ ಕತೆಗಳನ್ನು ಬರೆದಾಗ ಮೆಚ್ಚಿ, ಲೇಖನ ಬರೆದುಕೊಟ್ಟದ್ದು, ಚಂದ್ರಶೇಖರ ಪಾಟೀಲರ ಕೃಪೆಯಿಂದ 'ಸಂಕ್ರಮಣ'ದಲ್ಲಿ ಪ್ರಕಟವಾಯಿತು. ಈ ಸಂದರ್ಭದಲ್ಲಿ ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ (೧೮೯೬–೧೯೧೮) ಅವರು ಬರೆದ 'ನಾಡ ನೆಲೆಗಾರ' ಪುಸ್ತಕದ ಬಗ್ಗೆ ನನ್ನ ಗಮನ ಸೆಳೆದರು. ಆಗಾಗ್ಗೆ ಮರಾಠಿ ಸಾಹಿತ್ಯ, ಸಾಹಿತಿಗಳ ಬಗ್ಗೆ ಸಾಕಷ್ಟು ಮಾಹಿತಿ ಕೊಡುತ್ತಿದ್ದರು. ೧೯೮೩ರಲ್ಲಿ ಆಂಧ್ರಪ್ರವಾಸ ಕೈಗೊಂಡಾಗ ತುಂಬಾ ನೆರವಾದರು. ಕೀರ್ತಿನಾಥ ಕುರ್ತಕೋಟಿ ಅವರ ಬಗ್ಗೆ ತುಂಬಾ ಗೌರವವಿಟ್ಟುಕೊಂಡಿದ್ದ ಖಾಸನೀಸರು, ಏಕೊ ಏನೊ ಜಿ.ಎಸ್. ಶಿವರುದ್ರಪ್ಪ ಅವರ ಬಗ್ಗೆ ಭಯಂಕರ ಕಿಡಿಕಾರುತ್ತಿದ್ದರು. ಗೆಳೆಯ ಶ್ರೀನಿವಾಸರಾಜು ಅವರ ಪ್ರಯತ್ನದಿಂದ ಅವರ ಕಥಾಸಂಕಲನ ಹೊರಬರುವಂತಾಯಿತು. ಈಗ ಅವರ ಕಣ್ಣಿಂದಲೇ ಖಾಸನೀರನ್ನು ನಾವು ಇಲ್ಲಿ ಕಾಣೋಣ.

ಸಂಪಾದಕ

ನಮ್ಮ ಕಥೆಗಾರ, ರಾಘವೇಂದ್ರ ಖಾಸನೀಸರು ೨೦೦೭ರ ಮಾರ್ಚ್ ೧೯ರಂದು, ತಮ್ಮ ೭೪ನೆಯ ವಯಸ್ಸಿನಲ್ಲಿ ನಮ್ಮನ್ನು ಅಗಲಿದರು. ಹುಟ್ಟಿದ ಮೇಲೆ ಸಾವು ಅನಿವಾರ್ಯ, ನಿಜ. ವ್ಯಕ್ತಮಧ್ಯದ ಬದುಕು ಅಷ್ಟೇ ಮುಖ್ಯ. ಆದರೆ ಖಾಸನೀಸರಿಗೆ ಬದುಕೇ ಭಾರವಾಗಿತ್ತು. ಅವರು ಈ ಲೋಕವನ್ನು ಬಿಡುವ ಸಂದರ್ಭದಲ್ಲಿ ದೈಹಿಕವಾಗಿ, ಮಾನಸಿಕವಾಗಿ, ಆರ್ಥಿಕವಾಗಿ ಜರ್ಜರಿತರಾಗಿದ್ದರು. ಹದಿನಾರು ವರ್ಷಗಳಿಂದ ಪಾರ್ಕಿಸನ್ ಖಾಯಿಲೆ ನಿರಂತರ ಯಾತನೆಗೆ ಗುರಿಮಾಡಿತ್ತು. ಇಷ್ಟೆಲ್ಲ ಸಂಕಟಗಳ ಮಧ್ಯೆಯೂ ಖಾಸನೀಸರು ಬರಹಗಾರನ ನೈತಿಕತೆಯನ್ನು ಮತ್ತು ಅಸ್ಮಿತೆಯನ್ನು ಎತ್ತಿಹಿಡಿದವರು. ಅವರ ಮನೆಯವರು ಕೂಡ ಇದನ್ನು ಅನುಸರಿಸಿದರು. ಇವರು ವಾಸಿಯಾಗದ ಖಾಯಿಲೆಗೆ ಸರ್ಕಾರಿ ನೆರವನ್ನು ಬಯಸಿದರೆ ವಿನಹ, ಸಾರ್ವಜನಿಕರಿಂದ ಚಂದಾ ಸ್ವೀಕರಿಸಲು ಸಿದ್ಧರಿರಲಿಲ್ಲ. ವ್ಯಕ್ತಿತ್ವವನ್ನು ಒತ್ತೆಯಿಟ್ಟು ಕಂಡವರ ಮುಂದೆ ಕೈಚಾಚಲಿಲ್ಲ. ಹೀಗೆ ಬರಹಗಾರನ ಘನತೆಯನ್ನು, ಆತ್ಮಗೌರವವನ್ನು ಖಾಸನೀಸರು ಎತ್ತಿಹಿಡಿದರು. ಬರಹಗಾರನಾದವನಿಗೆ, ಬರಹಗಾರನಾಗುವವನಿಗೆ ಇದು ಮುಖ್ಯ.

ಒಂದು ವ್ಯಕ್ತಿತ್ವ ಅನಾವರಣಗೊಳ್ಳುವುದು ಅವನು ದಿನನಿತ್ಯದ ಬದುಕಿನಲ್ಲಿ ಹೇಗೆ ಸ್ಪಂದಿಸುತ್ತಾನೆ. ಕಠಿಣ ಸಂದರ್ಭಗಳಲ್ಲಿ ತನ್ನ ನಿಲುವನ್ನು ಹೇಗೆ ಕಾಪಾಡಿಕೊಳ್ಳುತ್ತಾನೆ ಎನ್ನುವುದರಿಂದ. ಆದರೆ ಖಾಸನೀಸರಿಗೆ ಬದುಕೇ ಒಂದು ಅಗ್ನಿಪರೀಕ್ಷೆಯಾಯಿತು. ಖಾಸನೀಸರು ಪತ್ನಿ ಶಾಂತಾಬಾಯಿ, ಹೆಣ್ಣುಮಕ್ಕಳಾದ ಅಂಜಲಿ, ಅಪರ್ಣಾ, ಅರ್ಚನಾರನ್ನು ಅಗಲಿದ್ದಾರೆ. ಇದ್ದ ಒಬ್ಬನೇ ಮಗ ರಾಜೀವ.

ದಶಕದ ಹಿಂದೆ ಮನೆಯಿಂದ ಹೋದವನು ಇಂದಿಗೂ ಹಿಂತಿರುಗಿಲ್ಲ. ವ್ಯಕ್ತಿಯ ಸ್ವಾತಂತ್ರ್ಯ ಜೀವನದಲ್ಲಿ ದೊಡ್ಡದು ಎಂದು ಹೇಳುತ್ತಿದ್ದರು, ಖಾಸನೀಸರು. ಅದೇ ಸ್ವಾತಂತ್ರ್ಯವನ್ನು ಮಕ್ಕಳಿಗೂ ಕೊಟ್ಟರು. ಮೂರು ಜನ ಹೆಣ್ಣುಮಕ್ಕಳು ಬದುಕನ್ನು ಕಟ್ಟಿಕೊಂಡರು. ಇದ್ದ ಒಬ್ಬ ಮಗ ಬದುಕನ್ನು ಚೆಲ್ಲಿಬಿಟ್ಟನು. ಈ ಕೊರಗಿನಿಂದ ಅವರು ಮುಕ್ತರಾಗಲಿಲ್ಲ.

ರಾಘವೇಂದ್ರ ಖಾಸನೀಸರು ೧೯೩೩ರಲ್ಲಿ, ವಿಜಾಪುರದ ಇಂಡಿಯಲ್ಲಿ ಜನಿಸಿದರು. ತಂದೆ ನಾರಾಯಣ ಖಾಸನೀಸ, ತಾಯಿ ಕಮಲಾಬಾಯಿ. ಇವರ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಶಿಕ್ಷಣ ಇಂಡಿಯಲ್ಲಿಯೇ ನಡೆಯಿತು. ಧಾರವಾಡದಲ್ಲಿ ಬಿ.ಎ. ಪದವಿಯನ್ನು ಮುಗಿಸಿ, ಮುಂಬಾಯಿನ ಎಲ್‌ಫಿನ್‌ಸ್ಟನ್ ಕಾಲೇಜಿನಲ್ಲಿ ಇಂಗ್ಲಿಷ್‌ನಲ್ಲಿ ಎಂ.ಎ. ಪದವಿಯನ್ನು ಗಳಿಸಿದರು. ಅನಂತರ ಮುಂಬಾಯಿ ವಿಶ್ವವಿದ್ಯಾಲಯದ ಗ್ರಂಥಾಲಯ ವಿಜ್ಞಾನದ ಡಿಪ್ಲೊಮೊವನ್ನು ಪಡೆದರು.

ಖಾಸನೀಸರ ಶಾಲಾದಿನಗಳಲ್ಲೇ ಅವರ ಸೃಜನಶೀಲ ಪ್ರತಿಭೆ ಬೆಳಕಿಗೆ ಬಂತು. ಅಂದಿನ 'ವಿಶ್ವಕರ್ನಾಟಕ', 'ಕರ್ನಾಟಕ ವೈಭವ', 'ಕರ್ನಾಟಕ ಬಂಧು' ಮುಂತಾದ ಪತ್ರಿಕೆಗಳಲ್ಲಿ ಕಿರುಕಥೆಗಳನ್ನು ಪ್ರಕಟಿಸಿದ್ದರು.

ಪುಣೆಯ ಎಸ್.ಪಿ. ಕಾಲೇಜಿನಲ್ಲಿ ಗ್ರಂಥಪಾಲಕರಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. ಕೆಲಕಾಲ ವಲ್ಲಭ ವಿದ್ಯಾನಗರದ ಬಿರ್ಲಾ ಇಂಜನಿಯರಿಂಗ್ ಕಾಲೇಜಿನಲ್ಲೂ ಕಾರ್ಯ ನಿರ್ವಹಿಸಿದರು. ೧೯೭೦ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಹಾಯಕ ಗ್ರಂಥಪಾಲಕರಾಗಿ ನೇಮಕಗೊಂಡರು. ೧೯೯೧ರಲ್ಲಿ ವಿಶ್ರಾಂತರಾದರು. ಖಾಸನೀಸರು ಪುಣೆಯಲ್ಲಿ ಇದ್ದಾಗಲೂ ಕನ್ನಡದ ಸಂಪರ್ಕವನ್ನು ಕಡಿದುಕೊಳ್ಳಲಿಲ್ಲ. ಅಲ್ಲಿ ಅವರ ಬದುಕು ಒಂದು ಆಕಾರವನ್ನು ಪಡೆಯುತ್ತಿದ್ದಂತೆ, ಅವರ ಬರವಣಿಗೆಯೂ ಹೊಸ ಆಕಾರವನ್ನು ಪಡೆಯಿತು. ಆಗ ನವ್ಯದ ಗಾಳಿ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಬಲವಾಗಿ ಬೀಸುತ್ತಿತ್ತು. ಆಗ ಖಾಸನೀಸರ ಪ್ರತಿಭೆ ಅನನ್ಯ ಕಥೆಗಳಾಗಿ ಅರಳಿದುವು.

ಅದೇ ಸಂದರ್ಭದಲ್ಲಿ ಹೊಸ ಅಲೆಯ ಕನ್ನಡ ಚಲನಚಿತ್ರಗಳು ಹೆಸರು ಮಾಡಿದ್ದುವು. ಖಾಸನೀಸರಿಗೆ ಈ ಚಲನಚಿತ್ರ ಜಗತ್ತಿನ ಬಗ್ಗೆಯೂ ಕುತೂಹಲ ಮತ್ತು ಆಸಕ್ತಿಗಳಿದ್ದುವು. ಕನ್ನಡದ ಕಣಜದಲ್ಲಿರುವ ಅಪೂರ್ವ ಕಥಾಸಾಹಿತ್ಯವನ್ನು ಚಲನಚಿತ್ರದ ದೃಶ್ಯಮಾಧ್ಯಮವಾಗಿ ಪರಿವರ್ತಿಸಿದರೆ ಒಳ್ಳೆಯದೆಂಬ ಅಭಿಪ್ರಾಯ ಅವರದಾಗಿತ್ತು. ಸೆಂಟ್ರಲ್ ಕಾಲೇಜಿನ ಗ್ರಂಥಾಲಯದ ಮುಂದಿದ್ದ ಪಿ.ಪಿ. ಕಟ್ಟೆಯಲ್ಲಿ ಈ ರೀತಿಯ ಚರ್ಚೆಗಳು ನಡೆಯುತ್ತಲೇ ಇದ್ದುವು. ಆದರೆ ಅವರ ಒಂದು ಕಥೆಯೂ ಚಲನಚಿತ್ರವಾಗಲಿಲ್ಲ. ಈ ಕೊರಗು ಅವರಲ್ಲಿ ಕೊನೆಯವರೆಗೂ ಉಳಿದುಕೊಂಡಿತ್ತು. ೧೯೭೧ರಿಂದಲೂ ಅವರ ಮೆಚ್ಚಿನ, ಮಾಸ್ಟರ್‌ಪೀಸ್ 'ತಬ್ಬಲಿಗಳು' ಕಥೆಯ ಹಕ್ಕುಗಳನ್ನು ಪಡೆಯುವುದರಲ್ಲಿ ಆಸಕ್ತಿ ತೋರಿದರೆ ವಿನಹ ಅದನ್ನು ದೃಶ್ಯಮಾಧ್ಯಮವಾಗಿಸಲಿಲ್ಲ. "ನನ್ನ ಕಥೆಯನ್ನು ಬೆಳ್ಳಿತೆರೆಯ ಮೇಲೆ ನೋಡುವ ಅದೃಷ್ಟ ನನಗಿಲ್ಲ" ಎನ್ನುತ್ತಿದ್ದರು. ಚಲನಚಿತ್ರದ ಮಾಯಾಲೋಕವನ್ನು ನಂಬಿ ಈ ಮುಗ್ಧ ಮೋಸಹೋದರು.

ಖಾಸನೀಸರು 'ಮೋನಾಲೀಸಾ' ಕಥೆಯನ್ನು ರಚಿಸುವಾಗ ಅವರು ಪಟ್ಟಪಾಡನ್ನು ಜ್ಞಾಪಿಸಿಕೊಂಡರೆ ಅಚ್ಚರಿಯಾಗುತ್ತದೆ. 'ಮೋನಾಲೀಸಾ' ತೈಲಚಿತ್ರದ ಕಳುವಿನ ಹಿನ್ನೆಲೆಯಲ್ಲಿ ಈ ಕಥೆ ಬಿಚ್ಚಿಕೊಳ್ಳುತ್ತದೆ. ಅದಕ್ಕೆ ಬೇಕಾದ ಪ್ಯಾರಿಸ್ ವಿವರ, ಸೀನ್ ನದಿಯ ವಿವರ, ನಾಟ್ರರ್‌ಡಾಮ್ ಕ್ಯಾಥಡ್ರಲ್ ಸ್ಥಳ, ಲೂವ್ರ ಸ್ಥಳ ಮುಂತಾದುವುಗಳನ್ನು ಹುಡುಕಾಡುತ್ತಿದ್ದ ಬಗ್ಗೆ ವಿಚಿತ್ರವಾಗಿತ್ತು. ಇದಕ್ಕಾಗಿ ಬೇಕಾದ ಪುಸ್ತಕಗಳನ್ನು, ಪ್ಯಾರಿಸ್ಸಿನ ನಕ್ಷೆಯನ್ನು ಹರಡಿಕೊಂಡು ಕಣ್ಣಲ್ಲಿ ಕಣ್ಣಿಟ್ಟು ಪಡೆಮುಕೊಳ್ಳುತ್ತಿದ್ದ ವಿವರವೇ ಒಂದು ಕಥೆಯಾಗುತ್ತದೆ. ಇದನ್ನು ಅವರು ಸೋಂಪಿಯಾಗಿ ಸ್ವೀಕರಿಸಿದ್ದರು.

ಹೀಗೆ ಪ್ರತಿಯೊಂದು ಕಥಾರಚನೆಯಲ್ಲೂ ಅದರೊಂದಿಗೆ ಒಂದಾಗಿ ಬಿಡುತ್ತಿದ್ದರು. ಅವರ ಆಳದನುಭವ, ಅಧ್ಯಯನ, ಅನನ್ಯ ಅಭಿವ್ಯಕ್ತಿ ಬದುಕಿನೊಂದಿಗೆ ಬೆರೆತುಕೊಂಡು ಅಪೂರ್ವ ಕಥೆಗಳಾಗಿ ಸೃಷ್ಟಿಯಾದುವು. ಅವರು ಸಾವಿರಾರು ಕಥೆಗಳನ್ನು ಬರೆಯಲಿಲ್ಲ. ಬರೆದದ್ದು ಬೆರಳೆಣಿಕೆಯಷ್ಟು ಕಥೆಗಳನ್ನು.

ಮಾತ್ರ ಅವರು ನಷ್ಟದ ಹಿನ್ನೆಲೆಯಿಂದ ಬಂದಿದ್ದರಿಂದ ಕಥೆಗಳ ಗುಣಮಟ್ಟ ಜೀವನ್ಮರಣದ ಪ್ರಶ್ನೆಯಾಗಿತ್ತು. ಆದ್ದರಿಂದ ಬರೆದಷ್ಟು ಬಂಗಾರವಾಯಿತು. ಸರ್ವಶ್ರೇಷ್ಠ ಕಥೆಗಳ ಸಾಲಿನಲ್ಲಿ ಸ್ಥಾನ ಪಡೆಯಿತು.

೧೯೮೪ರಲ್ಲಿ ಮೊದಲಭಾರಿಗೆ 'ಖಾಸನೀಸರ ಕಥೆಗಳ'ನ್ನು ಅಂಕಣ ಪ್ರಕಾಶನ ಒಂದು ಸಂಕಲನವಾಗಿ ಪ್ರಕಟಿಸಿದ್ದೇ ಒಂದು ಕಥೆ. ಅವರು ಪ್ರಕಟಣೆಗೆ ಎಂದೂ ಅವಸರ ಪಟ್ಟವರಲ್ಲ. ಮೊದಲು ನಮ್ಮ ಸಲಹೆಯನ್ನು ಒಪ್ಪಲಿಲ್ಲ. ಪ್ರಕಟಣೆಯ ಬಗ್ಗೆ ಸದಾ ಉದಾಸೀನ, ಪಿ.ಪಿ. ಗೆಳೆಯರೆಲ್ಲಾ ಸೇರಿ ಅವರನ್ನು ಒತ್ತಾಯದಿಂದ ಒಪ್ಪಿಸಿ ಕಥಾಸಂಕಲನವನ್ನು ಪ್ರಕಟಿಸಿದೆವು. ಖಾಸನೀಸರು ಬಹು ಸಂಕೋಚದ, ಮುಜುಗರದ ವ್ಯಕ್ತಿ. ಅವರ ಈ ಕಥಾಸಂಕಲನಕ್ಕೆ 'ಅತ್ಯುತ್ತಮ ಸೃಜನಶೀಲ ಕೃತಿ' ಎಂಬ ಪ್ರಶಸ್ತಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ನೀಡಿತು. ಇದರಿಂದ ಅವರಿಗೆ ಸಂತೋಷವೂ ಆಯಿತು. ಈ ಸಂಕಲನ ಮರುಮುದ್ರಣವನ್ನು ಕನ್ನಡ ಪುಸ್ತಕ ಪ್ರಾಧಿಕಾರ ನೆರವೇರಿಸಿತು. ಈಗ ಮತ್ತೆ ೨೦೦೬ರಲ್ಲಿ ಅವರ ಮಾತುಗಳಿಲ್ಲದೆ ಪ್ರಕಟಗೊಂಡಿದೆ.

ರಾಘವೇಂದ್ರ ಖಾಸನೀಸರ ಕಥೆಗಳಲ್ಲಿ ಬರುವ ಬಹುಪಾತ್ರಗಳು ಚದುರಿದ ಪ್ರತಿಮೆಗಳು. ಆ ಪಾತ್ರಗಳ ಅಂತರಂಗದ ತೊಳಲಾಟ ಓದುಗರನ್ನು ತಟ್ಟಿವೆ, ಹಿಡಿದು ಅಲುಗಾಡಿಸಿವೆ. ಇವರ ಸ್ವಂತ ಬದುಕಿನ ಏರಿಳಿತಗಳ ಮಿಡಿತವನ್ನು ಅವರ ಕಥೆಗಳಲ್ಲೂ ಕಾಣಬಹುದು.

'ನನ್ನ ಸೃಜನಶೀಲತೆಗೂ ಮತ್ತು ನನ್ನ ಬದುಕಿಗೂ ಲಕ್ಷ್ಮಣರೇಖೆಯನ್ನು ಎಳೆಯಲು ಸಾಧ್ಯವಿಲ್ಲ. ನನ್ನ ವೈಯಕ್ತಿಕ ಬದುಕನ್ನು ಅರ್ಥೈಸಲು ನಾನು ಮಾಡುವ ಪ್ರಯತ್ನವೇ ನನ್ನ ಬರವಣಿಗೆ' ಎನ್ನುತ್ತಿದ್ದರು.

ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಎದುರಾದಾಗೆಲ್ಲ ಬಾಯಿತುಂಬ ನಗುತ್ತಿದ್ದರು. ಯೋಗಕ್ಷೇಮ ವಿಚಾರಿಸುತ್ತಿದ್ದರು. ಒಮ್ಮೆ ಎದುರಿಗೆ ಕುಳಿತ ವ್ಯಕ್ತಿಯ ಮೇಲೆ ನಂಬಿಕೆ ಬಂದರೆ ಆತ್ಮೀಯವಾಗಿ ಹರಟೆ ಹೊಡೆಯುತ್ತಿದ್ದರು. ಅವರೊಬ್ಬ ಭಾವನಾಜೀವಿ. ಅವರು ೧೯೪೬ರಿಂದಲೂ ಕಥೆ ಬರೆಯುತ್ತಿದ್ದರೂ, ಅದನ್ನೆಲ್ಲ 'stories to be forgotton' ಎನ್ನುತ್ತಿದ್ದರು. ಲೇಖಕನಾದವನು ಜೀವನಕ್ಕೆ ಮಾತ್ರ ಬದ್ಧನಾಗಿರಬೇಕು. ಅದರ ಬಗ್ಗೆ ಪ್ರೀತಿ ಹಾಗೂ ಚಿಂತನೆ, ಇವುಗಳ ಹೊರತಾಗಿ ಯಾವುದೇ ತರಹದ commitment ಆಗಲೀ, ಯಾವುದೇ ತತ್ತ್ವಗಳ, ಆದರ್ಶಗಳ ಹಂಗಾಗಲಿ ಇರಕೂಡದು. ನಿರ್ಲಿಪ್ತತೆಯಿಂದ, ತೆರೆದ ಮನಸ್ಸಿನಿಂದ ಹೇಳಬೇಕಾದ ಕಥೆ ಮುಖ್ಯ; ಹೇಗೆ ಹೇಳಬೇಕು ಎನ್ನುವುದು ಮುಖ್ಯ; ಜೀವನಮೌಲ್ಯಗಳ ಹುಡುಕಾಟ ಮುಖ್ಯ ಎಂಬ ನಿಲುವನ್ನು ಹೊಂದಿದ್ದರು. ಅವರು ಜನಪ್ರಿಯ ಸಾಹಿತ್ಯ ಹಾಗೂ ಗಂಭೀರ ಸಾಹಿತ್ಯದ ವಿಂಗಡಣೆಯನ್ನು ಒಪ್ಪುತ್ತಿರಲಿಲ್ಲ. ಅವರು ೧೯೬೪-೬೫ರಲ್ಲಿ ವಲ್ಲಭ ವಿದ್ಯಾನಗರದಲ್ಲಿ ಕಳೆದ ದಿನಗಳನ್ನು ಆಗಾಗ ಮೆಲಕು ಹಾಕುತ್ತಿದ್ದರು. ಅವರು ತಮ್ಮ ಕಥೆಗಳ ರಚನೆಯ ಸಂದರ್ಭದಲ್ಲಿ ಕೀರ್ತಿನಾಥ ಕುರ್ತಕೋಟಿಯವರೊಂದಿಗೆ ನಡೆಸಿದ ಚರ್ಚೆ, ಮಾತುಕತೆ ನೆರವಾಯಿತು ಎಂದಿದ್ದಾರೆ.

"ಕೀರ್ತಿಯವರು ನನಗೆ, ಏನು ಬರೆಯಬೇಕು ಎನ್ನುವುದಕ್ಕಿಂತ ಏನು ಬರೆಯಬಾರದು ಎನ್ನುವುದನ್ನು ಸೋದಾಹರಣವಾಗಿ ಕಲಿಸಿಕೊಟ್ಟರು" ಎಂಬುದನ್ನು ಒಂದು ಕಡೆ ದಾಖಲಿಸಿದ್ದಾರೆ.

ಡಾ॥ ಜಿ.ಎಸ್. ಆಮೂರರು "ಖಾಸನೀಸರು ಕೆಲವೇ ಕತೆಗಳನ್ನು ಬರೆದರೂ ಸಣ್ಣಕತೆಯ ಸಾಧ್ಯತೆಗಳನ್ನು ಸೂರೆಗೊಂಡಿದ್ದಾರೆ. ಅಲ್ಲದೆ ಅವುಗಳನ್ನು ಆಶ್ಚರ್ಯಕರವಾಗಿ ವಿಸ್ತರಿಸಿದ್ದಾರೆ. ಖಾಸನೀಸರ ಕತೆಗಳ ಒಂದು ಮುಖ್ಯ ಕಾರಣವೆಂದರೆ, ಅವು ಘಟನೆಗಳಿಗೆ ಕೊಡುವ ಮಹತ್ವ. ಅವರ ಎಲ್ಲ ಕತೆಗಳಿಗೂ ಈ ಮಾತು ಅನ್ವಯಿಸುತ್ತದೆ... (ಇವರು) ಖಂಡಿತವಾಗಿಯೂ ನಮ್ಮ ಮಹತ್ವದ ಕತೆಗಾರರ ಸಾಲಿಗೆ ಸೇರುತ್ತಾರೆ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇವರ ಕಥೆಗಳನ್ನು ಕುರಿತು ದೇವನೂರು ಮಹಾದೇವರು "ಕನ್ನಡದಲ್ಲಿ ಕೆಲವೇ ಕತೆಗಳನ್ನು ಬರೆದ ಅತ್ಯುತ್ತಮ ಕತೆಗಾರರಲ್ಲಿ ರಾಘವೇಂದ್ರ ಖಾಸನೀಸರು ಒಬ್ಬರು. ಖಾಸನೀಸರ ಕತೆಗಳಲ್ಲಿ ಲೋಕದಲ್ಲಿನ ಮನುಷ್ಯನ ಬದುಕಿನ ವಿಷಾದದ ಆಲಾಪ ನಿರಂತರವಾಗಿ ಹಿನ್ನೆಲೆಯಾಗಿದೆ" ಎಂದಿದ್ದಾರೆ.

ಈಗ ಖಾಸನೀಸರು ನಮ್ಮೊಂದಿಗಿಲ್ಲ. ಅವರ ತಬ್ಬಲಿಗಳು, ಮೋನಾಲೀಸಾ, ಅಲ್ಲಾಉದ್ದೀನನ ಅದ್ಭುತ ದೀಪ-ಮುಂತಾದ ಕಥೆಗಳು ನಮ್ಮೊಂದಿಗಿವೆ. ಅವರನ್ನು ಅವರ ಕುಟುಂಬವನ್ನು ಪಾರ್ಕಿನ್ಸನ್ ಖಾಯಿಲೆ ಹಿಂಡಿ ಹಿಪ್ಪೆ ಮಾಡಿತ್ತು.

ಒಂದೆರಡು ವರ್ಷಗಳ ಹಿಂದೆ ನಾನು, ಗಿರೀಶ್ ಕಾರ್ನಾಡ್, ವಿಜಯಾ, ಪ್ರಹ್ಲಾದ್, ರವಿಕುಮಾರ್ ಅವರುಗಳೊಂದಿಗೆ ಖಾಸನೀಸರನ್ನು ನೋಡಲು ಹೋಗಿದ್ದೆವು. ಅವರು ಎರಡು ದಿನದ ಹಿಂದೆ ಮನೆ ಬದಲಾಯಿಸಿದ್ದರು. ಸಾಮಾನುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಬಾಣಂತಿಯಾಗಿದ್ದ ಮಗಳು ಒಂದು ಕಡೆ, ಖಾಸನೀಸರು ಇನ್ನೊಂದು ಕಡೆ. ಸತ್ವಹೀನವಾಗಿದ್ದ [illegible] ಮೈ ಸ್ವಾಧೀನದಲ್ಲಿರಲಿಲ್ಲ. ದೇಹ ನಡುಗುತ್ತಿತ್ತು. ಬೆಳೆದ ದಾಡಿ ಅಸಹಾಯಕತೆಯನ್ನು ಸಾರುತ್ತಿತ್ತು. ಔಷಧಿಗಳ ಪರಿಣಾಮವಾಗಿ ಕಿವಿಯು ಸರಿಯಾಗಿ ಕೇಳುತ್ತಿರಲಿಲ್ಲ. ನೆನಪುಗಳು ಕದಡಿ ಹೋಗಿದ್ದವು. ಮುದುಡಿಕೊಂಡ ಗುಬ್ಬಚ್ಚಿಯಾಗಿದ್ದರು. ನಾವೆಲ್ಲ ಅವರನ್ನು ಗೌರವಿಸಿ, ಹಿಂತಿರುಗುವಾಗ ನಮ್ಮ ಮನಸ್ಸುಗಳನ್ನು ಹೇಳಲಾಗದ ವಿಷಾದ ಆವರಿಸಿತ್ತು.

ಖಾಸನೀಸರು, ಕನ್ನಡ ಪುಸ್ತಕ ಪ್ರಾಧಿಕಾರದ ಹತ್ತಿರ ತಮ್ಮ ಕಥೆಗಳ ಹಕ್ಕುಗಳು ಸಿಕ್ಕಿಕೊಂಡಿವೆ ಎಂಬ ಭ್ರಮೆಯಿಂದ ಸಂಕಟಪಡುತ್ತಿದ್ದರು. ಆಗ ಗೆಳೆಯ ಎಸ್.ಜಿ. ಸಿದ್ಧರಾಮಯ್ಯ ಹಕ್ಕುಗಳನ್ನು ಬಿಟ್ಟುಕೊಟ್ಟ ಒಂದು ಪತ್ರವನ್ನು ಸಿದ್ಧಪಡಿಸಿ ಅವರ ಮನೆಗೇ ಹೋಗಿ ತಲುಪಿಸಿದಾಗ ಅವರಿಗೆ ಸಮಾಧಾನವಾಯಿತು. ಬೆಂಗಳೂರಿನ ಎಂ.ಎಸ್.ಸಿ. ಸಂಸ್ಥೆಯವರು ಧನಸಹಾಯವನ್ನು ಮಾಡಲು ಮುಂದಾದಾಗ ಅದನ್ನು ಸೌಮ್ಯವಾಗಿ ನಿರಾಕರಿಸಿದರು. ಅಂತಹ ಸಂಕಟದ ಪರಿಸ್ಥಿತಿಯಲ್ಲೂ ಬರಹಗಾರನ ನೈತಿಕತೆಯನ್ನು ಮತ್ತು ಘನತೆಯನ್ನು ಖಾಸನೀಸರು ಎತ್ತಿಹಿಡಿದರು. ಅವರ ಇಚ್ಛಾಶಕ್ತಿ ದೊಡ್ಡದು. ಅಡಿಗರ ಕವನ ಸಾಲು ನೆನಪಾಗುತ್ತಿವೆ:

'ಹುತ್ತಗಟ್ಟದೆ ಚಿತ್ತ ಮತ್ತೆ ಕೆತ್ತೀತೇನು
ಪುರುಷೋತ್ತಮನ ಆ ಅಂಥ ರೂಪ-ರೇಖೆ?'

ಕೃಪೆ: ಆಕಾಶವಾಣಿ

೨೧(ಲ) 'ಚಿರಂಜೀವಿ', ಹಳೇ ಈಜುಕೊಳದ ರಸ್ತೆ, ಕೋದಂಡರಾಮಪುರ, ಮಲ್ಲೇಶ್ವರ, ಬೆಂಗಳೂರು ೫೬೦ ೦೦೩

ಸಂವೇದನಾಶೀಲ ಓದುಗರ, ಪ್ರಜ್ಞಾವಂತ ಬರಹಗಾರರ ಗಮನಕ್ಕೆ

ಕನ್ನಡ ಬಲ್ಲ ನಾನಾ ಕ್ಷೇತ್ರದವರ ಪ್ರೀತಿ ವಿಶ್ವಾಸಗಳಿಗೆ ಪಾತ್ರವಾಗಿರುವ 'ಪ್ರಜಾಸಾಹಿತ್ಯ' ಇದೀಗ ೧೦ನೇ ಸಂಚಿಕೆ ನಿಮ್ಮ ಕೈಗಳಲ್ಲಿದೆ. ಮುಂದಿನ ಸಂಚಿಕೆಗಳಲ್ಲಿ ಸಂವೇದನಾಶೀಲ ಓದುಗರಾದ ಹಾಗೂ ಪ್ರಜ್ಞಾವಂತ ಬರಹಗಾರರಾದ ನಿಮ್ಮ ಪಾಲ್ಗೊಳ್ಳುವಿಕೆಯೂ ಅಗತ್ಯವಿದೆ. ಪ್ರಕಟವಾದ ಲೇಖನಗಳು, ಅಲ್ಲಿನ ವಿಚಾರಗಳ ಬಗ್ಗೆ ನಿಮ್ಮ ನೇರ, ಖಚಿತ ಅಭಿಪ್ರಾಯ ಬರೆದು ಕಳಿಸುವ ಮೂಲಕ ವಾಗ್ವಾದ ಬೆಳೆಸಬಹುದು. ಅಂತೆಯೇ ಯಾವುದೇ ರಂಗದ ಹಿರಿಯ ಕಿರಿಯರು ತಮ್ಮ ಅನುಭವ, ಆಲೋಚನೆಗಳನ್ನು ಲೇಖನ ಅಥವ ಟಿಪ್ಪಣಿ ರೂಪದಲ್ಲಿ ತಾವೇ ಸ್ಫುಟವಾಗಿ ಬರೆದು ಇಲ್ಲವೆ ಹೇಳಿ ಬರೆಸಿ ಕೂಡ ಕಳಿಸಿಕೊಡಬಹುದು.

ಈ ಮೂಲಕ ಕನ್ನಡ ಭಾಷೆ, ಜ್ಞಾನ, ವಿಜ್ಞಾನ ಇನ್ನಷ್ಟು ಎತ್ತರಕ್ಕೆ ಒಯ್ಯುವ ಜವಾಬ್ದಾರಿ ನಮ್ಮ ಮೇಲಿದೆ. ಅಕ್ಷರ, ಭಾಷೆ ಎಂಬುದು ಅಭಿವ್ಯಕ್ತಿಯ ಮಾಧ್ಯಮವಾಗಿ ಎಲ್ಲ ಕ್ಷೇತ್ರದವರು ನಿರ್ಭಿಡೆಯಿಂದ ಬಳಸಿಕೊಳ್ಳಬೇಕಾದ, ಮಡಿಸಿಕೊಳ್ಳಬೇಕಾದ ಶೈಕ್ಷಣಿಕ ಅನಿವಾರ್ಯತೆ ನಮ್ಮ ಮುಂದೆ ಇವೆ. ಅದಕ್ಕಾಗಿ 'ಪ್ರಜಾಸಾಹಿತ್ಯ'ದ ಪುಟಗಳು ಸಿದ್ಧವಾಗಿವೆ. ಸಂಪಾದಕ ಕೂಡ ನಿಮ್ಮಲ್ಲಿ ಒಬ್ಬನಾಗಿ ಬೆಳೆಯುವ ಆಸೆ ಹೊತ್ತಿರುವವ. ಬದಲಾಗುವುದು, ಗಟ್ಟಿಯಾಗುವುದು ಪರಸ್ಪರ ಮುಖಾಮುಖಿಯಾದಾಗಲೇ. ಆ ಅವಕಾಶ ನಮಗೆ ಕೂಡಿ ಬರಲಿ.

ಸಂಪಾದಕ

೭

ಗ್ರಂಥಪಾಲಕ ಖಾಸನೀಸರಿಂದ 'ಪುಸ್ತಕಮನೆ' ಭೇಟಿ

ಪುಸ್ತಕಮನೆ ಯಲ್ಲಿ ಪ್ರದರ್ಶಿತವಾದ, ಅಪೂರ್ವ ಹಾಗೂ ಅಪರೂಪದ ಅನೇಕ ಕೃತಿಗಳ ಸಮಗ್ರ ಸಂಗ್ರಹ, ನನಗೆ ದಂಗುಬಡಿಸಿತು. ಗ್ರಂಥಪಾಲಕನಾಗಿದ್ದ ನನಗೆ ಇಂಥ ಪರಿಪೂರ್ಣ ಸಂಗ್ರಹ, ನಗರದ ಯಾವುದೇ ಪ್ರಮುಖ ಗ್ರಂಥಾಲಯದಲ್ಲಿ ನೋಡಸಿಕ್ಕಿಲ್ಲ. ಆರ್ಥಿಕವಾಗಿ, ಅನುತ್ಪಾದಕವಾದ ಈ 'ಛಂದ' (hobby)ವನ್ನು ಬೆಳೆಸಿಕೊಂಡು, ಹಣವನ್ನು ಸುರಿದು, ಇಂಥದೊಂದು ಗ್ರಂಥಸಂಗ್ರಹವನ್ನು ಕಟ್ಟುವದು, ಶ್ರೀಮಂತರಿಗೇ ಸಾಧ್ಯವಾಗಬಹುದಾದ ಕೆಲಸವನ್ನು, ಹರಿಹರಪ್ರಿಯರು ತಮ್ಮ ಸೀಮಿತ ಸಂಪಾದನೆಯಲ್ಲಿ ಹಲವಾರು ವೈಯಕ್ತಿಕ ಸುಖಸೌಕರ್ಯಗಳನ್ನು ತ್ಯಜಿಸಿ, ಈ ಸಂಗ್ರಹವನ್ನು ಬೆಳೆಸಿರಲು ಸಾಧ್ಯ. ಇದಕ್ಕಾಗಿ ಅವರನ್ನು ಎಷ್ಟು ಅಭಿನಂದಿಸಿದರೂ ಕಡಿಮೆಯೇ !

ಪುಸ್ತಕಮನೆ ಯಲ್ಲಿಯ ಈ ಸರಸ್ವತಿ ಭಂಡಾರ, ನಾಡಿನ ಅನೇಕ ಸಂಶೋಧಕರನ್ನು ತನ್ನೆಡೆ ಆಕರ್ಷಿಸುವುದು ಖಂಡಿತ. ನಾಡಿನ ಸಹ ಲೇಖಕರು ಈ ಸಂಗ್ರಹ ಇನ್ನೂ ಹೆಚ್ಚು ಉಪಯುಕ್ತವಾಗಿ ಬೆಳೆಯುವಂತೆ ಮಾಡಲು, ತಮ್ಮಲ್ಲಿನ ಕೆಲವಾದರೂ ಸಂಗ್ರಾಹ್ಯ ಪುಸ್ತಕಗಳನ್ನು ಪುಸ್ತಕಮನೆಗೆ ಗೆ ಕಾಣಿಕೆಯಾಗಿ ಕೊಡಬೇಕು. ಹರಿಹರಪ್ರಿಯ ಬರಹದಲ್ಲೇ ಬದುಕುತ್ತಿದ್ದಾರೆ, ಮಾಸಾಶನ ನೀಡಿ ಉಪಕರಿಸಿ ಎಂದು ಕುವೆಂಪು, ಚದುರಂಗರು ಮಾಡಿದ ಶಿಫಾರಸ್ಸುಗಳನ್ನು ನಮ್ಮ ಸರಕಾರ ಗಂಭೀರವಾಗಿ ತೆಗೆದುಕೊಂಡು, ಆ ದಿಕ್ಕಿನಲ್ಲಿ ಕಾರ್ಯೋನ್ಮುಖವಾಗಬೇಕು. ಸ್ವಾಯತ್ತ ಸಂಸ್ಥೆಗಳು ಮಾಡಲಿಕ್ಕಾಗದ ಮಹತ್ವದ ಕೆಲಸವನ್ನು ಹರಿಹರಪ್ರಿಯರು ಏಕಾಕಿಯಾಗಿ ಮಾಡಿ ತೋರಿಸಿದ್ದಾರೆ. ಲೇಖನ, ಪ್ರಕಾಶನ, ರಾಜ-ಕಾರಣ, ಸಮಾಜಸೇವೆ – ಹೀಗೆ ಹಲವಾರು ಸ್ತುತ್ಯ ಅಭಿರುಚಿಗಳು, ಹರಿಹರಪ್ರಿಯರ ವ್ಯಕ್ತಿತ್ವದಲ್ಲಿ ಮೇಳವಿಸಿವೆ. ಇವುಗಳ ವಿಕಸನಕ್ಕೆ ತಕ್ಕ ಸೂಕ್ತ ವಾತಾವರಣವನ್ನು, ಆರ್ಥಿಕ ಸಹಾಯವನ್ನು, ನಾಡಿನವರು ದೊರಕಿಸಿಕೊಡಬೇಕು. ಹಾಗೂ, ಇದೇ ರೀತಿ ಇವರ ಬಹುಮುಖ ಪ್ರತಿಭೆಯನ್ನು ಸಂಸ್ಥೆಗಳು ಹಾಗೂ ಸರಕಾರವು ಗುರುತಿಸಿ, ಅವರಿಗೆ ಅನುರೂಪವಾದ ಮನ್ನಣೆ, ಪುರಸ್ಕಾರಗಳನ್ನು ಸಲ್ಲಿಸಬೇಕು.

ಈ ಮೂಲಕ ಶ್ರೀ ಹರಿಹರಪ್ರಿಯರಿಗೆ ಸರ್ವಾಂಗೀಣ ಪ್ರಗತಿಯನ್ನು, ಅದರ ಫಲವಾಗಿ ಕೀರ್ತಿಯನ್ನು ಹಾರೈಸುತ್ತೇನೆ.

ರಾಘವೇಂದ್ರ ಖಾಸನೀಸ

೮

ಮೂವತ್ತು ವರ್ಷದ ಹಿಂದಿನ ಕೆಲ ಬರಹಗಾರರು

ಹರಿಹರಪ್ರಿಯ

ಅದು ೧೯೭೫-೬. ತುರ್ತು ಪರಿಸ್ಥಿತಿ ಸಂದರ್ಭ. ದಲಿತ ಬಂಡಾಯದ ವಾಸನೆಯೂ ಇರಲಿಲ್ಲ. ಆಗ ನನಗೆ ೨೫ರ ವಯಸ್ಸು. "ಪುಸ್ತಕಮನೆ" ಕಲ್ಪನೆ ಇರಲಿ, ಗ್ರಂಥಾಲಯದ ಹೊಸ್ತಿಲೂ ತುಳಿದದ್ದಿಲ್ಲ. ಆದರೂ ಗ್ರಂಥಾಲಯ ಕುರಿತೇ ಅಭಿನಂದನಾ ಗ್ರಂಥದ ನೆಪದಲ್ಲಿ, ಒಂದು ಸಂಕಲನ ರೂಪುಗೊಳಿಸಿದ್ದು. ಅದಕ್ಕೆ ಬರೆದ ಲೇಖಕರ ಪರಿಚಯ, ಬಹಿರಂಗಗೊಳ್ಳದೆಯೇ ಸ್ಫೋಟಿಸಿತು, ಕನ್ನಡದ ನೆಲ ಕಂಪಿಸಿತು. ೩೦ ವರ್ಷಗಳ ಪರ್ಯಂತರವೂ ತಲೆ ಎತ್ತದಂತೆ, ಇವನಾರವ, ಇವನಾರವ ಎಂದೇ ಬದುಕಗೊಡದಂತೆ ಅಕ್ಷರಲೋಕ ನೋಡಿಕೊಂಡಿತು. ಬರೆದದ್ದೇ ತಪ್ಪಾಯಿತೊ, ಬರೆದದ್ದರಲ್ಲಿ ತಪ್ಪಿತ್ತೊ--ಈಗಿನ, ಪ್ರಜ್ಞಾವಂತ ಓದುಗರು, ಕನ್ನಡ ಕರ್ನಾಟಕ ಕನ್ನಡಿಗರ ಬಗ್ಗೆ ಪ್ರೀತಿ ವಿಶ್ವಾಸ ಗೌರವ ಇರುವವರು ಹೇಳಬೇಕು, ಬಾಯಿಬಿಡಬೇಕು. ಒಂದಂತೂ ಸತ್ಯ : ಸತ್ಯ ಕಾಣುವ, ಹೇಳುವ ದಿಸೆಯಲ್ಲಿ ಸತ್ಯಕ್ಕೆ ಹೆದರಿದರೊ, ಸತ್ಯ ಹೇಳುವವನಿಗೆ ಹೆದರಿದರೊ ಅಂತೂ ಒಂದು ಗ್ರಂಥ, ಅದರ ಸಂಪಾದಕ ಕನ್ನಡ ನಾಡಿನಲ್ಲಿ ಹೇಳಹೆಸರಿಲ್ಲದಂತಾಯಿತು. ಹೀಗೂ ಉಂಟೆ, ಹೀಗೂ ನಡೆದುಹೋಯಿತೆ, ಹೀಗಾಯಿತೆ ಒಬ್ಬನ ಬಾಳು - ಎಂಬುದನ್ನು ಇನ್ನೂ ೩೦ ವರ್ಷಗಳ ನಂತರವೂ ತಿಳಿಯಲಿ ಎಂಬುದಕ್ಕಾಗಿಯೇ ಯಥಾವತ್ ಪ್ರಕಟಿಸಲಾಗುತ್ತಿದೆ.

ಸಂಪಾದಕ

ಕುವೆಂಪು

ದೇಶವಿದೇಶಗಳ ಪ್ರವಾಸಿಯಾಗಿ, ಜನತೆಯೊಡನೆ ಕಲೆತು ಬಲಿತ, ಪ್ರಯೋಗ ಜೀವಿ ಶಿವರಾಮ ಕಾರಂತರಿಗಿಂತ ನಿಮ್ಮ ಬಗ್ಗೆ ಅನುಮಾನ, ಆರೋಪ, ಆಕ್ಷೇಪಗಳು ತುಂಬಾ. ಅದರಿಂದಲೇ ನಿಮ್ಮ ಅಧ್ಯಯನಕ್ಕೆ ನಾನು ತೊಡಗಿರುವುದು. ಕಾಲೇಜಿನ ಅಧ್ಯಾಪಕರಾಗಿದ್ದವರು ಪರಿಸ್ಥಿತಿಗಳ ಪ್ರೋದ್ಬಲದಿಂದ ಕುಲಪತಿಯಾಗುವವರೆಗೆ ಕನ್ನಡ ಭಾಷೆ, ಶಿಕ್ಷಣ ಮಾಧ್ಯಮಗಳ ಸುಧಾರಣೆ ಕೈಗೊಂಡು, 'ಮಾನಸಗಂಗೋತ್ರಿ'ಯ ರೂಪ ವಿನ್ಯಾಸ ಬೆಳವಣಿಗೆಗೆ ಸಂಪೂರ್ಣ ಕಾರಣರಾದ ನಿಮ್ಮ ಬಗ್ಗೆ ಅಪಾರ ಗೌರವವಿದೆ. ಆದರೆ ಜನತೆಯಿಂದ ಗಾವುದ ದೂರವಿದ್ದೂ, ನಿವೃತ್ತಿ ವೇತನ, ಸರ್ಕಾರದ ಮಾಸಾಶನಗಳನ್ನು ಸ್ವೀಕರಿಸುತ್ತಾ, ಅಭೂತ ಬಂಗಲೆಯಲ್ಲಿ ವಾಸಿಸುತ್ತಾ, ಸದಾ ಕಾರಿನಲ್ಲೇ ಅಡ್ಡಾಡುತ್ತಾ, ಮಠಾಧಿಪತಿಗಳಂತೆ ಬದುಕುತ್ತಿರುವ ನೀವು, ಭಾಷಣಗಳು ಗ್ರಂಥಗಳಿಂದ ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ ಆಗಬೇಕೆನ್ನುವ ಅರ್ಥವಾದರೂ ಏನು ಸ್ವಾಮಿ?

ಎಂ. ಚಿದಾನಂದಮೂರ್ತಿ

ಎಂ.ಎ., ಪಿಎಚ್.ಡಿ., ಪಡೆದಿದ್ದು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವಿರಿ. ನನ್ನ ಪರೋಕ್ಷ ಗುರುಗಳಾಗಿರುವ ನೀವು ಶ್ರೇಷ್ಠ ಸಂಶೋಧಕರೆಂಬ ಬಗ್ಗೆ ಯಾರಿಗೂ ಅನುಮಾನವಿಲ್ಲ. ಸಾಮಾಜಿಕ ಕಳಕಳಿ ತುಂಬಿರುವ ನಿಮ್ಮ ಮೇಲಿನ ಗುಮಾನಿ : ನೀವು ದಿನದಿನಕ್ಕೆ ಆಕ್ರಮಿಸಿಕೊಳ್ಳುತ್ತಿರುವ ಅಧಿಕಾರ ಅಂತಸ್ತುಗಳಿಂದ, ಪಡೆಯುತ್ತಿರುವ ಪಗಾರದಿಂದ, ನಿಮ್ಮ ಸಂಶೋಧನ ವಿದ್ಯಾರ್ಥಿಗಳು ಆರಿಸಿಕೊಂಡ ವಿಷಯ ವಸ್ತುಗಳಿಂದ.

ಡಿ.ಎನ್. ಶಂಕರಭಟ್ಟ

ಒಮ್ಮೆಯೂ ನಿಮ್ಮನ್ನ ಕಾಣದ, ಪೂನಾ ಡೆಕ್ಕನ್ ಕಾಲೇಜಿನಲ್ಲಿ ಭಾಷಾ ಶಾಸ್ತ್ರದ ಅಧ್ಯಾಪಕರಾಗಿರುವ ನಿಮ್ಮ ಬಗ್ಗೆ ಹೆಚ್ಚೇನೂ ತಿಳಿಯದು. ಡಾಕ್ಟರ್ ಭಟ್ಟರೇ, ನಿಮ್ಮ ಎರಡೂ ಭಾಷಾಕೃತಿಗಳನ್ನ ಓದಿರುವೆ. ಎಂ.ಎ., ವಿದ್ಯಾರ್ಥಿಗಳನ್ನೋ, ಪಂಡಿತ ಮಂಡಿತರನ್ನೋ ಉದ್ದೇಶಿಸಿ ಬರೆದ ಅವುಗಳಿಂದ ಡಾ॥ ಚಿದಾನಂದಮೂರ್ತಿಯವರಂತೆ ನೀವು ರೀಡರ್ರೋ, ಪ್ರೊಫೆಸರ್ರೋ ಆಗಬಹುದೇ ಹೊರತು ನಮಗೆ ಬಂದ ಭಾಗ್ಯವೇನು ಸ್ವಾಮಿ?

ಕೆ.ವಿ. ಸುಬ್ಬಣ್ಣ

ಪದವೀಧರರೆಂದು ಕೇಳಿರುವೆ. 'ಅಕ್ಷರ ಪ್ರಕಾಶನ'ದ ಮಾಲೀಕರಾದ ನಿಮ್ಮ ಬಗ್ಗೆ ಪ್ರಕಾಶಕರೆಂಬ ಕಾರಣದಿಂದ ಅಸಮಾಧಾನವಿರುವುದು ಸಹಜ, ಅಡಿಗರಂತಹವರ ಕೈವಾಡವಿರುವುದರಿಂದ. ಆದರೆ ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಪ್ರೌಢತ್ವವಿರುವ; ಸಿನೆಮಾ, ನಾಟಕರಂಗಗಳ ಬಗ್ಗೆ ಅಪಾರ ಪರಿಶ್ರಮ, ತಿಳಿವಳಿಕೆ ಸಂಪಾದಿಸಿರುವ ನಿಮ್ಮ ಬಗ್ಗೆ ಬರಹಗಾರರ ಮೇಲಿನ ವಿಶ್ವಾಸಕ್ಕಿಂತ ಹೆಚ್ಚಿರುವ ಕಾರಣ ಕ್ರಿಯಾಶೀಲರೆಂದು.

ಪಿ. ಲಂಕೇಶ್

ನೀವು ಬೆಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಅಧ್ಯಾಪಕರಾಗಿ ಮಾಡಿರುವ ಘನಕಾರ್ಯಕ್ಕಿಂತ ನಾಡಿನಾದ್ಯಂತ ನನ್ನ ಜನಾಂಗದಲ್ಲಿ ಎಬ್ಬಿಸಿದ ಕೆಚ್ಚು, ರೊಚ್ಚು ಬೇರೆ ಬರಹಗಾರರು ಕರುಬುವಂಥಾದ್ದು. ನಿಮ್ಮ ಬಗ್ಗೆ ನಿಮಗೇ ನಂಬಿಕೆ, ವಿಶ್ವಾಸ ಇಲ್ಲದಿರುವಾಗ ನಿಮ್ಮನ್ನ ಬೇರೆಯವರು, ಬೇರೆಯವರನ್ನ ನೀವು ಒಪ್ಪುವ ಪ್ರಶ್ನೆ ಏಳುವುದೇ ಇಲ್ಲ. ಶರಚ್ಚಂದ್ರ ಚಟರ್ಜಿಯವರ ಪಾತ್ರಗಳ ವೇಷ ಕಟ್ಟುವ ನಿಮ್ಮ ಬಗ್ಗೆ ಏನನ್ನುವುದು ವ್ಯರ್ಥ. ಕಥೆ, ಕಾದಂಬರಿ, ಪದ್ಯ, ನಾಟಕ, ವಿಮರ್ಶೆಗಳಿಂದ ಸಿನಿಮಾದತ್ತ ತಿರುಗಿರುವ ಶೂದ್ರ ಪ್ರಜ್ಞೆಯ ನಿಮಗೆ ಸಾಹಸದ ಹೋರಾಟವೇ ಸರಿ.

ಬನ್ನಂಜೆ ಗೋವಿಂದಾಚಾರ್ಯ

ಹಣ ಸಂಪಾದಿಸುವುದಷ್ಟೇ ಪತ್ರಿಕೆಗಳವರ ಮೂಲಭೂತ ಲಕ್ಷ್ಯವಾಗಿದ್ದರೆ ದರೋಡೆವೃತ್ತಿ ಅವಲಂಬಿಸುವುದು ಮೇಲು ಎಂಬ ಸಲಹೆ ನನ್ನದು. ನೀವು 'ಉದಯವಾಣಿ' ಪ್ರಧಾನ ಉಪಸಂಪಾದಕರೆಂದು, ನನ್ನ ಆತ್ಮೀಯರೆಂದು ಕೇಳಿಕೊಳ್ಳುತ್ತಿರುವೆ : ಸಂಸ್ಕೃತದಲ್ಲಿ ಅಪಾರ ಪಾಂಡಿತ್ಯವುಳ್ಳ ನೀವು ಗೊಡ್ಡು ಸಂಪ್ರದಾಯವಾದಿಗಳಾಗದಿರುವುದೇ ನಿಮ್ಮ ಧೋರಣೆಯನ್ನ ಎತ್ತಿ ಹಿಡಿಯುತ್ತದೆ. ತರುಣ ಜನಾಂಗದ ಬಗ್ಗೆ ನೀವಿರಿಸಿರುವ ವಿಶ್ವಾಸ, ನೀಡುತ್ತಿರುವ ಸಹಕಾರ ಸಾಮಾಜಿಕ ಕಳಕಳಿಯ ಜೀವಂತಿಕೆ ಲಕ್ಷಣ.

ಸೂರ್ಯನಾಥ ಕಾಮತ್

ಎಂ.ಎ., ಪಿಎಚ್.ಡಿ., ಮಾಡಿ ಕೆಲಸಕ್ಕಾಗಿ ಏನೆಲ್ಲ ಬವಣೆಪಟ್ಟಿದ್ದು, ಆಗ ಕೈಗೊಂಡ ಉದ್ಯೋಗಗಳ ಹಂತಹಂತವನ್ನು ನೀವು ವಿವರಿಸಿದ್ದು ಇನ್ನೂ ನೆನಪಿನಲ್ಲಿದೆ. ಈಗ ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಅಧ್ಯಾಪಕರಾಗಿದ್ದೀರಿ. ಕತೆ, ಕಾದಂಬರಿ, ಲಲಿತ ಪ್ರಬಂಧಗಳನ್ನು ಬರೆದಿದ್ದರೂ ಆ ಮಾಧ್ಯಮಗಳಲ್ಲಿ ಮುಂದೆ ಬರಲಾಗಲಿಲ್ಲ. ನಿಮ್ಮ 'ಟೆಕ್ಸ್ಟ್‌ಬುಕ್'ನಂತಹ ಸಂಶೋಧನ ಕೃತಿಗಳನ್ನಾಗಲಿ, ಪತ್ರಿಕೆಗಳಲ್ಲಿ ವಿಧಿಯಿಲ್ಲದೆ ಬರೆಯುತ್ತಿರುವ ವಿಮರ್ಶೆಗಳನ್ನಾಗಲಿ ಓದಿರುವ ನನಗೆ, ನಿಮ್ಮನ್ನ ಸಂಶೋಧಕರು, ವಿಮರ್ಶಕರು ಎಂದು ಕರೆಯಲಾಗದೇ ಇರುವ ಕಾರಣ : ಆಯಾ ಮಾಧ್ಯಮ ಅವಕ್ಕಾಗಿ ದುಡಿದವರು. 'ಪ್ರವಾಸಿ ಕಂಡ ಇಂಡಿಯಾ' ಎಂಬ ಸಂಪುಟಗಳಿಗಿಂತ ಅನೇಕ ವಿಧಗಳಲ್ಲಿ ಶ್ರೇಷ್ಠವಾದ ನಿಮ್ಮ 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಸಂಪುಟಗಳಿಂದ ನಿಮ್ಮಿಂದಲೇ ಆಗಲಿ, ಇತರರಿಂದಾಗಲಿ ಕನ್ನಡ ನಾಡಿನ ನೂತನ ಇತಿಹಾಸ ರಚನೆಯಾದೀತೆಂದು ನಂಬಿದ್ದೇನೆ. ಈ ಕೆಲಸಕ್ಕಾಗಿಯಾದರೂ ನಿಮಗೆ ನಿಜವಾದ ಅರ್ಥದಲ್ಲಿ ನಾಡೇ ಚಿರಋಣಿ. ಇದಕ್ಕೇ ನನ್ನ ಆತ್ಮೀಯರಾದ ನಿಮ್ಮ ಬಗ್ಗೆ ಗೌರವ.

ಸಿ.ಪಿ. ಕೃಷ್ಣಕುಮಾರ್

ಗೆಳೆಯರು ನಿಮ್ಮ ನಿಜವಾದ ಹೆಸರು ಹೇಳಿದ್ದರು ಮರೆತುಹೋಗಿರುವುದಕ್ಕೆ ಕಾರಣ ಹುಡುಕುತ್ತಿರುವೆ. ಎಂ.ಎ., ಮಾಡಿ ಅನೇಕ ವರುಷಗಳಿಂದ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಾಪಕರಾಗಿದ್ದು ಈಗ ಮಾನಸ ಗಂಗೋತ್ರಿಯಲ್ಲಿ ರೀಡರ್ ಆಗಿರುವುದು ತಿಳಿಯಿತು. ಇತ್ತೀಚೆಗೆ ಮಹಾಪ್ರಬಂಧ ಒಪ್ಪಿಸಿ ಪಿಎಚ್.ಡಿ., ಪಡೆದುಕೊಂಡದ್ದು, ಅದರ ಬಗ್ಗೆ ಅಲ್ಲಿಯವರೇ ಪಿಸುಗುಟ್ಟುತ್ತಿದ್ದದ್ದು ನನ್ನಂಥವನಿಗೆ ತಿಳಿಯಲಾರದ ವಿಷಯ. ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯವಿದ್ದೂ ಅನೇಕ ಜೀತದ ಅಧ್ಯಾಪಕರಿಗಿಂತ ಕ್ರಿಯಾಶೀಲರಾಗಿ, ಸುಜನಾ ಅವರಷ್ಟೇ ಪ್ರತಿಭಾಶಾಲಿ ಬರಹಗಾರರಾಗಿ 'ಕುವೆಂಪು ಗುಂಪಿ'ನಿಂದ ಹೊರಬಾರದಿದ್ದುದು ಆತ್ಮೀಯನಾದ ನನಗೆ ವಿಷಾದ ಸಂಗತಿ.

ತಂಗಿರಾಲ ವೆಂಕಟ ಸುಬ್ಬರಾವ್

ಎಂ.ಎ., ಪದವಿ ಜೊತೆಗೆ ಆಂಧ್ರಪ್ರದೇಶದ ವೆಂಕಟೇಶ್ವರ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪಡೆದ ನೀವು ಬೆಂಗಳೂರು ವಿಶ್ವವಿದ್ಯಾಲಯದ ತೆಲುಗು ವಿಭಾಗದ ಮುಖ್ಯಸ್ಥರಾದುದು ಇತ್ತೀಚೆಗೆ. ತೆಲುಗು ಜಾನಪದ ಮಾಧ್ಯಮದಲ್ಲಿ ದುಡಿದು ಹೆಸರು ಮಾಡಿರುವ ನಿಮ್ಮ ಬಗ್ಗೆ ನನಗೆ ಒಳ್ಳೆ ಅಭಿಪ್ರಾಯವಿಲ್ಲ : ನೀವು ನಂಬಿದ ಬ್ರಾಹ್ಮಣ ಮೌಲ್ಯಗಳು, ಆಚರಿಸುವ ಗೊಡ್ಡು ಸಂಪ್ರದಾಯಗಳು-ಇವೇ ಕಾರಣವಾಗಿ.

ಡಿ. ಲಿಂಗಯ್ಯ

ಎಂ.ಎ. ಮಾಡಿ ಬೆಂಗಳೂರು ವಿಶ್ವೇಶ್ವರಪುರಂ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ, ಜನಪದ ಸಾಹಿತ್ಯದ ಬಗ್ಗೆ ಹೆಚ್ಚು ದುಡಿದಿರುವವರಲ್ಲಿ ನೀವು ಪ್ರಮುಖರೆಂದು ಗೊತ್ತು. ಆ ಮಾಧ್ಯಮದ ಹಿನ್ನೆಲೆಯಿಂದ ವಿದ್ಯಾಸಂಸ್ಥೆಗಳನ್ನು ಕುಲಗೆಡಿಸುತ್ತಿರುವ ಪ್ರಭೃತಿಗಳು ನಾಯಿ ಕೊಡೆಗಳಂತೆ ಬೆಳೆಯುತ್ತಿರುವಾಗ ನಿಮ್ಮ ಧ್ಯೇಯ, ಧೋರಣೆ ಬಗ್ಗೆ ನನಗೆ ಪ್ರೀತಿ ವಿಶ್ವಾಸವುಂಟು.

ವಿಜಯಾ

ಲಾಯರ್, ವೈದ್ಯರಂತೆ ಪತ್ರಿಕೋದ್ಯಮಿಗಳೂ ಅಪಾಯಕಾರಿಗಳೆಂದೇ ನನ್ನ ನಿಲುವು. ನೀವು 'ತುಷಾರ'ದ ಸಹಸಂಪಾದಕರೆಂದಾಗಲಿ, 'ಉದಯವಾಣಿ' ದಿನಪತ್ರಿಕೆಯ ಸಿನೆಮಾ ಪ್ರತಿನಿಧಿಯೆಂದಾಗಲಿ ದುಗುಡವಿಲ್ಲ. ತೋಚಿದ್ದು ಗೀಚಿದ್ದೆಲ್ಲ ಪ್ರಕಟಿಸಿಕೊಳ್ಳಬಲ್ಲ ವಾತಾವರಣದಲ್ಲಿ ಕಾಪಾಡಿಕೊಂಡು ಬರುತ್ತಿರುವ ಹತೋಟಿ ಬರವಣಿಗೆಗೆ, ಕಳಕಳಿಯ ಜೀವಂತಿಕೆಗೆ ನಾನು ಮರುಳಾಗಿದ್ದೇನೆ.

ದೊಡ್ಡರಂಗೇಗೌಡ

ಎಸ್.ಎಲ್.ಎನ್. ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿರುವ ನೀವು ಒಂದೆರಡು ಕವನ ಸಂಕಲನಗಳು ಹೊರತಂದಿರುವ ವಿಷಯ ಗೊತ್ತು. ಕವನಗಳು ಏಕೆ ಬರೆಯುತ್ತೇವೆ, ಅದರಿಂದ ಏನಾದೀತೆಂದು ಬರೆಯುವವರಿಗೇ ತಿಳಿಯದಿರುವಾಗ ಓದಿ ಆಗಬೇಕೇನು? ನನ್ನನ್ನು ಕಲಕದ ಅವುಗಳಿಂದ ಸಮಯ ಹಾಳು. ನಿಮ್ಮ ಪರಿಧಿಯಲ್ಲೇ ಸಂಚರಿಸದ ಬಗ್ಗೆ ಹೆಚ್ಚು ತಿಳಿಯದ್ದೇ ಕಾರಣವಿದ್ದೀತು.

ಕೆ.ವಿ. ನಾರಾಯಣ

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಾನು ದಿನಗೂಲಿ ಕೆಲಸದಲ್ಲಿದ್ದಾಗ. ಕನ್ನಡ ಅಧ್ಯಯನ ಕೇಂದ್ರದತ್ತ ಬಂದಾಗ ನಿಮ್ಮ ದರ್ಶನ. ಒಮ್ಮೆ ಶೇಷಶಾಸ್ತ್ರಿಯೋ, ಕಾಳೇಗೌಡ ನಾಗವಾರರೋ ನಿಮ್ಮನ್ನು ಪರಿಚಯಿಸಿದ ನೆನಪು. ಗೆಳೆಯ ವ್ಯಾಸರಾವ್ ಮದುವೆ ದಿನ ಮತ್ತೊಮ್ಮೆ ಪರಿಚಯವಾದಾಗಲೇ ಇಬ್ಬರೂ ಆ ಹಿಂದಿನ ದಿನ ಮರೆತದ್ದರ ಅರಿವು. ಇತ್ತೀಚೆಗೆ ಅಧ್ಯಾಪಕರಾದಿರೆಂದು ಕೇಳಿದೆ. ನಿಮ್ಮ ಬಗ್ಗೆ ವಿಶ್ವಾಸದ ಮಾತುಗಳಾಡುತ್ತಿರುವ ನಿಮ್ಮ ಮಾತಿನಮಲ್ಲ ಸ್ನೇಹಿತರು. ನನಗೂ ಸ್ನೇಹಿತರೆ. ಬರವಣಿಗೆಯಿಂದಲೇ ಶೋಷಿತರ, ದಲಿತರ, ಸಮಾಜದ ಏಳಿಗೆ ಆಗುವಂತಿದ್ದರೆ ಪ್ರತ್ಯೇಕ ವಿಶ್ವವಿದ್ಯಾಲಯವನ್ನೇ ತೆರೆವರೆ ನಡೆದೀತಲ್ಲವೆ?

ಬರಗೂರು ರಾಮಚಂದ್ರಪ್ಪ

ತುಮಕೂರು, ಬೆಂಗಳೂರಿನ ಸರ್ಕಾರಿ ಕಾಲೇಜುಗಳಲ್ಲಿ ಅಧ್ಯಾಪಕರಾಗಿದ್ದಾಗ ನೀವು ಯಾರೆಂದೇ ಗೊತ್ತಿರಲಿಲ್ಲ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ, ಸೆಮಿನಾರುಗಳಲ್ಲಿ ಪ್ರೊಫೆಸರ ಹಿತವರರಾಗಿ ಅಡ್ಡಾಡಿದಾಗಲೇ ನಿಮ್ಮ ಬಗ್ಗೆ ಕುತೂಹಲ. ಸಾಮಾಜಿಕ ಪ್ರಜ್ಞೆಯ ಅರಿವನ್ನ ವಿಶ್ವವಿದ್ಯಾನಿಲಯದ ಜನರ ಮಟ್ಟಕ್ಕೆ ತಂದವರು ನೀವೇ ಎಂದು ನನ್ನ ಮತ. ಗುತ್ತಿಗೆ ಮಾಡಿಕೊಂಡ ಪತ್ರಿಕೆಯಲ್ಲಿ ವಿಮರ್ಶೆ ಬರೆಯುತ್ತಿದ್ದೀರಿ, ಸಿನಿಮಾ ಆಗಲಿರುವ ಕಾದಂಬರಿ, ಕತೆಗಳನ್ನೂ ಬರೆದಿದ್ದೀರಿ. ಒಂದು ಕವನ ಸಂಕಲನ ಹೊರಬಂದಿರುವ ಮಂಪರು. ಅಡ್ಡಿಯಿಲ್ಲ. ಮಡದಿ ಮಕ್ಕಳೊಡನೆ ಕೈತುಂಬಾ ಪಗಾರ ಎಣಿಸಿಕೊಳ್ಳುತ್ತಾ ತಂಟೆ ತಕರಾರಿಲ್ಲದ ಸಿದ್ಧಾಂತಗಳು, ತತ್ವಗಳು ಯಾರು ಬೇಕಾದರೂ ಏಕೆ ಬರೆಯಬಲ್ಲರು ಎಂಬುದು ನಿಮಗೂ ಗೊತ್ತು ತಾನೆ? ನನ್ನ ಆತ್ಮೀಯರಾದ ನಿಮ್ಮ ಮನಸ್ಸು ಎತ್ತ ತುಯ್ಯುತ್ತಿದೆಯೊ?

ಸೀತಾರಾಮ ಜಾಗೀರ್‌ದಾರ್

ಹೈದರಾಬಾದ್ ಉಸ್ಮಾನಿಯ ವಿಶ್ವವಿದ್ಯಾನಿಲಯದ ಎಂ.ಎ., ಪದವೀಧರರಾಗಿ ಮೈಸೂರು ಮಾನಸಗಂಗೋತ್ರಿ ಕನ್ನಡ ಅಧ್ಯಯನ ಸಂಸ್ಥೆಯ ಶಾಸನ ವಿಭಾಗದಲ್ಲಿ ಸಹಾಯಕರಾಗಿದ್ದೀರಷ್ಟೆ ನನ್ನ ತಲೆಮಾರಿನ ಬರಹಗಾರರಾಗಿ, ಮಾನವೀಯ ಬಾಂಧವ್ಯಗಳ ಉದ್ಧಾರದ ಸಮಸ್ಯೆ ಅಮರಿರುವಾಗ ನೀವು, ನಿಮ್ಮ ಕವಿ, ಕವಿತೆಗಳ ಕಾಲ, ಕವಿಯ ಶಬ್ದ.... ಇಂಥವುಗಳ ಬಗ್ಗೆ ಕಚ್ಚಾಡುತ್ತಾ ಇರುವುದರ ಅರ್ಥ ಏನು? ಬೇರೆ ಪ್ರಕಾರಗಳ ಮಂದಿಗಿಂತ ನಿಮ್ಮ ಬಗ್ಗೆ ವಿಶ್ವಾಸ ತೋರುವ ಕಾರಣ ಪ್ರಾಮಾಣಿಕರು, ಸತ್ಯಾನ್ವೇಷಕರೆಂದು ಅಷ್ಟೆ

ವಿ.ಎನ್. ಲಕ್ಷ್ಮೀನಾರಾಯಣ

ಇಂಗ್ಲಿಷ್ ಎಂ.ಎ. ಮಾಡಿರುವುದಾಗಿ ತಿಳಿಯಿತು. ಮೈಸೂರಿಗೆ ಬಂದಿದ್ದಾಗ ಮನೆಗೆ ಕರೆದುಕೊಂಡು ಹೋಗಿದ್ದಿರಿ. ಬಹುಶಃ ಸ್ವಂತ ಮನೆಯೇ ಇದ್ದೀತು, ಇರಲಿ. ನಿರುದ್ಯೋಗದಲ್ಲಿ ತೊಳಲಾಡುತ್ತಿರುವ ನಿಮಗೆ ವಿಶ್ವವಿದ್ಯಾನಿಲಯಗಳೇ ಗತಿಯೆ? ಸ್ವತಂತ್ರ ಉದ್ದಿಮೆಗಳು ನಡೆಸಲು ಸಾಧ್ಯವಿಲ್ಲವೆ? ಬರೆದೇ ಬದುಕುವುದು ಇಲ್ಲಿನ ವಾತಾವರಣದಲ್ಲಿ ದುಸ್ಸಾಧ್ಯ. ಇನ್ನೂ ಪ್ರಕಾಶಕರಾಗಿ ಪ್ರೊಫೆಸರ ಬಾಲ ಹಿಡಿದು ಕಾರು, ಸ್ಕೂಟರ್‌ಗಳು ಇಟ್ಟುಕೊಂಡು ತಿಂದು, ತೇಗಬಹುದು. ಸಾಮಾಜಿಕ ಕಳಕಳಿಯಿರುವ ನಿಮ್ಮ ಬಗ್ಗೆ ಗೌರವವುಂಟು.

ಕೆ. ನಾರಾಯಣ

ಭಾಷಾಶಾಸ್ತ್ರದ ಎಂ.ಎ., ಮಾಡಿ ಪೂನಾ ಡೆಕ್ಕನ್ ಕಾಲೇಜಿನಲ್ಲಿದ್ದು ಮಹಾಪ್ರಬಂಧ ಬರೆದು ಅರ್ಪಿಸಿರುವುದು ಗೊತ್ತು. ಈಗ ಮೈಸೂರು ಮಾನಸ ಗಂಗೋತ್ರಿಯಲ್ಲಿರುವ ಭಾರತೀಯ ಭಾಷಾ ಸಂಸ್ಥಾನವಲ್ಲಿ ಸಹಾಯಕ ಸಂಶೋಧಕರಾಗಿ ಉದ್ಯೋಗಕ್ಕೆ ಸೇರಿಕೊಂಡಿದ್ದೀರಿ. ಇತ್ತೀಚೆಗೆ, ಉದ್ಯೋಗದಲ್ಲಿರುವಂಥವರನ್ನೇ ಮದುವೆ ಆಗಿದ್ದು ನಿಮ್ಮಿಂದಲೇ ತಿಳಿಯಿತು. ಅಂದಮೇಲೆ ಯಾವುದಕ್ಕೆ ಏನು ಕೊರತೆ? ಇಂಥ ನೀವು ಏನು ಮಾಡುವಿರಿ ಎಂದು ನಿರೀಕ್ಷಿಸಬಹುದೆ?

ಬಿಂಡಿಗನವಿಲೆ ನಾರಾಯಣಸ್ವಾಮಿ

ಅಂದು ಕತ್ತಲೆಯಲ್ಲಿ ಕಾಣಿಸಿಕೊಂಡು, ಬಿ.ವಿ. ಕಾರಂತರ ಹಿಂದೆ ಹೊರಟುಹೋದ ನಿಮ್ಮನ್ನ ಇಂದು ಗುರುತಿಸುವುದು ಕಷ್ಟ. ಮಂಗಳೂರಿನ ಆರ್.ಟಿ.ಓ.-ಆಫೀಸಿನಲ್ಲಿ ಕೆಲಸ ಸಿಕ್ಕಿತೆಂದು ಪತ್ರದಲ್ಲಿ ಬರೆದಿದ್ದಿರಿ. ಮೈಸೂರಿನ ನನ್ನ ಆತ್ಮೀಯರೊಬ್ಬರು ನಿಮ್ಮ ಚಟುವಟಿಕೆಗಳ ಬಗ್ಗೆ ಹೇಳಿದ್ದರು. ರಾಮಕೃಷ್ಣ ಆಶ್ರಮದ ಆಸರೆಯಲ್ಲಿ ಬೆಳೆದ ನಿಮ್ಮ ಬಗ್ಗೆ ಗೌರವಕ್ಕಿಂತ ಹೆಚ್ಚಾಗಿ ಅನುಮಾನಗಳು. ಧಾರ್ಮಿಕ, ತಾತ್ವಿಕ ವ್ಯಕ್ತಿಗಳಿಗೆ ಸಾಮಾಜಿಕರ ನೋವು, ಸಂಕಟ ತಟ್ಟೀತೋ?

ಹೊರೆಯಾಲ ದೊರೆಸ್ವಾಮಿ

ಎಂಎ. ಪದವಿ ಪಡೆದು ಮೈಸೂರು ಮಾನಸಗಂಗೋತ್ರಿ ಕನ್ನಡ ಅಧ್ಯಯನ ಸಂಸ್ಥೆ ಹರಿದಾಸ ವಿಭಾಗದಲ್ಲಿ ಸಂಶೋಧನ ಸಹಾಯಕರಾಗಿದ್ದೀರಿ. ನನ್ನಂತೆ ಹಳ್ಳಿಯಿಂದ ಬಂದು ಕಳಕಳಿಯಿಂದ ತೊಳಲುತ್ತಿರುವ ನನ್ನ ತಲೆಮಾರಿನವರೇ ಆದ ನಿಮ್ಮ ಬಗ್ಗೆ ಅಪಾರ ವಿಶ್ವಾಸ. ಬಿಂಡಿಗನವಿಲೆಯಂತಹ ಬ್ರಾಹ್ಮಣ ಪ್ರಜ್ಞೆಯ ಗೆಳೆಯರಿಗಿಂತ ಶೂದ್ರಪ್ರಜ್ಞೆಯ ನಿಮ್ಮ ಬಗ್ಗೆ ನನಗೆ ಹೆಚ್ಚು ಒಲವಿರುವ ಕಾರಣ : ಮಿಡಿಯುವಿರೆಂದು, ಗುರುತಿಸುವುದಕ್ಕಿಂತ ತೆರೆದುಕೊಳ್ಳುವಿರೆಂದು, ಉಪದೇಶಿಸುವುದಕ್ಕಿಂತ ತೊಡಗುವಿರೆಂದು.

ಆರ್. ಶೇಷಶಾಸ್ತ್ರಿ

ನನ್ನ ಆತ್ಮೀಯರಾಗಿರುವುದು : ಎಂ.ಎ., ಮಾಡಿದ ಬೆಂಗಳೂರು ವಿಶ್ವವಿದ್ಯಾಲಯದ ಸಂಶೋಧನ ವಿದ್ಯಾರ್ಥಿಯೆಂದಾಗಲಿ, ಡಾ॥ ಚಿದಾನಂದಮೂರ್ತಿಯವರ ಶಿಷ್ಯನಾಗಿ ಪಿಎಚ್.ಡಿ., ಪಡೆಯಲೆಂದೇ ಮಾಡಲು ಆರಿಸಿಕೊಂಡಿರುವ ವಸ್ತುವಿನಿಂದಲ್ಲ; ನೊಂದವರ, ನೋಯುವವರ ಭುಜಕ್ಕೆ ಭುಜಕೊಡ ಬಲ್ಲರೆಂಬ ಕಾರಣದಿಂದ. ಪಿಎಚ್.ಡಿ. ಮಾಡಿಯೂ ಹಳ್ಳಿಯಲ್ಲಿ ನಿಲ್ಲುವ ನಿಮ್ಮ ಧ್ಯೇಯ ನನಗೆ ಸರ್ವಸಮ್ಮತ. ಇದರಿಂದಲೇ ಪೂರ್ಣಚಂದ್ರ ತೇಜಸ್ವಿ ಅವರ ಬಗ್ಗೆಯೂ ಗೌರವ.

ಆರ್. ಹಾರೀತ

ಮೈಸೂರು ಮೆಡಿಕಲ್ ಕಾಲೇಜಿನ ನಾಲ್ಕನೇ ವರುಷದ ವಿದ್ಯಾರ್ಥಿಯಾಗಿದ್ದು, ಶ್ರೇಷ್ಠ ವಾಕ್ಪಟು ಎಂದು ನಿಮ್ಮೊಡನೆ ನಡೆಸಿದ ಸಂಭಾಷಣೆಯಿಂದ ತಿಳಿಯಿತು. ಲಾಯರುಗಳಂತೆ ಕಿತ್ತುತಿನ್ನುವ ವೈದ್ಯರ ಬಗ್ಗೆಯೂ ನನಗೆ ಹೇಸಿಗೆ. ಈ ಭಾವನೆ ನೀವು ಅಳಿಸಬಲ್ಲಿರೋ? ನೀವು ಕೇವಲ ಮಾತಿನ ಮಲ್ಲರೋ, ಕ್ರಿಯಾಶೀಲರೋ? ಇದು ನಿಮ್ಮ ವೈದ್ಯಕೀಯ ಗೆಳೆಯರೇ ಹಾಕಿದ ಪ್ರಶ್ನೆ.

□

ಅಂಗವಿಕಲರಿಗೆ ಅವಕಾಶ ನೀಡಿ, ಅದ್ಭುತ ಸಾಧನೆ ನೋಡಿ

ಅಂಗವಿಕಲತೆ ದೌರ್ಬಲ್ಯದ ಸಂಕೇತವಲ್ಲ. ಬದಲಾಗಿ ಅದು ಅಂಗವಿಕಲ ಬಂಧುಗಳಲ್ಲಿ ಮನೋಸ್ಥೈರ್ಯ ಹೆಚ್ಚಿಸಿ ಸಾಧನೆಗೆ ಹೆಚ್ಚಿನ ಛಲ ಮೂಡಿಸುವುದು ಅವರ ಗಮನಾರ್ಹ ಸಾಧನೆಗೆ ಪ್ರೇರಣೆಯಾಗಲೆಂದೇ ಪ್ರತಿ ವರ್ಷ ಡಿಸೆಂಬರ್ ೩ ರಂದು ವಿಶ್ವಾದ್ಯಂತ ಅಂಗವಿಕಲರ ದಿನವನ್ನಾಗಿ ಆಚರಿಸಲಾಗುತ್ತಿದೆ.

ಅಂಗವಿಕಲರಿಗಾಗಿ ಅವಕಾಶಗಳು

ರಾಜ್ಯ ಸರ್ಕಾರ ಅಂಗವಿಕಲರ ಕಲ್ಯಾಣಕ್ಕಾಗಿ ರೂಪಿಸಿರುವ ಯೋಜನೆಗಳು :

- ಶ್ರವಣ ಮತ್ತು ದೃಷ್ಟಿದೋಷವುಳ್ಳವರಿಗಾಗಿ ವಿಶೇಷ ಶಾಲೆಗಳನ್ನು ನಡೆಸಲು ಉತ್ತೇಜನ.
- ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ
- ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ
- ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗೆ ಶ್ರವ್ಯ ಗ್ರಂಥಾಲಯದ ಅನುಕೂಲ
- "ಆಧಾರ" ಯೋಜನೆ ಅಡಿಯಲ್ಲಿ ಸ್ವಯಂ ಉದ್ಯೋಗಕ್ಕಾಗಿ ಅವಕಾಶ
- ಸ್ವಯಂ ಉದ್ಯೋಗ ಯೋಜನೆ ಅಡಿಯಲ್ಲಿ ಉಚಿತ ದೂರವಾಣಿ ಬೂತ್ ಸೌಲಭ್ಯ
- ಸ್ವಯಂ ಉದ್ಯೋಗ ಅಥವಾ ಆದಾಯ ತರುವ ಉದ್ಯೋಗಗಳಿಗಾಗಿ ಸಾಲ ಸೌಕರ್ಯ
- ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮೆ ಯೋಜನೆ
- ಮಾಸಿಕ ನಿರ್ವಹಣೆ ಭತ್ಯೆಯ ನೀಡಿಕೆ
- ಅಂಗವಿಕಲರಿಗೆ ಶೇ. ೫ ರಷ್ಟು ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿ
- ಸಾಧನ ಸಲಕರಣೆಗಳ ಹಾಗೂ ತ್ರಿಚಕ್ರ ವಾಹನಗಳ ಉಚಿತ ಪೂರೈಕೆ
- ಅಂಗವಿಕಲರಿಗೆ ರಿಯಾಯಿತಿ ದರದಲ್ಲಿ ಬಸ್‌ಪಾಸ್

ಕರ್ನಾಟಕ ವಾರ್ತೆ

'ಪ್ರಜಾಸಾಹಿತ್ಯ' ಪತ್ರಿಕೆಗೆ ತಕ್ಷಣ ನೆರವಾದವರು

•

೨೦೦೭ ಮೇ ೯ನೇ ಸಂಚಿಕೆಯ ಮನವಿಗೆ ಓಗೊಟ್ಟು, ದಂಪತಿ ಸಮೇತ, ಬೆಂಗಳೂರಿನ ಉತ್ತರದ ತುದಿಯ ಟಾಟಾ ನಗರದಿಂದ ಧಾವಿಸಿಬಂದವರು ಟಿ.ಎಸ್. ರಾಮಚಂದ್ರಮೂರ್ತಿಯವರು. 'ಪುಸ್ತಕಮನೆ' ಸಂಗ್ರಹ ಇನ್ನಷ್ಟು ಬೆಳೆಸಲು ಕೂಡಲೇ ಒಂದು ಸಾವಿರ ರೂ.ಗಳನ್ನು ನೀಡಿದ ಮೂರ್ತಿಯವರು, ಪತ್ರಿಕೆ ಎರಡನೇ ವರ್ಷವೂ ಹೊರಬರಲು ಹನ್ನೆರಡು ಸಾವಿರ ರೂ. ಗಳನ್ನು ನೀಡುವ ಭರವಸೆ ನೀಡಿದ್ದಾರೆ. ಶಿಕ್ಷಣ ತಜ್ಞರು, ಬರಹಗಾರರು ಆದ ಮೂರ್ತಿಯವರು, ದೇಶ ವಿದೇಶಗಳ ಶಿಕ್ಷಣ ಸಂಸ್ಥೆಗಳಲ್ಲಿ ಅವಿರತವಾಗಿ ಸೇವೆ ಸಲ್ಲಿಸಿದವರೂ, ಸದಾ ಪರ್ಯಟನೆ ಮಾಡುತ್ತಿರುವವರೂ. ಪತ್ರಿಕೆಗೆ ಹೃದಯ ಶ್ರೀಮಂತರನ್ನು, ಚಂದಾದಾರರನ್ನು ಹುಡುಕಿಕೊಡುವ ಉಪಕಾರ ಕೂಡ ಮಾಡುತ್ತಿದ್ದಾರೆ.

ಅಂತೆಯೇ, ಈಗಾಗಲೇ ಮೊದಲ ವರ್ಷದ ಸಾಲದಿಂದ ಹೊರಬರಲು ದೂರದ ಮಿತ್ರರೊಬ್ಬರು, ಕನ್ನಡದ ಕೆಲಸ ಇದು ನಿಲ್ಲಬಾರದು ಎಂದು ಅಯಿದು ಸಾವಿರ ರೂ.ಗಳನ್ನು; ಹೊಟೆಲ್ ಉದ್ದಿಮೆದಾರರು ಸಾಹಿತಿಗಳು ಆಪ್ತರು ಆದ ಕೆ.ವಿ. ಕೃಷ್ಣಯ್ಯ ಅವರು ಮೂರು ಸಾವಿರ ರೂ.ಗಳನ್ನು ತಕ್ಷಣ ನೀಡಿ ನೆರವಾಗಿದ್ದಾರೆ. ಲೇಖಕಿ, ಗೆಳತಿ ವಿಜಯ ಸುಬ್ಬರಾಜ್; ಕೆಜಿಎಫ್‌ನಿಂದ ಗೃಹಿಣಿ, ಸಾಹಿತ್ಯಾಭಿಮಾನಿ ಮಾಯಾ ಜಯಪ್ರಕಾಶ್ ಒಂದೊಂದು ಸಾವಿರ ರೂ.ಗಳನ್ನು ನೀಡಿ, ಪ್ರೋತ್ಸಾಹಿಸಿದ್ದಾರೆ.

ಇಷ್ಟಾಗಿ, ಇಷ್ಟರಿಂದಲೇ 'ಪ್ರಜಾಸಾಹಿತ್ಯ' ಎರಡನೇ ವರ್ಷವೂ ಪ್ರಕಟಿಸಲು ಸಾಧ್ಯವೋ? ನನ್ನ ನಿರ್ಧಾರ ನಿಮ್ಮ ಮೇಲೆ ಅವಲಂಬಿಸಿದೆ. ಹಳೆಯ ಚಂದಾದಾರರು ಕೂಡಲೇ (ರೂ. ೨೫೦/-) ಚಂದಾ ಕಳುಹಿಸಿ ಹಾಗೂ ತಮ್ಮ ಗುರುತುಪರಿಚಿತರನ್ನು ಚಂದಾದಾರರನ್ನಾಗಿ (ರೂ. ೫೦೦/-) ಮಾಡಿ ಉಪಕರಿಸಬೇಕಾಗಿ ವಿನಂತಿ.

ಸಂಪಾದಕ

